ಸಂಪುಟ: 05 ಸಂಚಿಕೆ: 245 ಪುಟಗಳು: 08 ಬುಧವಾರ 19 ನವೆಂಬರ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

**ಮುಂಜಾನೆ ಮಾತು**

ಯಶಸ್ಸಿನ ಬಗೆಗಿನ ನನ್ನ ವ್ಯಾಖ್ಯಾನವು ಸಾಕಷ್ಟು ಪ್ರಬಲವಾಗಿದ್ದರೆ ಸೋಲು ನನ್ನನ್ನು ಎಂದಿಗೂ ಹಿಂದಿಕ್ಕುವುದಿಲ್ಲ.


# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಕಾಂಗ್ರೆಸ್ ಪಾದಯಾತ್ರೆಯಿಂದಲೇ ಮೇಕೆದಾಟು ಯೋಜನೆಗೆ ಹಿನ್ನಡೆ

• ಉದಯವಾಹಿನಿ, ಬೆಂಗಳೂರು

ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಕೇಂದ್ರದ ಜೊತೆಗೆ ವಿಶ್ವಾಸದಲ್ಲಿ ಸೌಹಾರ್ದತೆಯಲ್ಲಿ ಅನುಮತಿ ಪಡೆದರೆ ಮುಂದೆ ಕಾನೂನು ಹೋರಾಟದಲ್ಲಿ ಅನುಕೂಲವಾಗಲಿದೆ. ಇದರಲ್ಲಿ ರಾಜಕೀಯ ಬೆರೆಸಿದರೆ, ರಾಜಕೀಯ ಪ್ರತಿಷ್ಠೆ ಮಾಡಿದರೆ ರಾಜ್ಯದ ಹಿತಾಸಕ್ತಿಗೆ ಧಕ್ಕೆಯಾಗುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ್ ಬೊಮ್ಮಾಯಿ ಹೇಳಿದ್ದಾರೆ. ಮೇಕೆದಾಟು ಯೋಜನೆ ಇದು ಬಹಳ ವರ್ಷದ ರಾಜ್ಯದ ಜನರ



ಕನಸಾಗಿದೆ. ಇದು 1996ರಿಂದ ಆರಂಭವಾಗಿದ್ದು. ಪವರ್ ಪ್ರಾಜೆಕ್ಟ್‌ನಿಂದ ಆರಂಭವಾಗಿದ್ದು. ನಾನು ನೀರಾವರಿ ಸಚಿವ ಆಗಿದ್ದಾಗ ಬಹಳಷ್ಟು ಪ್ರದೇಶ ಮುಳುಗಡೆ ಆಗುತ್ತದೆ ಅಂತ ಕೇಳಿಬಂದಿತ್ತು. ಅದನ್ನು ಬದಲಾವಣೆ ಮಾಡಿ ಡಿಪಿಆರ್ ಸಿದ್ದ ಪಡೆಸಿದ್ದೆವು. ಕಾಂಗ್ರೆಸ್‌ನವರು ಪಾದಯಾತ್ರೆ ಮಾಡದಿದ್ದರೆ ಇಷ್ಟೊತ್ತಿಗೆ ಯೋಜನೆ ಒಂದು ಹಂತಕ್ಕೆ ಬರುತ್ತಿತ್ತು.

ಇವರು ಪಾದಯಾತ್ರೆ ಮಾಡಿದ್ದರಿಂದ ತಮಿಳುನಾಡಿನವರು ಮಿಸ್ ಲೀನಿಯಸ್ ಕೇಸ್ ಹಾಕಿದ್ದಾರೆ. ತಮಿಳುನಾಡು ಕೇಸು ನಿಲ್ಲುವುದಿಲ್ಲ ಎಂದು ನಮಗೆ ಗೊತ್ತಿದೆ.

**ಜನರ ಪರ ಕೆಲಸ ಮಾಡಲಿ**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರನ್ನು ಭೇಟಿ ಮಾಡಿರುವ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಸಿಎಂ ಪ್ರಧಾನಿಯವರನ್ನು ಭೇಟಿ ಮಾಡಿರುವ ಸಂಪೂರ್ಣ ಮಾಹಿತಿ ನೀಡಿದರೆ ನಮ್ಮಿಂದ ಅಗತ್ಯ ಸಹಕಾರ ನೀಡಲಾಗುವುದು ಎಂದು ಹೇಳಿದರು. ರಾಜ್ಯ ಸರ್ಕಾರ ಜನರ ಸಮಸ್ಯೆಗಳ ಬಗ್ಗೆ ಯೋಚಿಸದೆ ಸಂಪುಟ ಪುನಾರಚನೆ, ಸಿಎಂ ಬದಲಾವಣೆಯಲ್ಲಿ ಮುಳುಗಿದೆ ಎನ್ನುವ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ರಾಜ್ಯ ಸರ್ಕಾರ ಈಗಲಾದರೂ ಪುನರ್ ರಚನೆ, ಸಿಎಂ ಬದಲಾವಣೆ ವಿಚಾರ ಬದಿಗಿಟ್ಟು ಜನರ ಪರ ಕೆಲಸ ಮಾಡಲಿ ಎಂದು ಆಗ್ರಹಿಸಿದರು.

ಆದ್ದರಿಂದ ನಾವು ಬಹಳ ಬುದ್ಧಿವಂತಿಕೆಯಿಂದ ಎಲ್ಲಾ ಹಂತಗಳನ್ನು ಮುಗಿಸಿಕೊಳ್ಳಬೇಕು. ಯಾಕೆಂದರೆ ಈಗ ನಡೆಯುವ ಬೆಳವಣಿಗೆಯಲ್ಲಿ ಏನಾದರೂ ವ್ಯತ್ಯಾಸವಾದರೆ ತಮಿಳುನಾಡಿನವರು ಮತ್ತೆ ಕೋರ್ಟ್‌ಗೆ ಹೋಗುತ್ತಾರೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಇದನ್ನು ಸಿಡಬ್ಲ್ಯುಸಿಯಲ್ಲಿ ಒಪ್ಪಿಗೆ ನೀಡಬೇಕಾದರೆ ಸಿಡಬ್ಲ್ಯುಎಂಎ ದಲ್ಲಿ ಒಪ್ಪಿಗೆ ನೀಡಬೇಕಾಗುತ್ತದೆ. ಅಪ್ರೂವಲ್ ಕೊಡುವಾಗ ಎಲ್ಲಿ ನಿಂತಿತ್ತೋ, ಅಲ್ಲಿಂದಲೇ ಪ್ರಾರಂಭ ಮಾಡಬೇಕು ಎಂದು ಮನವಿ ಮಾಡುತ್ತೇನೆ ಎಂದರು. ರಾಜ್ಯ ಸರ್ಕಾರ ಕೇಂದ್ರದ ಜೊತೆಗೆ ವಿಶ್ವಾಸದಲ್ಲಿ ಸೌಹಾರ್ದತೆಯಲ್ಲಿ ಈ ಮಹತ್ವದ ಯೋಜನೆಗೆ ಅನುಮತಿ ಪಡೆದರೆ ಮುಂದೆ ಕಾನೂನು ಹೋರಾಟದಲ್ಲಿ ಅನುಕೂಲವಾಗಲಿದೆ. ಇದರಲ್ಲಿ ರಾಜಕೀಯ ಬೆರೆಸಿದರೆ, ರಾಜಕೀಯ ಪ್ರತಿಷ್ಠೆ ಮಾಡಿದರೆ ರಾಜ್ಯದ ಹಿತಾಸಕ್ತಿಗೆ ಧಕ್ಕೆಯಾಗುತ್ತದೆ ಎಂದು ಹೇಳಿದರು.

## ಪ್ರತ್ಯೇಕ ಕೇಡರ್ ಸೃಷ್ಟಿಸಿ 15 ವನ್ಯಜೀವಿ ವೈದ್ಯರ ನೇಮಕ

• ಉದಯವಾಹಿನಿ, ಬೆಂಗಳೂರು

ಮೃಗಾಲಯ ಮತ್ತು ಆನೆ ಶಿಬಿರಗಳಲ್ಲಿ ವನ್ಯಜೀವಿ ವೈದ್ಯರ ಕೊರತೆ ಇದ್ದು, ಪ್ರತ್ಯೇಕ ಕೇಡರ್ ಸೃಷ್ಟಿಸಿ ಶೀಘ್ರವೇ 15 ವನ್ಯಜೀವಿ ವೈದ್ಯರ ನೇಮಕ ಮಾಡಿಕೊಳ್ಳಲು ಮುಖ್ಯಮಂತ್ರಿಗಳು ತಾತ್ವಿಕ ಒಪ್ಪಿಗೆ ನೀಡಿದ್ದಾರೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ತಿಳಿಸಿದ್ದಾರೆ. ಒಂಬತ್ತೂ ಮೃಗಾಲಯಗಳ ಮುಖ್ಯಸ್ಥರೊಂದಿಗೆ ಮಂಗಳವಾರ ವಿಡಿಯೊ ಸಂವಾದ ಮೂಲಕ ಸಭೆ ನಡೆಸಿದ ಅವರು, ವನ್ಯಜೀವಿ ವೈದ್ಯರ ನೇಮಕ ಆಗುವವರೆಗೂ ಇರುವ ಪಶುವೈದ್ಯರಿಂದಲೇ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಕಿತ್ತೂರು ರಾಣಿ ಚೆನ್ನಮ್ಮ ಮೃಗಾಲಯದಲ್ಲಿ ಕೃಷ್ಣಮೃಗಗಳ ಸಾವು ಪ್ರಕರಣಕ್ಕೆ ರೋಗ-ಬ್ಯಾಕ್ಟೀರಿಯಾ ಸೋಂಕು ಕಾರಣವಾಗಿದೆ ಎಂದು ವೈದ್ಯರು ದೃಢಪಡಿಸಿದ್ದು, ಈ ಸೋಂಕು ಗಾಳಿಯಿಂದ, ನೀರಿನಿಂದ, ಆಹಾರದಿಂದ ಅಥವಾ ಪ್ರಾಣಿ ಪಾಲಕರಿಂದ ಪಸರಿಸಿದೆಯೇ ಎಂಬ ಬಗ್ಗೆ ಅಧ್ಯಯನ ನಡೆಸುವಂತೆ ಮತ್ತು ಬೇರೆ ಪ್ರಾಣಿಗಳಿಗೆ ಪಸರಿಸದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಮೃಗಾಲಯ, ವನ್ಯಜೀವಿಧಾಮಗಳಲ್ಲಿ ಪ್ರಾಣಿಗಳು ಮೃತಪಟ್ಟರೆ ವಿಳಂಬ ಮಾಡದೆ ಲೆಕ್ಕ ಪರಿಶೋಧನೆ ಮಾಡಿಸಿ, ಸರಕಾರಕ್ಕೆ ಮಾಹಿತಿ ನೀಡಬೇಕು. ಬೆಳಗಾವಿಯಲ್ಲಿ 31 ಕೃಷ್ಣ ಮೃಗಗಳ ಸಾವು ಎಚ್ಚರಿಕೆಯ ಗಂಟೆಯಾಗಿದ್ದು, ಉಳಿದ 7 ಕೃಷ್ಣಮೃಗಗಳಿಗೂ ಸೋಂಕಿರುವ ಕಾರಣ ಅವುಗಳಿಗೆ ಅಗತ್ಯ ಚಿಕಿತ್ಸೆ ನೀಡಲು ಹಾಗೂ ರಾಜ್ಯದ ಎಲ್ಲಾ ಮೃಗಾಲಯಗಳಲ್ಲೂ ಮುಂಜಾಗರೂಕತಾ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

## ಕೆ-ಸೆಟ್ ಫಲಿತಾಂಶದ ಮರು ಪರಿಶೀಲನೆಗೆ ಹೈ ನಿರ್ದೇಶನ

• ಉದಯವಾಹಿನಿ, ಬೆಂಗಳೂರು

ಕೆ-ಸೆಟ್ (ಕೆಎಸ್‌ಇಟಿ) ಫಲಿತಾಂಶಗಳ ಘೋಷಣೆ ಕಾರ್ಯವಿಧಾನ ಮತ್ತು ಮಾನದಂಡಗಳನ್ನು ಮರುಪರಿಶೀಲಿಸುವಂತೆ ಕರ್ನಾಟಕ ರಾಜ್ಯ ಅರ್ಹತಾ ಪರೀಕ್ಷೆ (ಕೆಎಸ್‌ಇಟಿ) ಕೇಂದ್ರ, ಮೈಸೂರು ವಿಶ್ವವಿದ್ಯಾಲಯ ಹಾಗೂ ವಿಶ್ವವಿದ್ಯಾಲಯ ಅನುದಾನ ಆಯೋಗಕ್ಕೆ (ಯುಜಿಸಿ) ಹೈಕೋರ್ಟ್ ನಿರ್ದೇಶಿಸಿದೆ. ಜತೆಗೆ, ಫಲಿತಾಂಶಗಳನ್ನು ಘೋಷಿಸುವಾಗ ಮತ್ತು ಅಭ್ಯರ್ಥಿಗಳನ್ನು ವಿಷಯವಾರು ಮತ್ತು ವರ್ಗವಾರು ಅರ್ಹರು ಎಂದು ಪ್ರಮಾಣೀಕರಿಸುವಾಗ 1990ರ ಕರ್ನಾಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳ (ಮೀಸಲು ಮತ್ತು ನೇಮಕ ಇತ್ಯಾದಿ) ಕಾಯ್ದೆಯಲ್ಲಿ ಕಡ್ಡಾಯವಾಗಿ ನಿಗದಿಪಡಿಸಿದ ಮೀಸಲಾತಿ ನಿಯಮವನ್ನು ಅನುಸರಿಸಲಾಗಿದೆಯೇ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕೆಂದು ನ್ಯಾಯಾಲಯ ಆದೇಶಿಸಿದೆ. ಬೆಂಗಳೂರಿನ ಎ. ಗೋಪಾಲ ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ಭಾಗಶಃ ಮಾನ್ಯ ಮಾಡಿರುವ ನ್ಯಾಯಮೂರ್ತಿ ಆರ್. ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 2021ರಲ್ಲಿ (ಕೆಎಸ್‌ಇಟಿ)ಗೆ ಹಾಜರಾಗಿದ್ದ ಅರ್ಜಿದಾರರನ್ನು ಯಶಸ್ವಿ ಎಂದು ಘೋಷಿಸುವಂತೆ ಹಾಗೂ ಅವರಿಗೆ ಎಸ್‌ಇಟಿ ಪ್ರಮಾಣಪತ್ರ ನೀಡುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಅಧಿಕಾರಿಗಳಿಗೆ ನಿರ್ದೇಶಿಸಿದೆ.

## ಕೇರಳದಲ್ಲಿ ಮೆದುಳು ತಿನ್ನುವ ಅಮೀಬಾ ಸೋಂಕು

• ಉದಯವಾಹಿನಿ, ಬೆಂಗಳೂರು

ಶಬರಿಮಲೆ ಯಾತ್ರೆ ಆರಂಭವಾಗಿದ್ದು, ದೇವರ ದರ್ಶನಕ್ಕೆಂದು ಕೇರಳಕ್ಕೆ ತೆರಳುವ ಭಕ್ತರಿಗೆ ಕರ್ನಾಟಕ ಆರೋಗ್ಯ ಇಲಾಖೆ ಮಹತ್ವದ ಮಾರ್ಗಸೂಚಿಯನ್ನು ನೀಡಿದೆ. ಕೇರಳ ರಾಜ್ಯದಲ್ಲಿ ಮಿದುಳು ತಿನ್ನುವ ಅಮೀಬಾ (ನೇಗೇರಿಯಾ ಫೌಲೇರಿ) ಪ್ರಕರಣಗಳಿದ್ದು, ಮುನ್ನೆಚ್ಚರಿಕೆ ವಹಿಸುವಂತೆ ಸೂಚನೆ ನೀಡಲಾಗಿದೆ.

ಕೇರಳ ರಾಜ್ಯದಲ್ಲಿ ನೇಗೇರಿಯಾ ಫೌಲೇರಿಯಿಂದ ಉಂಟಾಗುವ ಅಮೀಬಿಕ್ ಮೆನಿಂಗೊಎನ್ಸೆಫಲೈಟಿಸ್ ಪ್ರಕರಣಗಳು ಕಂಡುಬಂದಿರುವ ಹಿನ್ನೆಲೆಯಲ್ಲಿ ರಾಜ್ಯದ ಶಬರಿಮಲೆ ಯಾತ್ರಿಕರಿಗೆ ತಮ್ಮ ಆರೋಗ್ಯದ ಬಗ್ಗೆ ಜಾಗರೂಕರಾಗಿರಲು ಮತ್ತು ಸೋಂಕು ತಡೆಯಲು ಅಗತ್ಯ ಮುನ್ನೆಚ್ಚರಿಕೆ/ ಸುರಕ್ಷಿತಾ ಕ್ರಮಗಳನ್ನು ಪಾಲಿಸಬೇಕು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

## ಭಾರತದ ಅತ್ಯಂತ ವಿಶ್ವಾಸಾರ್ಹ ಹೂಡಿಕೆಯ ತಾಣ ಕರ್ನಾಟಕ

**ತಂತ್ರಜ್ಞಾನದ ವಿಪುಲ ಬಂಡವಾಳ**



**ಸುಸ್ಥಿರ ಅಭಿವೃದ್ಧಿ ನಮ್ಮ ಧ್ಯೇಯ**

# ಹೂಡಿಕೆಯ ತಾಣ ಅಭಿವೃದ್ಧಿಗೆ ಮುನ್ನುಡಿ ಬರೆಯೋಣ

• ಉದಯವಾಹಿನಿ, ಬೆಂಗಳೂರು

ಸರ್ಕಾರದ ಸ್ಪಷ್ಟ ನೀತಿಗಳು, ಸುಗಮ ಅನುಮತಿಗಳು, ಕೌಶಲ್ಯ, ಮೂಲಸೌಕರ್ಯ ಹಾಗೂ ಪೂರಕ ವಾತಾವರಣವು ಕರ್ನಾಟಕವನ್ನು ಭಾರತದ ಅತ್ಯಂತ ವಿಶ್ವಾಸಾರ್ಹ ಹೂಡಿಕೆ ತಾಣವಾಗಿಸಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು. ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾ, ಬೆಂಗಳೂರು ಇವರ ವತಿಯಿಂದ ಆಯೋಜಿಸಲಾದ 'ಬೆಂಗಳೂರು ಟೆಕ್ ಸಮ್ಮಿಟ್' 28ನೇ ಆವೃತ್ತಿಯನ್ನು ಉದ್ಘಾಟಿಸಿ ಮಾತನಾಡಿದರು. ಈ ಶೃಂಗಸಭೆಯಲ್ಲಿ ಕರ್ನಾಟಕ ಮಾಹಿತಿ ತಂತ್ರಜ್ಞಾನ ನೀತಿ 2025-2030, ಬಾಹ್ಯಾಕಾಶ ತಂತ್ರಜ್ಞಾನ ನೀತಿ 2025-2030, ಮತ್ತು ಸ್ಟಾರ್ಟ್‌ಅಪ್ ನೀತಿ 2025-2030 ಗಳಂತಹ ಮೂರು ಪ್ರಮುಖ ನೀತಿಗಳನ್ನು ರಚಿಸುವ ಮೂಲಕ ಐತಿಹಾಸಿಕ ಹೆಜ್ಜೆಯನ್ನು ಇಡಲಾಗಿದೆ. ದತ್ತಾಂಶ ಚಾಲಿತ ಹಾಗೂ ಆಧುನಿಕ ತಂತ್ರಜ್ಞಾನಕ್ಕೆ ಪೂರಕವಾದ ಕರ್ನಾಟಕ ಮಾಹಿತಿ ತಂತ್ರಜ್ಞಾನ ನೀತಿಯಿಂದ, ರಾಜ್ಯವನ್ನು ನಾವೀನ್ಯತೆ ಮತ್ತು ಡೀಪ್ ಟೆಕ್‌ಗಳಿಗೆ ಜಾಗತಿಕ ತಾಣವಾಗಿಸುವ ಗುರಿಯನ್ನು ಸರ್ಕಾರ ಹೊಂದಿದೆ ಎಂದರು. 2034ರ ವೇಳೆಗೆ ಕರ್ನಾಟಕವನ್ನು ಭಾರತದ ಪ್ರಮುಖ ಬಾಹ್ಯಾಕಾಶ ತಂತ್ರಜ್ಞಾನ ಕೇಂದ್ರವಾಗಿ ಪರಿವರ್ತಿಸುವ ನಮ್ಮ ಗುರಿಗೆ ಬಾಹ್ಯಾಕಾಶ ತಂತ್ರಜ್ಞಾನ ನೀತಿ 2025-30 ಸಹಕಾರಿಯಾಗಲಿದೆ. ಹೊಸ ಸ್ಟಾರ್ಟ್‌ಅಪ್ ನೀತಿಯಿಂದ ಮುಂದಿನ ಐದು ವರ್ಷಗಳಲ್ಲಿ ಬಂಡವಾಳ ನೆರವು, ಮಾರುಕಟ್ಟೆ ಅವಕಾಶ, ಮೂಲಸೌಲಭ್ಯ, ಕೌಶಲ್ಯಾಭಿವೃದ್ಧಿಯಂತಹ ಕ್ರಮಗಳ ಮೂಲಕ 25,000 ಸ್ಟಾರ್ಟ್‌ಅಪ್‌ಗಳ ಸ್ಥಾಪನೆಗೆ ನೆರವಾಗುವ ಗುರಿ ಸರ್ಕಾರ ಹೊಂದಿದೆ.

**ಪರಿವರ್ತನೆಯ ಮನ್ವಂತರಕ್ಕೆ ವೇದಿಕೆ:** ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯು ಒಂದು ಸಮಾವೇಶಕ್ಕಿಂತಲೂ ಹೆಚ್ಚಾಗಿ ಹೊಸ ಹೊಸ ವಿಚಾರಗಳು, ಸಂವಾದಗಳು, ಬಂಡವಾಳ ಹೂಡಿಕೆ ಆವಿಷ್ಕಾರ ಮತ್ತು ಪರಿವರ್ತನೆಯ ಮನ್ವಂತರಕ್ಕೆ ವೇದಿಕೆಯಾಗಿದೆ. ಇಂದಿನಿಂದ ಮೂರು ದಿನಗಳ ಕಾಲ ನಡೆಯುವ ಈ ಸಮ್ಮೇಳನ ಹಲವು ಉತ್ತಮ ಅವಕಾಶಗಳಿಗೆ ಜಾಗತಿಕ ವೇದಿಕೆಯಾಗಿ ಹೊಸ ಮುನ್ನುಡಿ ಬರೆಯಲಿ ಎಂದು ಹಾರೈಸುತ್ತೇನೆ ಎಂದು ಹೇಳಿದರು. ಬೆಂಗಳೂರು ತಂತ್ರಜ್ಞಾನ ಶೃಂಗಸಭೆ-2025 ಪರಿವರ್ತನೆಯ ಹರಿಕಾರ ಎಂಬುದನ್ನು ಈಗಾಗಲೇ ಹೇಳಿದ್ದೇನೆ. ಇದು ಶೈಕ್ಷಣಿಕ ವಲಯವನ್ನು ಉದ್ಯಮಕ್ಕೆ ಬೆಸೆಯುತ್ತದೆ.

ನವೋದ್ಯಮಗಳನ್ನು ಹೂಡಿಕೆದಾರರಿಗೆ ಪರಿಚಯಿಸುತ್ತದೆ. ಅನ್ಯ ದೇಶಗಳ ಪರಿಣಿತರನ್ನು, ಸಂಶೋಧಕರನ್ನು, ನೀತಿ ನಿರೂಪಕರನ್ನು ಪರಸ್ಪರ ಬೆಸೆಯುವುದಲ್ಲದೇ, ಜಾಗತಿಕ ಮಾರುಕಟ್ಟೆಗಳನ್ನು ಸಂಪರ್ಕಿಸಲು ಬೃಹತ್ ವೇದಿಕೆಯಾಗಿದೆ ಎಂಬುದನ್ನು ಹೆಮ್ಮೆಯಿಂದ ಹೇಳುತ್ತೇನೆ ಎಂದರು. ಭವಿಷ್ಯೀಕರಣಗೊಳ್ಳಿ ಎನ್ನುವ ಆಶಯದ ನುಡಿಯಂತೆ ತಂತ್ರಜ್ಞಾನವು ಸಾಮಾಜಿಕ ಒಳಿತನ್ನು, ಆರ್ಥಿಕ ನ್ಯಾಯವನ್ನು, ಸುಸ್ಥಿರ ಅಭಿವೃದ್ಧಿಯನ್ನು ಮತ್ತು ಸಮಾಜದ ಎಲ್ಲರಿಗೂ ಸಮೃದ್ಧಿಯನ್ನು ಒದಗಿಸಬೇಕು ಎಂಬ ನಮ್ಮ ನಂಬಿಕೆಯನ್ನು ನಾವು ಪುನರುಚ್ಚರಿಸುತ್ತೇವೆ. ಕೃತಕ ಬುದ್ಧಿಮತ್ತೆ, ಕ್ವಾಂಟಮ್, ಬಯೋಟೆಕ್, ಬಾಹ್ಯಾಕಾಶ ಮತ್ತು ಹಸಿರು ತಂತ್ರಜ್ಞಾನಗಳಿಂದ ಕೂಡಿರುವ ಡಿಜಿಟಲ್ ಯುಗದಲ್ಲಿ ನಾವು ನಿಂತಿದ್ದೇವೆ. ಬೆಂಗಳೂರು ತಂತ್ರಜ್ಞಾನ ಶೃಂಗಸಭೆ-2025 ದಿಟ್ಟ, ಮಾನವೀಯ ಮತ್ತು ಪರಿವರ್ತನಾತ್ಮಕ ಭವಿಷ್ಯವನ್ನು ಸಹ ಸೃಷ್ಟಿಸಲು ಇಡೀ ಜಗತ್ತಿಗೆ ಕರ್ನಾಟಕದ ಆಹ್ವಾನವಾಗಿದೆ ಎಂದು ತಿಳಿಸಿದರು.

**ಭವಿಷ್ಯೀಕರಣಗೊಳ್ಳಿ ಎನ್ನುವ ಆಶಯ**

ನುಡಿಯಂತೆ ತಂತ್ರಜ್ಞಾನವು ಸಾಮಾಜಿಕ ಒಳಿತನ್ನು, ಆರ್ಥಿಕ ನ್ಯಾಯವನ್ನು, ಸುಸ್ಥಿರ ಅಭಿವೃದ್ಧಿಯನ್ನು ಮತ್ತು ಸಮಾಜದ ಎಲ್ಲರಿಗೂ ಸಮೃದ್ಧಿಯನ್ನು ಒದಗಿಸಬೇಕು ಎಂಬ ನಮ್ಮ ನಂಬಿಕೆಯನ್ನು ನಾವು ಪುನರುಚ್ಚರಿಸುತ್ತೇವೆ. ಕೃತಕ ಬುದ್ಧಿಮತ್ತೆ, ಕ್ವಾಂಟಮ್, ಬಯೋಟೆಕ್, ಬಾಹ್ಯಾಕಾಶ ಮತ್ತು ಹಸಿರು ತಂತ್ರಜ್ಞಾನಗಳಿಂದ ಕೂಡಿರುವ ಡಿಜಿಟಲ್ ಯುಗದಲ್ಲಿ ನಾವು ನಿಂತಿದ್ದೇವೆ. ಬೆಂಗಳೂರು ತಂತ್ರಜ್ಞಾನ ಶೃಂಗಸಭೆ-2025 ದಿಟ್ಟ, ಮಾನವೀಯ ಮತ್ತು ಪರಿವರ್ತನಾತ್ಮಕ ಭವಿಷ್ಯವನ್ನು ಸಹ-ಸೃಷ್ಟಿಸಲು ಇಡೀ ಜಗತ್ತಿಗೆ ಕರ್ನಾಟಕದ ಆಹ್ವಾನವಾಗಿದೆ ಎಂದರು.

**ಭಾರತದ ಅತಿದೊಡ್ಡ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ**

ಭಾರತದ ಐಟಿ ರಫ್ತಿನಲ್ಲಿ ನಾವು 42% ಕೊಡುಗೆ ನೀಡುತ್ತೇವೆ. ಇದರ ಮೌಲ್ಯ 3.2 ಲಕ್ಷ ಕೋಟಿ ರೂ.ಗಳಿಗಿಂತ ಹೆಚ್ಚು ಮತ್ತು ಈ ಪ್ರಗತಿ ವರ್ಷದಿಂದ ವರ್ಷಕ್ಕೆ 27% ರಷ್ಟು ವೇಗವಾಗಿ ಬೆಳೆಯುತ್ತಿದೆ. ರಾಜ್ಯವು 550ಕ್ಕೂ ಹೆಚ್ಚು ಜಾಗತಿಕ ಸಾಮರ್ಥ್ಯ ಕೇಂದ್ರಗಳನ್ನು (ಜಿಸಿಸಿ) ಹೊಂದಿದೆ. ಇದು ಭಾರತದ ಒಟ್ಟು ಕಂಪನಿಯ ಮೂರನೇ ಒಂದು ಭಾಗವಾಗಿದೆ. ಬೆಂಗಳೂರು ಸೆಮಿಕಂಡಕ್ಟರ್, ಏರೋಸ್ಪೇಸ್, ರಕ್ಷಣಾ, ಬಯೋಟೆಕ್, ಎಲೆಕ್ಟ್ರಾನಿಕ್ಸ್ ಉತ್ಪಾದನೆ, ಅನಿಮೇಷನ್ ಮತ್ತು ಗೇಮಿಂಗ್ ಮತ್ತು ಡೀಪ್-ಟೆಕ್‌ಗಳಿಗೆ ಪ್ರಮುಖ ಕೇಂದ್ರವಾಗಿದೆ ಎಂದರು. ನೀತಿ -ನಾವೀನ್ಯತೆಯನ್ನು ರೂಪಿಸುವಲ್ಲಿ ಕರ್ನಾಟಕ ಯಾವಾಗಲೂ ಭಾರತವನ್ನು ಮುನ್ನಡೆಸಿದೆ. ನಾವು 1997 ರಲ್ಲಿಯೇ ಭಾರತದ ಮೊದಲ ತಂತ್ರಜ್ಞಾನ ನೀತಿಯನ್ನು ರೂಪಿಸಿದ್ದೇವೆ ಮತ್ತು ಹೊಸ ನೀತಿಗಳೊಂದಿಗೆ ಈ ನಾಯಕತ್ವವನ್ನು ಮುಂದುವರಿಸುತ್ತಿದ್ದೇವೆ. ಸರ್ಕಾರದ ದೂರದೃಷ್ಟಿಯ ಆಡಳಿತದ ಪರಿಣಾಮವಾಗಿ, ಜಾಗತಿಕ ತಂತ್ರಜ್ಞಾನದ ಕ್ಷೇತ್ರದಲ್ಲಿ ಕರ್ನಾಟಕ ಸಕ್ರಿಯವಾಗಿ ಪಾಲ್ಗೊಂಡಿದೆ.

### ತಂತ್ರಜ್ಞಾನ, ಪ್ರತಿಭೆ

ಬೆಂಗಳೂರಿನ ಎರಡು ಆಧಾರಸ್ತಂಭಗಳು




1 ಬೆಂಗಳೂರು ಟೆಕ್ ಸಮಿಟ್ 2025ಗೆ ಚಾಲನೆ ಸ್ಟಾರ್ಟಪ್ ನಗರಿಯಲ್ಲಿ 3 ದಿನ ತಂತ್ರಜ್ಞಾನ ಶಕ್ತಿ ಅನಾವರಣ

2 ಹೊಸ ಆಕಾಂಕ್ಷಿಗಳಿಂದ ಹಿಡಿದು ಅನುಭವಸ್ಥ ಆಂಟ್ರಪ್ರನ್ಯೂರ್‌ಗಳ ವರೆಗೆ ಪ್ರತಿಯೊಬ್ಬ ಪ್ರತಿಭೆಗೂ ಒಳ್ಳೆಯ ವೇದಿಕೆ

3 ಬಿಡದಿಯಲ್ಲಿ ನೂತನ ಐಟಿ ನಗರ ಸ್ಥಾಪನೆಗೆ ಚಿಂತನೆ

**ತಂತ್ರಜ್ಞಾನಕ್ಕೆ ಒತ್ತು ನೀಡಿದ ಮೊದಲ ರಾಜ್ಯ**

ಡೀಪ್ ಸೈನ್ಸ್ ಮತ್ತು ಸುಧಾರಿತ ಇಂಜಿನಿಯರಿಂಗ್ ವ್ಯವಸ್ಥೆ ಒದಗಿಸಲು ರಾಜ್ಯ ಬದ್ಧವಾಗಿದ್ದು, ಎಐ, ಸೈಬರ್-ಭದ್ರತೆ, ದತ್ತಾಂಶ ವಿಜ್ಞಾನ, ಅನಿಮೇಷನ್ ಮತ್ತು ರೊಬೊಟಿಕ್ಸ್‌ನಲ್ಲಿ ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಕ್ವಾಂಟಮ್ ತಂತ್ರಜ್ಞಾನದ ಮಾರ್ಗಸೂಚಿಗಳನ್ನು ಜಾರಿಗೆ ತಂದ ಮೊದಲ ರಾಜ್ಯ ಕರ್ನಾಟಕ. 'ಬಿಯಾಂಡ್ ಬೆಂಗಳೂರು' ಉಪಕ್ರಮದ ಮೂಲಕ ತಂತ್ರಜ್ಞಾನ ಆರ್ಥಿಕತೆಯ ವಿಕೇಂದ್ರೀಕರಣಕ್ಕೆ ಮುಂದಾಗಿರುವ ನಮ್ಮ ಸರ್ಕಾರ, ಮುಂದಿನ ಪೀಳಿಗೆಗಾಗಿ ಟೈರ್ 2 ನಗರಗಳನ್ನು ನಾವಿನ್ಯತೆಯ ಕ್ಲಸ್ಟರ್‌ಗಳಾಗಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಹೇಳಿದರು.



**ಹೂಡಿಕೆದಾರರಿಗೆ ಸಿಎಂ ಕರೆ**

ಈ ಎಲ್ಲಾ ಕ್ರಮಗಳು ಕೇವಲ ಆರ್ಥಿಕತೆಯನ್ನು ಕೇಂದ್ರೀಕರಿಸದೇ, ಸಮಾನ ಬೆಳವಣಿಗೆಗೂ ಬದ್ಧವಾಗಿವೆ. ರಾಜ್ಯದ ಪ್ರತಿ ಜಿಲ್ಲೆಯಲ್ಲಿಯೂ ಯುವಪೀಳಿಗೆಯು ಡಿಜಿಟಲ್ ಯುಗಕ್ಕೆ ತೆರೆದುಕೊಳ್ಳುವ ಅವಕಾಶವನ್ನು ನೀಡಲಾಗಿದೆ. ನಮ್ಮ ಆಡಳಿತದ ಮಾದರಿಯು ಪಾರದರ್ಶಕತೆ, ನಿರೀಕ್ಷಿತ ನಡೆ ಹಾಗೂ ಸ್ಥಿರತೆಗೆ ಬದ್ಧವಾಗಿದೆ. ಸಂಶೋಧನೆ ಹಾಗೂ ಅಭಿವೃದ್ಧಿ ಕೇಂದ್ರವಾಗಲಿ, ಸ್ಟಾರ್ಟ್ ಅಪ್ ಆಗಲಿ, ಶೈಕ್ಷಣಿಕ ಸಂಶೋಧನೆಯಾಗಲಿ, ಯಾವುದೇ ಕ್ಷೇತ್ರದ ಬಂಡವಾಳ ಹೂಡಿಕೆಗೆ ಕರ್ನಾಟಕ ರಾಜ್ಯ ತಾಣವಾಗಿವೆ. ಎಐ, ಕ್ವಾಂಟಮ್ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಬಾಹ್ಯಾಕಾಶ ತಂತ್ರಜ್ಞಾನದಲ್ಲಿನ ವಿಪುಲ ಅವಕಾಶಗಳನ್ನು ಬಳಸಿಕೊಂಡು ಮಾನವ ಪ್ರಗತಿಗೆ ಎಲ್ಲರೂ ಒಟ್ಟಾಗಿ ಶ್ರಮಿಸಬೇಕೆಂದು ಮುಖ್ಯಮಂತ್ರಿಗಳು ಕರೆ ನೀಡಿದರು.

# ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಗೃಹಲಕ್ಷ್ಮಿ ಸಹಕಾರಿ ಬ್ಯಾಂಕ್ ಆರಂಭ

## ಕೃಷಿ, ಹೈನುಗಾರಿಕೆ, ವಾಹನ, ಮಕ್ಕಳ ವಿದ್ಯಾಭ್ಯಾಸ ಸೇರಿದಂತೆ ವಿವಿಧ ಉದ್ದೇಶಗಳಿಗೆ ಸಾಲ ಲಭ್ಯ

• ಉದಯವಾಹಿನಿ, ಬೆಂಗಳೂರು

ಗೃಹಲಕ್ಷ್ಮಿ ಯೋಜನೆ ಫಲಾನುಭವಿಗಳಿಗೆ ಮತ್ತಷ್ಟು ಸಹಕಾರ ನೀಡುವ ನಿಟ್ಟಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಗೃಹಲಕ್ಷ್ಮಿ ಸಹಕಾರಿ ಬ್ಯಾಂಕ್‌ಗಳನ್ನು ಆರಂಭಿಸುತ್ತಿದೆ. ನವೆಂಬರ್ 28 ರಂದು ಬ್ಯಾಂಕ್‌ಗೆ ಚಾಲನೆ ನೀಡಲಾಗುತ್ತಿದೆ. ಇನ್ನು ಸಾಲ ಸೌಲಭ್ಯ ಪಡೆಯಲು ಮಹಿಳೆಯರು ಹಣ ಕಟ್ಟಿ ಷೇರ್ ಹೋಲ್ಡರ್ಸ್ ಆಗಬೇಕಿದೆ.

ಈ ಬಗ್ಗೆ ತುಮಕೂರಿನಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಸಚಿವ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಮಾಹಿತಿ ನೀಡಿದ್ದಾರೆ. ಕರ್ನಾಟಕದಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ಎಸ್.ಎಂ.ಕೃಷ್ಣ ಅವರ ಕಾಲದಲ್ಲಿ ಮೋಟಮ್ಮ ಅವರು ಸಚಿವರಾಗಿದ್ದಾಗ ಸ್ತ್ರೀ ಶಕ್ತಿ ಸಂಘಗಳನ್ನು ಸ್ಥಾಪಿಸಿ, ಮಹಿಳೆಯರಿಗೆ ಅನುಕೂಲ ಮಾಡಿಕೊಡಲಾಗಿತ್ತು. ಇದೀಗ ನನ್ನ ಹೃದಯಕ್ಕೆ ಹತ್ತಿರವಾಗಿರುವ ಗೃಹಲಕ್ಷ್ಮಿ ಬ್ಯಾಂಕ್ ತರಲಾಗುತ್ತಿದೆ ಎಂದರು.

ಈ ಹಿಂದೆ ಗಂಡನ ಉದ್ಯಮದಲ್ಲಿ ಹೆಂಡತಿ ಕೈಜೋಡಿಸುತ್ತಿದ್ದಳು. ಆದರೆ,

**ಮಹಿಳೆಯರ ಸಬಲೀಕರಣವೇ ಸರ್ಕಾರದ ಗುರಿ**



ಇತ್ತೀಚೆಗೆ ಮಹಿಳೆಯರೆ ಉದ್ಯಮಿಗಳಾಗುತ್ತಿದ್ದಾರೆ. ಇಂತಹ ಮಹಿಳೆಯರಿಗೆ ಸಹಾಯ ಮಾಡುವ ಉದ್ದೇಶದಿಂದಲೇ ಗೃಹಲಕ್ಷ್ಮಿ ಬ್ಯಾಂಕ್ ಆರಂಭಿಸಲಾಗುತ್ತಿದೆ. ಧರ್ಮಸ್ಥಳ ಸ್ವಸಹಾಯ ಸಂಘ ಕಳೆದ 20 ವರ್ಷಗಳಿಂದ ಹೊಸ ಕ್ರಾಂತಿಯನ್ನೇ ಸೃಷ್ಟಿಸಿದೆ. ಅವರ ಸೇವೆ ಸದಾ ಸ್ಮರಣೀಯ.

ಆದರೆ ಕೆಲವೊಂದು ಖಾಸಗಿ ಫೈನಾನ್ಸ್ ಕಂಪನಿಗಳಿಂದ ಜನರಿಗೆ ತೊಂದರೆಯಾಗುತ್ತಿದೆ. ಇದನ್ನು ತಡೆಗಟ್ಟಲು ಗೃಹಲಕ್ಷ್ಮಿ ಸಂಘ ಸಹಾಯವಾಗಲಿದೆ.

ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಲಾಗುವುದು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

**ಸರ್ಕಾರ ಬದಲಾವಣೆಯಾದರೆ ಬ್ಯಾಂಕ್ ಮುಚ್ಚಲ್ಲ:** ಮುಂದೆ ಯಾವುದೇ ಸರ್ಕಾರಗಳು ಬಂದರೂ ಗೃಹಲಕ್ಷ್ಮಿ ಬ್ಯಾಂಕ್ ಅನ್ನು ಮುಚ್ಚುವ ಪ್ರಯತ್ನ ಮಾಡುವುದಿಲ್ಲ. ಇದು ನಿರಂತರ ಪ್ರಕ್ರಿಯೆ. ಮಹಿಳೆಯರಿಗೆ

**ಏನೆಲ್ಲಾ ನಿಯಮ**

- ಗೃಹಲಕ್ಷ್ಮಿ ಬ್ಯಾಂಕ್‌ಗೆ ಸೇರ ಬಯಸುವವರು ಸಾವಿರ ರೂಪಾಯಿ ಕೊಟ್ಟು ಷೇರ್ ಹೋಲ್ಡರ್ ಆಗಬೇಕು.
- ಸಂಪೂರ್ಣ ಕ್ಯಾಶ್ ಲೆಸ್ ವ್ಯವಹಾರ ನಡೆಯಲಿದೆ.
- ಷೇರುದಾರರಾದ ಬಳಿಕ ಪ್ರತಿ ತಿಂಗಳು ಇನ್ನೂರು ರೂಪಾಯಿ ಕಟ್ಟಬೇಕು. ಷೇರುದಾರರಾದ ಆರು ತಿಂಗಳಲ್ಲಿ ಲೋನ್ ಪಡೆಯಬಹುದು.
- 30ಸಾವಿರದಿಂದ ಮೂರು ಲಕ್ಷದವರೆಗೂ ಸಾಲ
- ಗೃಹಲಕ್ಷ್ಮಿ ಬ್ಯಾಂಕ್ ನಲ್ಲಿ ವೈಯಕ್ತಿಕ ಸಾಲ ಮಾತ್ರ
- ಗುಂಪು, ಸಂಘಗಳಿಗೆ ಸಾಲ ನೀಡಲಾಗುವುದಿಲ್ಲ.
- ರಾಷ್ಟ್ರೀಕೃತ ಬ್ಯಾಂಕುಗಳ ಬಡ್ಡಿದರದಲ್ಲಿ ಸಾಲ
- ಸಂಘಕ್ಕೆ ಸೇರಲು ಯಾವುದೇ ಒತ್ತಡ ಇಲ್ಲ.



ಅನುಕೂಲ ಆಗುವ ದೃಷ್ಟಿಯಿಂದ ಬ್ಯಾಂಕ್ ತೆರೆಯಲಾಗುತ್ತಿದ್ದು, ಕೃಷಿ, ಹೈನುಗಾರಿಕೆ, ವಾಹನ, ಮಕ್ಕಳ ವಿದ್ಯಾಭ್ಯಾಸ ಸೇರಿದಂತೆ ವಿವಿಧ ರೀತಿಯಲ್ಲಿ ಲೋನ್ ತೆಗೆದುಕೊಳ್ಳಬಹುದೆಂದು ಸಚಿವೆ ತಿಳಿಸಿದ್ದಾರೆ.

ಕರ್ನಾಟಕದಲ್ಲಿ ಗೃಹಲಕ್ಷ್ಮಿ ಯೋಜನೆ ಬಂದ ಮೇಲೆ ನಮ್ಮ ಇಲಾಖೆ ಮುಂಚೂಣಿಯಲ್ಲಿದೆ. ಮಹಿಳೆಯರ ಸಬಲೀಕರಣವೇ ನಮ್ಮ ಸರ್ಕಾರದ ಗುರಿ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು ಬೆಂಗಳೂರಿನಲ್ಲಿ ನವೆಂಬರ್ 28 ರಂದು ನಡೆಯಲಿರುವ ಐಸಿಡಿಎಸ್ ಸುವರ್ಣ ಮಹೋತ್ಸವ, ಅಕ್ಕ ಪಡೆ ಲೋಕಾರ್ಪಣೆ, ಗೃಹಲಕ್ಷ್ಮಿ ಬ್ಯಾಂಕ್‌ಗೆ ಚಾಲನೆ ಕುರಿತು ಬಾಲ ಭವನದಲ್ಲಿ ನಡೆದ ಜಿಲ್ಲಾಮಟ್ಟದ ಪೂರ್ವಭಾವಿ ಸಭೆಯಲ್ಲಿ ಸಚಿವರು ಮಾತನಾಡಿದರು. ಬಹುನಿರೀಕ್ಷಿತ ಕಾರ್ಯಕ್ರಮದ ಯಶಸ್ಸಿಗೆ ಎಲ್ಲರೂ ಸಹಕರಿಸಬೇಕು. ತುಮಕೂರು ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು.

**ಅಂಗನವಾಡಿ ಕಾರ್ಯಕರ್ತರ ಗೌರವಧನ ಹೆಚ್ಚಳಕ್ಕೆ ಕ್ರಮ:** ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಗೌರವ ಧನವನ್ನು ಹೆಚ್ಚಿಸಲಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ ಒಂದು ಸಾವಿರ ಗೌರವ ಧನ ಹೆಚ್ಚಿಸಲಾಗುವುದು. ಈಗಾಗಲೇ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರನ್ನು ಚುನಾವಣಾ ಕೆಲಸದಿಂದ ವಿಮುಕ್ತಿಗೊಳಿಸಲಾಗಿದೆ.

ಜಾತಿ ಸಮೀಕ್ಷೆಗೆ ಅಂಗನವಾಡಿ ಕಾರ್ಯಕರ್ತೆಯರು ಸಹಾಯ ಮಾಡಿದರು. ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹12,366/Gram24ct ₹11,335/Gram22ct | ಬೆಳ್ಳಿ: ₹162.00/Gram

ಅಂತರಾಳದಿಂದ... EDITORIAL

# ಪದವಿ ಪೂರ್ವ ಕಾಲೇಜುಗಳು ಒಂದೊಂದಾಗಿ ಬಾಗಿಲು ಹಾಕುತ್ತಿವೆ

• ಉದಯವಾಹಿನಿ, ವಿಶೇಷ

ದೇಶದ ಇತರ ಕಡೆಗಳಂತೆ ರಾಜ್ಯದಲ್ಲೂ ಒಂದೆಡೆ ಸರಕಾರಿ ಪ್ರಾಥಮಿಕ ಶಾಲೆಗಳು ಮುಚ್ಚಿ ಹೋಗುತ್ತಿದ್ದರೆ, ಇನ್ನೊಂದೆಡೆ ಪದವಿ ಪೂರ್ವ ಕಾಲೇಜುಗಳು ಕೂಡ ಒಂದೊಂದಾಗಿ ಬಾಗಿಲು ಹಾಕುತ್ತಿವೆ. ಮೇಲ್ನೋಟಕ್ಕೆ ಇದಕ್ಕೆ ವಿದ್ಯಾರ್ಥಿಗಳ ಕೊರತೆಯೇ ಕಾರಣ ಎಂದು ಕಂಡು ಬಂದರೂ ವಾಸ್ತವವಾಗಿ ಖಾಸಗಿ ಕಾಲೇಜುಗಳ ಆರಂಭಕ್ಕೆ ಸರಕಾರ ಅವೈಜ್ಞಾನಿಕ ಪರವಾನಿಗೆ ನೀಡುತ್ತಿರುವುದು ಕಾರಣವಾಗಿದೆಯೆಂದರೆ ತಪ್ಪಿಲ್ಲ. ಸರಕಾರವೇನೋ ಸರಕಾರಿ ಪದವಿ ಪೂರ್ವ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಆಕರ್ಷಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಾಗಿ ಹೇಳುತ್ತಿದೆ. ಅದು ನಿಜ ಕೂಡ. ಈ ನಿಟ್ಟಿನಲ್ಲಿ ಬಾಲಕಿಯರಿಗೆ ಉಚಿತ ಶಿಕ್ಷಣ ನೀಡುವುದು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ವ್ಯವಸ್ಥೆಯನ್ನು ಕೆಲವು ಸರಕಾರಿ ಕಾಲೇಜುಗಳಲ್ಲಿ ಒದಗಿಸಿರುವುದು ನಿಜ. ಆದರೆ ಇವೆಲ್ಲ ಮಾಡಿದರೂ ದುಡ್ಡು ಮಾಡಲೆಂದೇ ಆರಂಭವಾದ ಖಾಸಗಿ ಕಾಲೇಜುಗಳ ವ್ಯಾಪಾರಿ ತಂತ್ರಗಳೆದುರು ವಿದ್ಯಾರ್ಥಿಗಳನ್ನು ಆಕರ್ಷಿಸಲು ಸರಕಾರಿ ಕಾಲೇಜುಗಳು ಯಾಕೆ ಯಶಸ್ವಿಯಾಗುತ್ತಿಲ್ಲ? ಸರಕಾರಿ ಕಾಲೇಜುಗಳು ಮುಚ್ಚುವ ಸ್ಥಿತಿಗೆ ಬರಲು ಹಲವಾರು ಕಾರಣಗಳಿವೆ. ಮುಖ್ಯವಾಗಿ ಪ್ರತಿವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪಾಸಾಗುವ ವಿದ್ಯಾರ್ಥಿಗಳ ಸಂಖ್ಯೆಗಿಂತ ಪ್ರಥಮ ಪಿಯುಸಿ ಸೀಟುಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಇದಕ್ಕೆ ಕಾರಣವಾಗಿದೆ.

ಉದಾಹರಣೆಗೆ 2025-26ನೇ ವರ್ಷದಲ್ಲಿ ಪ್ರಥಮ ಪಿಯುಸಿಗೆ 7,72,402 ಸೀಟುಗಳು ಲಭ್ಯವಿದ್ದರೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳ ಸಂಖ್ಯೆ 6,54,399. ಹೀಗಾಗಿ 1,18,003 ಸೀಟುಗಳು ಖಾಲಿ ಉಳಿದಿವೆ. ಇದಕ್ಕೆ ಕಾರಣ ಕಳೆದ ಐದು ವರ್ಷಗಳಲ್ಲಿ ಖಾಸಗಿ ಪಿಯು ಕಾಲೇಜುಗಳಿಗೆ ಸರಕಾರ ಅನುಮತಿ ನೀಡಿರುವುದಾಗಿದೆ. ಇದು ಸರಕಾರಿ ಕಾಲೇಜುಗಳ ಪ್ರವೇಶ ಪ್ರಕ್ರಿಯೆಯ ಮೇಲೆ ದುಷ್ಪರಿಣಾಮ ಉಂಟು ಮಾಡಿದೆಯೆಂದರೆ ಅತಿಶಯೋಕ್ತಿಯಲ್ಲ.

**ಎಲ್ಲವನ್ನೂ ಆವರಿಸುತ್ತಿರುವ ಖಾಸಗೀಕರಣದ ವ್ಯಾಧಿಗೆ ಶೈಕ್ಷಣಿಕ ಕ್ಷೇತ್ರವೂ ಬಲಿಯಾಗುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಮಕ್ಕಳ ಕೊರತೆ ಮತ್ತು ವಿಲೀನದ ಹೆಸರಿನಲ್ಲಿ ಕನ್ನಡ ಪ್ರಾಥಮಿಕ ಶಾಲೆಗಳಿಗೆ ಬೀಗ ಹಾಕುತ್ತಿರುವುದು ಈಗ ಸಾಮಾನ್ಯ ಸಂಗತಿಯಾಗಿದೆ. ಸಂಶೋಧನೆ ಮತ್ತು ಮೂಲ ಸೌಕರ್ಯಗಳ ಕೊರತೆಯಿಂದ ಸರಕಾರಿ ವಿಶ್ವವಿದ್ಯಾನಿಲಯಗಳು ಬಳಲುತ್ತಿವೆ. ಈಗ ಪ್ರಾಥಮಿಕ ಉನ್ನತ ಶಿಕ್ಷಣದ ನಡುವಿನ ಕೊಂಡಿಯಂತಿರುವ ಪದವಿ ಪೂರ್ವ ಕಾಲೇಜುಗಳು ಮುಚ್ಚುವ ಹಂತಕ್ಕೆ ಬಂದಿರುವುದು ಒಳ್ಳೆಯ ಸೂಚನೆಯಲ್ಲ.**

ರಾಜ್ಯದಲ್ಲಿ ಒಟ್ಟು 3,623 ಪದವಿ ಪೂರ್ವ ಕಾಲೇಜುಗಳಿವೆ. ಅವುಗಳಲ್ಲಿ 1,319 ಸರಕಾರಿ ಪಿಯು ಕಾಲೇಜುಗಳಿವೆ ಹಾಗೂ 815 ಅನುದಾನಿತ ಕಾಲೇಜುಗಳಿವೆ. ಇವುಗಳು ವಿದ್ಯಾರ್ಥಿಗಳ ಕೊರತೆಯನ್ನು ಎದುರಿಸುತ್ತಿವೆ. ಖಾಸಗಿ ಪಿಯು ಕಾಲೇಜುಗಳ ಆಕರ್ಷಣೆಗೆ ಮುಖ್ಯ ಕಾರಣ ಅವುಗಳು ನೀಡುವ ತರಾವರಿ ಜಾಹೀರಾತುಗಳು. ಮುಂದಿನ ಸಿಇಟಿ, ನೀಟ್, ಜೆಇಇ ಪರೀಕ್ಷೆಯ ತರಬೇತಿಯ ಆಮಿಷಗಳು ಹಾಗೂ ಯಶಸ್ವಿ ಅಭ್ಯರ್ಥಿಗಳ ಭಾವಚಿತ್ರಗಳನ್ನು ಪತ್ರಿಕೆಗಳಲ್ಲಿ ಜಾಹೀರಾತು ಫಲಕಗಳಲ್ಲಿ ಪ್ರದರ್ಶಿಸುವುದರಿಂದಾಗಿ ಆಕರ್ಷಣೆಗೊಳಗಾಗುವ ಪೋಷಕರು ಖಾಸಗಿ ಕಾಲೇಜುಗಳಲ್ಲಿ ಲಕ್ಷಾಂತರ ರೂಪಾಯಿ ಶುಲ್ಕ ತೆತ್ತು ತಮ್ಮ ಮಕ್ಕಳನ್ನು ಸೇರಿಸಲು ಮುಂದಾಗುತ್ತಾರೆ. ಇದರಿಂದಾಗಿ ಸರಕಾರಿ ಪದವಿ ಪೂರ್ವ ಕಾಲೇಜುಗಳು ಮುಚ್ಚುವ ಅನಿವಾರ್ಯತೆಗೆ ಒಳಗಾಗಿವೆ. ಇದರ ನೇರ ಪರಿಣಾಮ ಉಂಟಾಗುವುದು ಗ್ರಾಮೀಣ ಪ್ರದೇಶಗಳ ಬಡ, ಹಿಂದುಳಿದ ವಿದ್ಯಾರ್ಥಿಗಳ ಮೇಲೆ. ಅದರಲ್ಲೂ ವಿಶೇಷವಾಗಿ ಹೆಣ್ಣು ಮಕ್ಕಳ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ.ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ, ಅಲ್ಪಸಂಖ್ಯಾತ ಮಕ್ಕಳಿಗೆ ಖಾಸಗಿ ಶಾಲೆಗಳ ಶುಲ್ಕವನ್ನು ಭರಿಸುವುದು ಕಷ್ಟವಾಗುತ್ತದೆ. ಸರಕಾರಿ ಕಾಲೇಜುಗಳ ಸೌಕರ್ಯ ಇಲ್ಲದಿದ್ದರೆ ಬಹುತೇಕ ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳು ವಿದ್ಯೆಯಿಂದ ವಂಚಿತರಾಗಬೇಕಾಗುತ್ತದೆ. ಸಮೀಪದಲ್ಲಿ ಸುಲಭಕ್ಕೆ ಲಭ್ಯವಾಗುವ ಸರಕಾರಿ ಕಾಲೇಜುಗಳು ಮುಚ್ಚಿಹೋದರೆ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳನ್ನು ಹೆಚ್ಚು ಹಣ ಖರ್ಚು ಮಾಡಿ ದೂರದ ಕಾಲೇಜುಗಳಿಗೆ ಕಳಿಸಲು ಅವರ ಪೋಷಕರು ಇಷ್ಟ ಪಡುವುದಿಲ್ಲ. ಸರಕಾರಿ ಪದವಿ ಪೂರ್ವ ಕಾಲೇಜುಗಳ ದುರವಸ್ಥೆಗೆ ಖಾಸಗಿ ಕಾಲೇಜುಗಳ ಪ್ರಭಾವಿ ಲಾಬಿ ಕಾರಣ. ಸರಕಾರದ ಮಹತ್ವದ ಸ್ಥಾನದಲ್ಲಿ ಇರುವವರು ತಮ್ಮದೇ ಆದ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಮಾಡಿಕೊಂಡಿರುತ್ತಾರೆ. ಹಣ ಗಳಿಸಲೆಂದೇ ಮಾಡಿರುವ ಇಂಥ ಕಾಲೇಜುಗಳಿಗೆ ಪ್ರಭಾವಿಗಳ ಒತ್ತಡಕ್ಕೆ ಮಣಿದು ಸರಕಾರವೂ ಮನ್ನಣೆ ಕೊಡುತ್ತದೆ. ಜನಪ್ರತಿನಿಧಿಗಳಾಗಿ ಸರಕಾರಿ ಶಾಲೆ, ಕಾಲೇಜುಗಳನ್ನು ಕಾಪಾಡಿ ಬೆಳಸಬೇಕಾದವರು ತಮ್ಮ ಸ್ವಂತದ ಶಾಲೆ, ಕಾಲೇಜುಗಳ ಹಿತಾಸಕ್ತಿಗಾಗಿ ಸರಕಾರಿ ಕಾಲೇಜುಗಳನ್ನು ಬಲಿ ಕೊಡುತ್ತಿದ್ದಾರೆ ಎಂದು ಹೇಳಿದರೆ ತಪ್ಪಿಲ್ಲ.



# ದೈನಂದಿನ ಬದುಕಿನಲ್ಲಿ ಕನ್ನಡ ವ್ಯಕ್ತಿಗೆ ಸಂಬಂಧಿಸಿದಂತೆ



ವಿಶ್ವಾಸ್.ಡಿ.ಗೌಡ

**ಮುಂದುವರೆದ ಭಾಗ**

19)ಕನ್ನಡಪರ ಸಂಘಟನೆ ಬೆಳೆಯಲು ಪ್ರೋತ್ಸಾಹಿಸಿ, ಒಗ್ಗಟ್ಟನ್ನು ಮೂಡಿಸಲು ಸದಾ ಯತ್ನಿಸಿ.

20)ಉದ್ಯೋಗ, ಹುದ್ದೆಗಳು ಕನ್ನಡಿಗರಿಗೇ ದೊರಕಲು ಸಹಾಯಮಾಡಿ. ಹುದ್ದೆಗಳ ಅವಕಾಶಗಳಿದ್ದರೆ ಅವರಿಗೆ ತಿಳಿಸಿ.

21)ನಿಮ್ಮ ಕುಟುಂಬದವರೊಡನೆ ಕರ್ನಾಟಕದ ಐತಿಹಾಸಿಕ ಜಾಗಗಳಿಗೆ, ಸುಂದರ ಪ್ರದೇಶಗಳಿಗೆ ಪ್ರವಾಸ ಹೋಗಿ,

22)ಯಾವುದೇ ಕನ್ನಡಪರ ಚಳವಳಿಯಾಗಲಿ ಭಾಗವಹಿಸಿ, ನನ್ನೊಬ್ಬನಿಂದ ಏನಾಗುತ್ತದೆಯೆಂಬ ಆಲಸ್ಯವನ್ನು ಕೈಬಿಡಿ

23) ಕನ್ನಡಿಗರಿಗೇ ಮತ ಹಾಕಿ; ಅದರಲ್ಲೂ ಕನ್ನಡಪರ ವ್ಯಕ್ತಿ ಗಳಿಗೇ ಮತ ಹಾಕಿ.

24) ನೆನಪಿಡಿ; ನಿಮ್ಮ ಆದಾಯದ ಒಂದು ಭಾಗ ಕನ್ನಡಕ್ಕಾಗಿ ವಿನಿಯೋಗವಾಗಲಿ. ಕನ್ನಡ ಸಂಘಟನೆಗಳ ಸದಸ್ಯತ್ವ ಪಡೆಯುವಲ್ಲಿ, ವಂತಿಗೆ ಕೊಡುವಲ್ಲಿ ಉದಾರವಾಗಿರಿ ನೀವು ಕೊಡುವ ಹಣ ಕನ್ನಡದ ಕೆಲಸಕ್ಕೆ ಸಂದಾಯ ವಾಗುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಿ.

25) ಚೆನ್ನಾಗಿ ನೆನಪಿಡಿ; ನಿಮ್ಮ ಜಾತಿ ಕನ್ನಡ, ನಿಮ್ಮ ಕುಲ ಕನ್ನಡ, ನಿಮ್ಮ ಸಮಸ್ತವೂ ಕನ್ನಡ,

26) ಕನ್ನಡದ ಮಧ್ಯೆ ಅನಗತ್ಯ ಇಂಗ್ಲಿಷ್ ಬಳಕೆ ಬೇಡ. ಮೊನ್ನೆ, ಅಂದ್ರೆ ಡೇ ಬಿಫೋರ್ ಎಸ್ಟರ್ಡೇ, ನನ್ನ ಫ್ರೆಂಡ್ಸ್ ಜೊತೆ ಡೈರೆಕ್ಟರನ್ನು ಮೀಟ್ ಮಾಡಿದೆ ಎಂಬಂತಹ ವಾಕ್ಯಗಳು ಬೇಡ. ಮೊನ್ನೆ ನನ್ನ ಗೆಳೆಯರ ಜೊತೆ ನಿರ್ದೇಶಕರನ್ನು ಭೇಟಿ ಮಾಡಿದೆ ಇದು ಸರಿ, ರೈಲಿಗೆ ಹೋಗಲು ಮುಂಗಡ ಟಿಕೆಟ್ ಕೊಂಡು ಕೊಂಡೆ ಇಂತಹ ಕಡೆ ಇಂಗ್ಲಿಷ್ ಪದ ಅನಿವಾರ್ಯ ಬಳಸಿರಿ. ರೇಡಿಯೋ, ಕ್ರಾಸ್, ಚೆಕ್ಕು, ಹೊಟೇಲ್ ಇವು ಇಂದು ಕನ್ನಡದ ಪದಗಳೇ ಆಗಿವೆ.


27) ಇಂಗ್ಲಿಷ್ ಬೆರೆಸಿ ಮಾತನಾಡುವುದಕ್ಕಿಂತ ಶುದ್ಧ ಕನ್ನಡದಲ್ಲಿ ಮಾತನಾಡುವುದು ಗೌರವದ ವಿಚಾರ ಎಂದು ಭಾವಿಸಿ, ಇತರರಿಗೂ ತಿಳಿಸಿರಿ. ಕನ್ನಡದಲ್ಲೇ ಮಾತನಾಡುತ್ತೇನೆ ಎಂದು ನಿರ್ಧರಿಸಿ. ನಿಮ್ಮ ರಬ್ಬರ್‌ಸ್ಟಾಂಪ್, ಪರಿಚಯ ಚೀಟಿ (ವಿಸಿಟಿಂಗ್‌ಕಾರ್ಡ್), ಲೆಟರ್‌ಹೆಡ್‌ಗಳು ಕನ್ನಡ ದಲ್ಲೇ ಇರಲಿ. ಅನಿವಾರ್ಯ ಎನಿಸಿದರೆ ಕನ್ನಡದ ಕೆಳಗೆ ಇಂಗ್ಲಿಷ್‌ನಲ್ಲಿ ಮುದ್ರಿಸಿ.

28) ರೈಲ್ವೆ, ಅಂಚೆ, ಆದಾಯತೆರಿಗೆ ಮುಂತಾದ ಕೇಂದ್ರ ಸರ್ಕಾರದ ಕಚೇರಿಗಳಿಗೆ ಹೋದಾಗ ಕನ್ನಡ ನಮೂನೆ ಯನ್ನೇ ಬಳಸಿ, ಕನ್ನಡ ನಮೂನೆಗಳಿಲ್ಲದಿದ್ದರೆ ಕೇಂದ್ರ ಸರ್ಕಾರ ಒಪ್ಪಿರುವ ತ್ರಿಭಾಷಾ ಸೂತ್ರಕ್ಕೆ ವಿರೋಧವಾಗುತ್ತದೆ. ಎಂದು ಸಂಬಂಧ ಪಟ್ಟವರಿಗೆ ತಿಳಿಸಿ, ಅಲ್ಲಿರುವ ಸಲಹೆ/ ದೂರು ಪೆಟ್ಟಿಗೆಯಲ್ಲಿ ಕನ್ನಡ ಬಳಸದಿರುವುದಕ್ಕೆ ನಿಮ್ಮ ಅಸಮಾಧಾನ ದಾಖಲಿಸಿ

30) ಸಮಯ ಸಿಕ್ಕಾಗಲೆಲ್ಲ ಮಿತ್ರರಿಗೆ, ಪರಿಚಿತರಿಗೆ ಕನ್ನಡದಲ್ಲೇ ವ್ಯವಹರಿಸೋಣ ಎಂಬ ಮಾತನ್ನು ಹೇಳುವ ಪತ್ರ ಬರೆಯಿರಿ. ಕನ್ನಡ ಸಮಸ್ಯೆ - ಪರಿಹಾರ ಕುರಿತು ಚಿಂತಿಸಲು ಮನವಿ ಮಾಡಿ, ನಿಮ್ಮ ಶಾಸಕರು, ಸಂಸತ್ ಸದಸ್ಯರಿಗೆ ನಾಡು-ನುಡಿಯ ಸಮಸ್ಯೆಗಳ ವಿಚಾರ ಪತ್ರ ಬರೆಯಿರಿ.

31) ಕನ್ನಡಕ್ಕೆ ಅಪಾಯವಿದೆ, ಅವಮಾನ ಆಗುತ್ತಿದೆ ಅನ್ನಿಸಿದರೆ ಪತ್ರಿಕೆಗಳಿಗೆ ಬರೆಯಿರಿ, ಕನ್ನಡ ಸಂಘಟನೆಗಳಿಗೆ ತಿಳಿಸಿ. ಸಂಬಂಧಪಟ್ಟ ಇಲಾಖೆಯವರಿಗೆ ಬರೆಯಿರಿ, ಇಂತಹ ಪ್ರಯತ್ನಗಳು ತಕ್ಷಣ ಫಲ ನೀಡದಿರಬಹುದು. ನಿರಾಶರಾಗ ಬೇಡಿ, ದೂರದರ್ಶನ (ಉಪಗ್ರಹ ವಾಹಿನಿಗಳು), ಆಕಾಶವಾಣಿಗಳಲ್ಲಿ ಕಳಪೆ ಕಾರ್ಯಕ್ರಮಗಳು ಬರುತ್ತಿದ್ದರೆ ಪತ್ರ ಬರೆದು ಅಸಮಾಧಾನ ಸೂಚಿಸಿ, ಬೇರೆಯವರೂ ಪತ್ರ ಬರೆಯುವಂತೆ ಮಾಡಿ, ನಿಶ್ಚಿತವಾಗಿ ಕಾರ್ಯಕ್ರಮಗಳ ಗುಣಮಟ್ಟ ಸುಧಾರಿಸುತ್ತದೆ.

.... **ಮುಂದುವರೆಯುತ್ತದೆ**



# ಎಲ್ಲೆಂದರಲ್ಲಿ ಕಸ ಸುಟ್ಟರೆ

## 1 ಲಕ್ಷ ರೂ. ದಂಡ, 5 ವರ್ಷ ಜೈಲು!



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು


ರಾಜಧಾನಿಯಲ್ಲಿ ಕಸದ ನಿರ್ವಹಣೆ ತಲೆನೋವಾಗಿದೆ. ಮನೆಮನೆಯ ಮುಂದೆ ಜಿಬಿಎಯ ಗಾಡಿ ಬಂದರೂ ಜನ ಅದಕ್ಕೆ ಕಸ ಕೊಡದೆ ಮೋರಿಗೆಸೆಯುವುದು, ಬೀದಿ ಬದಿ ಎಸೆಯುವುದು ಮಾಡುತ್ತಿದ್ದರು, ಇದನ್ನು ತಡೆಗಟ್ಟಲು ಜಿಬಿಎ ಸಿಬ್ಬಂದಿ ಅಂಥವರ ಮನೆ ಮುಂದೆಯೇ ಕಸ ಹಾಕಿ ದಂಡ ಹಾಕಿದ್ದ ಘಟನೆ ನಡೆದಿತ್ತು. ಇದೀಗ ನಗರದಲ್ಲಿ ಎಲ್ಲೆಂದರಲ್ಲಿ ಕಸ ಸುಟ್ಟರೆ ಒಂದು ಲಕ್ಷ ರೂ. ದಂಡ ಹಾಗೂ ಐದು ವರ್ಷ ಜೈಲು ಶಿಕ್ಷೆ ವಿಧಿಸಲು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ ಹೊಸ ನಿಯಮ ಜಾರಿ ತಂದಿದೆ.

ಈ ಸಂಬಂಧ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ ಸಾರ್ವಜನಿಕರಿಗೆ ಕರೆ ನೀಡಿದ್ದು ಹಾಗೂ ಕಸ ಸುಡುತ್ತಿರುವ ವಿಡಿಯೋ ಹಂಚಿಕೊಳ್ಳಲು ಕರೆ ನೀಡಿದೆ. ಕಸವನ್ನು ಸಂಸ್ಕರಣ ಘಟಕಕ್ಕೆ ಕಳುಹಿಸಿ, ಅದರಿಂದ ವಿದ್ಯುತ್ ಉತ್ಪಾದಿಸಲಾಗುತ್ತದೆ. ಹೀಗಾಗಿ ಎಲ್ಲೆಂದರಲ್ಲಿ ಕಸ ಸುಡದಂತೆ ಎಚ್ಚರವಹಿಸಿ ಹಾಗೂ ನಿಯಮ ಉಲ್ಲಂಘಿಸಿದ್ರೆ ದಂಡ ವಿಧಿಸಲಾಗುವುದು ಎಂದು ಘನತ್ಯಾಜ್ಯ ನಿರ್ವಹಣಾ ಇಲಾಖೆ ತಿಳಿಸಿದೆ.

ಈ ಮೊದಲು ಎಲ್ಲೆಂದರಲ್ಲಿ ಕಸ ಎಸೆದವರ ವಿಡಿಯೋ- ಫೋಟೋ ಮಾಡಿಕೊಂಡು ಅಂಥವರ ಮನೆ ಮುಂದೆಯೇ ಜಿಬಿಎ ಸಿಬ್ಬಂದಿ ಕಸ ಸುರಿದಿದ್ದರು. ಎರಡನೇ ಬಾರಿಗೆ ಭಾರಿ ದಂಡ ವಿಧಿಸಿದ್ದರು. ಕಸ ಸುಟ್ಟರೆ ಉಂಟಾಗುವ ವಾಯುಮಾಲಿನ್ಯ ತಡೆಯಲು ಹೊಸ ನಿಯಮ ಜಾರಿ ಮಾಡಿದ್ದು, ಪರಿಸರ ಸಂರಕ್ಷಣಾ ಕಾಯ್ದೆಯಡಿಯಲ್ಲಿ ಒಂದು ಲಕ್ಷ ರೂ. ವರೆಗೂ ದಂಡ ಹಾಗೂ ಐದು ವರ್ಷ ಜೈಲು ಶಿಕ್ಷೆ ವಿಧಿಸಲು ನಿರ್ಧರಿಸಿದೆ.



# ಖಾಲಿ ಹೊಟ್ಟೆಗೆ ಕಡಲೆ ನೀರು



ಖಾಲಿ ಹೊಟ್ಟೆಯಲ್ಲಿ ನೆನೆಸಿದ ಕಡಲೆ ನೀರನ್ನು ಕುಡಿಯುವುದರಿಂದ ನಿಮ್ಮ ಮೂಳೆಗಳು ಬಲಗೊಳ್ಳುತ್ತವೆ ಮತ್ತು ಅನೇಕ ಉತ್ತಮ ಆರೋಗ್ಯ ಪ್ರಯೋಜನಗಳನ್ನು ಒದಗಿಸುತ್ತವೆ ಎನ್ನುವುದನ್ನು ನೀವು ಕೇಳಿರುವಿರಿ. ಇದರಿಂದಾಗುವ ಪ್ರಯೋಜನಗಳ ಬಗ್ಗೆ ತಿಳಿಯೋಣ. ಕಡಲೆ ಸೇವನೆ ಆರೋಗ್ಯಕ್ಕೆ ಉತ್ತಮ ಎನ್ನುವುದನ್ನು ನೀವು ಕೇಳಿರಬಹುದು, ಆದರೆ ಕಡಲೆ ನೆನೆಸಿಟ್ಟಿರುವ ನೀರನ್ನು ಕುಡಿಯೋದು ಕೂಡಾ ಆರೋಗ್ಯಕ್ಕೆ ಸಾಕಷ್ಟು ಪ್ರಯೋಜನಗಳನ್ನು ನೀಡುತ್ತದೆ ಎನ್ನುವುದು ನಿಮಗೆ ಗೊತ್ತಾ ಕಡಲೆ ನೀರು ವಿಚಿತ್ರವೆನಿಸಬಹುದು ಆದರೆ ಇದು ನಿಜ.

ಕಡಲೆಯು ಸಾಕಷ್ಟು ಪೌಷ್ಟಿಕಾಂಶಗಳನ್ನು ಹೊಂದಿದ್ದು, ಈ ನೀರನ್ನು ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಸೇವಿಸುವುದರಿಂದ ಸಾಕಷ್ಟು ಪ್ರಯೋಜನಗಳಿವೆ. ಅವುಗಳನ್ನ ನಾವಿಲ್ಲಿ ತಿಳಿಯೋಣ.

**ಕಡಲೆ ನೆನೆಸಿಟ್ಟ ನೀರಿನ ಬಣ್ಣ ಬದಲಾಗುವುದು ಯಾಕೆ?:** ಕಡಲೆಯನ್ನು ನೆನೆಸಿದ ನಂತರ, ನೀರಿನ ಬಣ್ಣ ಬದಲಾಗುವುದನ್ನು ನೀವು ಗಮನಿಸಿರಬಹುದು. ಆದರೆ ಇದು ಏಕೆ ಸಂಭವಿಸುತ್ತದೆ ಎಂದು ನೀವು ಎಂದಾದರೂ ಯೋಚಿಸಿದ್ದೀರಾ?.

ವಾಸ್ತವವಾಗಿ, ಕಡಲೆಯನ್ನು ನೆನೆಸಿದ ನಂತರ ಅದರಲ್ಲಿರುವ ಅನೇಕ ಸೂಕ್ಷ್ಮ ಪೋಷಕಾಂಶಗಳು ನೀರಿನಲ್ಲಿ ಬಿಡುಗಡೆಯಾಗುತ್ತವೆ, ಅವುಗಳಲ್ಲಿ ಹೆಚ್ಚಿನವು ವಿಟಮಿನ್ ಬಿ ನಂತಹ ನೀರಿನಲ್ಲಿ ಕರಗುವ ಜೀವಸತ್ವಗಳಾಗಿರಬಹುದು.

ಆದ್ದರಿಂದ, ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಈ ನೀರನ್ನು ಕುಡಿಯುವುದರಿಂದ ಅನೇಕ ಪ್ರಯೋಜನಗಳನ್ನು ಪಡೆಯಬಹುದು.

**ಕಡಲೆ ನೀರು ನಿಮಗೆ ಹಲವು ವಿಧಗಳಲ್ಲಿ ಪ್ರಯೋಜನಕಾರಿಯಾಗಿದೆ. ಮೊದಲನೆಯದಾಗಿ, ಇದು ನಿಮ್ಮ ದೇಹದಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಇದರ ಪೋಷಕಾಂಶಗಳು ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತವೆ ಮತ್ತು ರೋಗಗಳ ವಿರುದ್ಧ ಹೋರಾಡುವ ಶಕ್ತಿಯನ್ನು ನೀಡುತ್ತವೆ. ಕಡಲೆಯಲ್ಲಿ ಕಾರ್ಬೋಹೈಡ್ರೇಟ್‌ಗಳು, ಪ್ರೋಟೀನ್, ಫೈಬರ್, ಕ್ಯಾಲ್ಸಿಯಂ, ಮೆಗ್ನೀಸಿಯಮ್, ರಂಜಕ, ಪೊಟ್ಯಾಸಿಯಮ್ ಮತ್ತು ವಿಟಮಿನ್ ಎ, ಬಿ, ಸಿ ಮತ್ತು ಡಿ ಸಮೃದ್ಧವಾಗಿದೆ. ಕಡಲೆಯನ್ನು ನೆನೆಸಿ ಅಥವಾ ಕುದಿಸಿದಾಗ ಅದರಲ್ಲಿರುವ ಜೀವಸತ್ವಗಳು ಮತ್ತು ಖನಿಜಗಳು ನೀರಿನಲ್ಲಿ ಬಿಡುಗಡೆಯಾಗುತ್ತವೆ, ಇದು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.**

**ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ:** ಕಡಲೆ ನೀರು ಜೀರ್ಣಕ್ರಿಯೆಯನ್ನು ಸುಧಾರಿಸುವಲ್ಲಿ ಸಹ ಬಹಳ ಪರಿಣಾಮಕಾರಿಯಾಗಿದೆ. ಕಡಲೆ ನೀರಿಗೆ ಕಪ್ಪು ಉಪ್ಪನ್ನು ಬೆರೆಸಿ ಕುಡಿಯೋದರಿಂದ ಅದು ನಿಮ್ಮ ಕರುಳನ್ನು ಶುದ್ಧೀಕರಿಸುತ್ತದೆ ಮತ್ತು ನಿಮ್ಮ ಚಯಾಪಚಯವನ್ನು ಸುಧಾರಿಸುತ್ತದೆ, ಇದು ಉತ್ತಮ ಜೀರ್ಣಕ್ರಿಯೆಗೆ ಕಾರಣವಾಗುತ್ತದೆ.


**ಕಾಲಿನ ಬಿಗಿತವನ್ನು ಕಡಿಮೆ ಮಾಡುತ್ತದೆ:** ಕಡಲೆ ನೀರು ಸ್ನಾಯುಗಳನ್ನು ಬಲಪಡಿಸಲು ಸಹಾಯ ಮಾಡುತ್ತದೆ. ಇದು ಕಬ್ಬಿಣ ಮತ್ತು ಪ್ರೋಟೀನ್ ಅನ್ನು ಒದಗಿಸುತ್ತದೆ, ಇದು ಸ್ನಾಯುಗಳನ್ನು ಬಲಪಡಿಸುತ್ತದೆ ಮತ್ತು ಕಾಲಿನ ಬಿಗಿತವನ್ನು ಕಡಿಮೆ ಮಾಡುತ್ತದೆ. ನಿರಂತರ ಕಾಲು ನೋವಿನಿಂದ ಬಳಲುತ್ತಿರುವ ಜನರಿಗೆ ಕಡಲೆ ನೀರು ಕುಡಿಯುವುದು ಪ್ರಯೋಜನಕಾರಿಯಾಗಬಹುದು.

**ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ**

**ಮಲಬದ್ಧತೆಯನ್ನು ನಿವಾರಿಸುತ್ತದೆ:** ಕಡಲೆ ನೀರನ್ನು ಕುಡಿಯುವುದು ಮಲಬದ್ಧತೆಯನ್ನು ನಿವಾರಿಸುವಲ್ಲಿ ಬಹಳ ಪರಿಣಾಮಕಾರಿಯಾಗಿದೆ. ಇದು ಚಯಾಪಚಯ ದರವನ್ನು ಹೆಚ್ಚಿಸುತ್ತದೆ ಮತ್ತು ಮಲಬದ್ಧತೆಯನ್ನು ನಿವಾರಿಸಲು ಸಹಾಯ ಮಾಡುತ್ತದೆ. ಇದು ಮಲವನ್ನು ಮೃದುವಾಗಿಸುತ್ತದೆ ಮತ್ತು ಕೊಲೊನ್‌ನಿಂದ ಅದನ್ನು ಹೊರಹಾಕಲು ಸಹಾಯ ಮಾಡುತ್ತದೆ. ಆದ್ದರಿಂದ ನೀವು ಮಲಬದ್ಧತೆಯಿಂದ ಬಳಲುತ್ತಿದ್ದರೆ, ಕಡಲೆ ಮತ್ತು ಕಡಲೆ ನೀರು ಎರಡೂ ಪ್ರಯೋಜನಕಾರಿ.

**ರಾತ್ರಿ ನೆನೆಸಿಡಿ:** ಖಾಲಿ ಹೊಟ್ಟೆಯಲ್ಲಿ ಕಡಲೆ ನೀರನ್ನು ಕುಡಿಯಲು ನೀವು ರಾತ್ರಿಯಿಡೀ ಕಡಲೆಯನ್ನು ನೆನೆಸಿ ಮತ್ತು ಬೆಳಿಗ್ಗೆ ಸೋಸಿದ ನೀರನ್ನು ಕುಡಿಯಿರಿ. ಬಯಸಿದಲ್ಲಿ ನೀವು ರುಚಿಗೆ ಕಪ್ಪು ಉಪ್ಪು, ಹುರಿದ ಜೀರಿಗೆ ಪುಡಿ ಅಥವಾ ನಿಂಬೆ ರಸವನ್ನು ಸೇರಿಸಬಹುದು.

# ರಾಮಾಯಣ



## ರಾವಣನು ಸೀತಾದೇವಿಯನ್ನು ಅಶೋಕವನದಲ್ಲಿಟ್ಟಿದ್ದು

• ಹಿಂದಿನ ಸಂಚಿಕೆಯಿಂದ **120 ನೆಯ ಅಧ್ಯಾಯ**

ನೀನು ಕಳುಹಿಸುವ ರಾಕ್ಷಸರು ಗರುಡನ ಸಮಕ್ಷದಲ್ಲಿ ಸರ್ಪಗಳು ಲಯವನ್ನೆಡುವಂತೆ ಶ್ರೀರಾಮನ ಶರಹತಿಯಿಂದ ಲಯವನ್ನೆ ದದೆ ಉಳಿಯರು. ಶ್ರೀರಾಮನ ಎದುರಾಗಿ ನಿಂತ ರಾಕ್ಷಸರ ಶರೀರಗಳನ್ನು, ಗಂಗೆಯು ತಡಿಯನ್ನು ಹೊಯ್ದು ಕೆಡಹುವಂತೆ ಆತನ ಬಾಣಗಳು ಉಚ್ಚಳಿಸಿ ಕೆಡಹುವುವು. ದೇವಾಸುರರಿಂದ ಕೊಲ್ಲಲು ಶಕ್ಯನಲ್ಲದ ಶ್ರೀರಾಮ ನೊಡನೆ ವೈರವನ್ನು ಬೆಳೆಯಿಸಿ ನೀನು ಜೀವಸಹಿತನಾಗಿ ಉಳಿಯಲಾರೆ. ಯಾಗದಲ್ಲಿ ಯೂಪಸ್ತಂಭಕ್ಕೆ ಕಟ್ಟಿದ ಪಶುವು ಹೋಮಕಾಲ ಬರುವವರೆಗೆ ಜೀವಸಹಿತವಾಗಿರುವಂತೆ ನೀನು ನಿನ್ನ ಆಯುಷ ವಿರುವವರೆಗೆ ಬಲಿಷ್ಠನಾದ ಶ್ರೀರಾಮನ ದೃಷ್ಟಿಗೆ ಗೋಚರವಾಗದಿರುವೆ. ಶ್ರೀರಾಮನು ರೋಷದಿಂದ ಪ್ರಜ್ವಲಿಸುವ ತನ್ನ ದೃಷ್ಟಿಯಿಂದ ನಿನ್ನನ್ನು ಕಂಡೊಡನೆಯೇ ದಹಿಸುವನು. ಆತನು ಕೋಪಿಸಿದರೆ ಅಂತರಿಕ್ಷದಲ್ಲಿರುವ ಚಂದ್ರನನ್ನಾದರೂ ಭೂಮಂಡಲಕ್ಕೆ ಕೆಡಹುವನು; ಸಮುದ್ರ ವನ್ನಾದರೂ ಒಣಗಿಸುವನು. ಅಂಥ ಶ್ರೀರಾಮನು ನನ್ನನ್ನು ಕೃಪಾದೃಷ್ಟಿಯಿಂದ ನೋಡಿ ರಕ್ಷಿಸುವನಲ್ಲದೆ ಉಪೇಕ್ಷೆಮಾಡನು. ನಿನಗೆ ಬಂದ ಈ ಕೆಟ್ಟ ಬುದ್ಧಿಯು ನಿನ್ನ ಆಯುಸ್ಸಿಗೂ ಐಶ್ವರ್ಯಕ್ಕೂ ಬಲಕ್ಕೂ ಇಂದ್ರಿಯಕ್ಕೂ ವೆಟ್ಟು ಕೊಡದಿರದು. ಯಾವಾಗಲೂ ಪತಿಯನ್ನಗಲದಿದ್ದ ನನಗೆ ಪತಿವಿಯೋಗವನ್ನು ಮಾಡಿದ ಪಾಪಕರ್ಮದಿಂದ ನಿನಗೆ ಹಾನಿಯುಂಟಾಗಿ ಲಂಕಾಪಟ್ಟಣಕ್ಕೆ ಒಡೆಯನಿಲ್ಲದೆ ಹೋಗುವುದು. ಶ್ರೀರಾಮನು ನಿನ್ನ ಗರ್ವವನ್ನೂ ನಿನ್ನ ಬಲವನ್ನೂ ನಿನ್ನ ಪರಾಕ್ರಮವನ್ನೂ ನಿನ್ನ ಏಳಿಗೆಯನ್ನೂ ಸಹಿಸನು. ಪ್ರಾಣಿಗಳಿಗೆ ಯಾವ ಸಮಯದಲ್ಲಿ ವಿನಾಶವು ಸಮೀಪಿಸು ವುದೋ ಆ ಸಮಯದಲ್ಲಿ ಅವರು ಮಾಡಬಾರದ ದುಷ್ಕರ್ಮಗಳನ್ನು ಮಾಡಿ ವಿನಾಶವನ್ನು ಪಡೆದು ಯಮಮಂದಿರವನ್ನೋದುವರು.

ದುವರು. ಈ ಪ್ರಕಾರ ನಿನಗೂ ನಿನ್ನನ್ನು ಹೊಂದಿರುವ ರಾಕ್ಷಸರಿಗೂ ಲಂಕಾಪಟ್ಟಣಕ್ಕೂ ನಾಶಕಾಲ ಬಂದದ್ದರಿಂದ ಅಕ್ರಲ್ಯದನ್ನು ಮಾಡಿ ಬಲಾತ್ಕಾರದಿಂದ ನನ್ನನ್ನು ಒಡಿದು ತಂದಿದ್ದೀಯೆ. ಮಹಾತ್ಮನಾದ ಶ್ರೀರಾಮನ ಪಟ್ಟದ ರಾಣಿಯಾದ ನನ್ನನ್ನು ಪಾಪಾತ್ಮನೂ ರಾಕ್ಷಸಾಧಮನೂ ಆದ ನೀನು ಮುಟ್ಟಲೂ ಯೋಗ್ಯನಲ್ಲ. ವಿಕಸಿತವೂ ಮನೋಹರವೂ ಆದ ಕಮಲಗಳ ಮಧ್ಯದಲ್ಲಿ ರಾಜಹಂಸಪಕ್ಷಿಯೊಡನೆ ವಿಹರಿಸಿಕೊಂಡಿರುವ ಹಂಸಪಕ್ಷಿಯು ಹುಲ್ಲುಗೂಡಿ ನಲ್ಲಿರುವ ನೀರುಕಾಗೆಯನ್ನು ಮುಚ್ಚಿದಿರುದಂತೆ, ಮಹಾತ್ಮನಾದ ಶ್ರೀರಾಮನೊಡನೆ ವಿಹರಿಸಿ ಕೊಂಡಿದ್ದ ನಾನು ರಾಕ್ಷಸಾಧಮನಾದ ನಿನ್ನನ್ನು ಕಣ್ಣೆತ್ತಿಯೂ ನೋಡೆನು. ನಾನು ನಿಂದಿತವಾದ ಶರೀರವನ್ನಾದರೂ ಬಿಡುವೆನಲ್ಲದೆ ನಿನ್ನ ಮಾತನ್ನು ಕೇಳೆನು ಎಂದು ಕೋಪಾತಿಶಯದಿಂದ ನುಡಿದು ತಿರುಗಿ ಮಾತನಾಡದೆ ಸುಮ್ಮನಾದಳು.

**ಮುಂದುವರಿಯುವುದು...**

# ಟ್ರಾಫಿಕ್ ಪೊಲೀಸ್ ಆಗಿ ಕರ್ತವ್ಯ ನಿರ್ವಹಿಸಿದ ಸುರೇಶ್ ಕುಮಾರ್

• ಉದಯವಾಹಿನಿ, ಬೆಂಗಳೂರು

ಬಿಜೆಪಿಯ ಹಿರಿಯ ಶಾಸಕ ಸುರೇಶ್ ಕುಮಾರ್ ಅವರು ನಗರದ ಭಾಷ್ಯಂ ವೃತ್ತದಲ್ಲಿ ಸಂಚಾರಿ ಪೊಲೀಸ್ ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸಿದರು. ಬೆಂಗಳೂರು ಸಂಚಾರ ಪೊಲೀಸರ ಆಹ್ವಾನದ ಮೇರೆಗೆ ಸುರೇಶ್ ಕುಮಾರ್ ಅವರು ರಾಜಾಜಿನಗರದ ಭಾಷ್ಯಂ ವೃತ್ತದಲ್ಲಿ ಸುಮಾರು ಎರಡು ಗಂಟೆಗಳ ಕಾಲ ಕರ್ತವ್ಯ ನಿರ್ವಹಿಸಿದರು. ಟ್ರಾಫಿಕ್ ಪೊಲೀಸ್ ಆಗಿ ಕಾರ್ಯನಿರ್ವಹಿಸಿರುವುದು ಒಂದು ಉತ್ತಮ ಅನುಭವ ಎಂದ ಸುರೇಶ್ ಕುಮಾರ್ ಅವರು, ಪ್ರತಿ ಒಂದು ಗಂಟೆ ಸಂಚಾರಿ ಪೊಲೀಸರ ಕಾರ್ಯ ನಿರ್ವಹಣೆಗೆ ಸಹಾಯ ಮಾಡುವುದಾಗಿ ಪ್ರತಿಜ್ಞೆ ಮಾಡಿದರು. ನಿಜಕ್ಕೂ ಸಂಚಾರಿ ಪೊಲೀಸರು ಸಂಚಾರ ನಿಯಂತ್ರಣದಲ್ಲಿ ಏನೆಲ್ಲಾ ಸಮಸ್ಯೆಗಳನ್ನು ಎದುರಿಸುತ್ತಾರೆ ಮತ್ತು ಏನೆಲ್ಲಾ ಸಮಸ್ಯೆಗಳಿವೆ ಎಂಬುವುದು ಇಂದು ನನ್ನ ಅನುಭವಕ್ಕೆ ಬಂದಿದೆ ಎಂದರು. ಒಂದು ದಿನ ಸಂಚಾರಿ ಪೊಲೀಸ್ ಕಾನ್ಸ್‌ಟೇಬಲ್ ಆಗಿ ಕೆಲಸ ಮಾಡುವ ಮೂಲಕ ನಾನು ಅಪಾರ ಅನುಭವವನ್ನು ಪಡೆದುಕೊಂಡೆ ಮತ್ತು ಈ ಕೆಲಸವನ್ನು ನಾನು ಆನಂದಿಸಿದೆ. ಬೆಂಗಳೂರು ಸಂಚಾರಿ ಪೊಲೀಸರ ಈ ಉಪಕ್ರಮವು ನಿಜವಾಗಿಯೂ ಸ್ವಾಗತಾರ್ಹ ಎಂದು ಸುರೇಶ್ ಕುಮಾರ್ ಅವರು ಫೇಸ್‌ಬುಕ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.



ಅವರು ಟ್ರಾಫಿಕ್ ಪೊಲೀಸ್ ಜಾಕೆಟ್ ಧರಿಸಿ ಇತರ ಪೊಲೀಸ್ ಸಿಬ್ಬಂದಿಗಳೊಂದಿಗೆ ಕೆಲಸ ಮಾಡುತ್ತಿರುವುದು, ಸಂಚಾರವನ್ನು ನಿರ್ವಹಿಸುವುದು, ಅವರೊಂದಿಗೆ ಸಂವಹನ ನಡೆಸುವುದು, ಸಿಗ್ನಲ್ ಅನ್ನು ನಿರ್ವಹಿಸುವುದು ಮತ್ತು ಜಂಕ್ಷನ್‌ನಲ್ಲಿ ಸಂಚಾರ ನಿಯಮಗಳನ್ನು ಉಲ್ಲಂಘಿಸಿದ ಸಾರ್ವಜನಿಕರನ್ನು ಪ್ರಶ್ನಿಸುವುದನ್ನು ಅವರು


ಹಂಚಿಕೊಂಡ ವಿಡಿಯೋದಲ್ಲಿ ನೋಡಬಹುದು. ಇಂದು ಒಂದು ರೀತಿಯಲ್ಲಿ ನನಗೆ ಹಬ್ಬದ ವಾತಾವರಣ. ನಾವು ವಿವಿಧ ಹಬ್ಬಗಳು ಮತ್ತು ಕಾರ್ಯಕ್ರಮಗಳನ್ನು ಆಚರಿಸುತ್ತೇವೆ ಮತ್ತು ಭಾಗವಹಿಸುತ್ತೇವೆ. ಆದರೆ ಸಂಚಾರ ಪೊಲೀಸ್ ಸಿಬ್ಬಂದಿಯಾಗಿ ನಾನು ಪಡೆದ ಅನುಭವ ವಿಶಿಷ್ಟವಾಗಿದೆ. ಏಕೆಂದರೆ ಪ್ರಯಾಣಿಕರು ಸಂಚಾರ ನಿಯಮಗಳನ್ನು ಹೇಗೆ ಅನುಸರಿಸುತ್ತಾರೆ ಅಥವಾ ಪ್ರತಿಕ್ರಿಯಿಸುತ್ತಾರೆ ಮತ್ತು ನಿಯಮಗಳನ್ನು ಅರ್ಥಮಾಡಿ ಕೊಳ್ಳಲು ಪ್ರಯತ್ನಿಸಿದಾಗ ಅವರು ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದನ್ನು ನಾನು ವೈಯಕ್ತಿಕವಾಗಿ ತಿಳಿದುಕೊಂಡಿದ್ದೇನೆ ಎಂದು ಸುರೇಶ್ ಕುಮಾರ್ ಅವರು ವಿಡಿಯೋ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಮಾಜಿ ಸಚಿವರು ಒಂದು ದಿನದ ಸಂಚಾರಿ ಪೊಲೀಸ್‌ನ ಭಾಗವಾಗಿ ಸಂಚಾರಿ ಪೊಲೀಸ್ ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸಿದರು.ಇದು BTP ASTraM ಅಪ್ಲಿಕೇಶನ್ ಮೂಲಕ ನೋಂದಾಯಿಸಿಕೊಳ್ಳುವ ಮೂಲಕ ನಾಗರಿಕರು ಸಂಚಾರಿ ಠಾಣೆಯ ಅಧಿಕಾರಿಗಳು ಅಥವಾ ಸಿಬ್ಬಂದಿಯೊಂದಿಗೆ ಕೆಲಸ ಮಾಡಲು ಅವಕಾಶವನ್ನು ಒದಗಿಸುವ ಬೆಂಗಳೂರು ಸಂಚಾರಿ ಪೊಲೀಸರು ಪ್ರಾರಂಭಿಸಿದ ನವೀನ ಪ್ರಯೋಗವಾಗಿದೆ.

# ತಿಗಣೆ ಹೋಗಲಾಡಿಸಲು ಮನೆಮದ್ದು



ಹಾಸಿಗೆಯಲ್ಲಿರುವ ತಿಗಣೆಗಳನ್ನು ಶಾಶ್ವತವಾಗಿ ತೊಡೆದುಹಾಕಲು ನಿಮಗೆ ಸಹಾಯ ಮಾಡುವ ಕೆಲವು ಸರಳ ಮನೆಮದ್ದುಗಳ ಬಗ್ಗೆ ನಾವು ನಿಮಗೆ ಹೇಳಲಿದ್ದೇವೆ. ತಿಗಣೆ ಅಥವಾ ಬೆಡ್‌ಬಗ್ಸ್ ಬಗ್ಗೆ ನೀವು ಕೇಳಿರಬಹುದು. ಹೆಚ್ಚಾಗಿ ಪಿಜಿಯಲ್ಲಿ ಹಾಸ್ಟೆಲ್‌ಗಳ ಅನುಭವ ಪಡೆದಿರುವವರಿಗೆ ಇದರ ಅನುಭವ ಇದ್ದೇ ಇರುತ್ತದೆ. ಹಾಸಿಗೆಯ ಬದಿಗಳಲ್ಲಿ ಅಡಗಿ ಕುಳಿತುಕೊಂಡಿರುವ ಈ ಸಣ್ಣ ಕೀಟಗಳನ್ನು ಹಾಗೆಯೇ ಬಿಟ್ಟರೆ ಅವು ಸಂತಾನೋತ್ಪತ್ತಿ ಮಾಡಬಹುದು. ಅವು ಹೆಚ್ಚಾಗಿ ರಾತ್ರಿಯಲ್ಲಿ ಕಚ್ಚುತ್ತವೆ, ನಿದ್ರೆಗೆ ಅಡ್ಡಿಪಡಿಸುತ್ತವೆ ಮತ್ತು ದೇಹದ ಮೇಲೆ ಕೆಂಪು ದದ್ದುಗಳನ್ನು ಉಂಟುಮಾಡುತ್ತವೆ. ನೀವು ಸಹ ಈ ಸಮಸ್ಯೆಯಿಂದ ತೊಂದರೆಗೊಳಗಾಗಿದ್ದರೆ ಮತ್ತು ಅದನ್ನು ತೊಡೆದುಹಾಕಲು ಬಯಸಿದರೆ, ನೀವು ಕೆಲವು ಮನೆಮದ್ದುಗಳನ್ನು ಪ್ರಯತ್ನಿಸಬಹುದು.



**ಪುದೀನ:**ತಿಗಣೆಗಳು ಪುದೀನದ ವಾಸನೆಯನ್ನು ಸಹಿಸುವುದಿಲ್ಲ. ಇದನ್ನು ಮಾಡಲು, ಕೆಲವು ಪುದೀನ ಎಲೆಗಳನ್ನು ತೆಗೆದುಕೊಂಡು ಅವುಗಳನ್ನು ನಿಮ್ಮ ಹಾಸಿಗೆಯ ಬಳಿ ಅಥವಾ ತಿಗಣೆಗಳು ಅಡಗಿರುವ ಸ್ಥಳಗಳಲ್ಲಿ ಇರಿಸಿ. ಮೂರು ಅಥವಾ ನಾಲ್ಕು ದಿನಗಳ ನಂತರ, ಹಳೆಯ ಎಲೆಗಳನ್ನು ತೆಗೆದುಹಾಕಿ ಮತ್ತು ಅವುಗಳನ್ನು ಹೊಸ ಎಲೆಗಳೊಂದಿಗೆ ಬದಲಾಯಿಸಿ.

**ಬೇಕಿಂಗ್ ಸೋಡಾ:** ಹಾಸಿಗೆಯಲ್ಲಿ ಅಡಗಿರುವ ತಿಗಣೆಗಳನ್ನು ಓಡಿಸಲು ಹಾಸಿಗೆಯ ಸುತ್ತಲೂ, ತಿಗಣೆಗಳಿರುವ ಜಾಗದಲ್ಲಿ ಅಡಿಗೆ ಸೋಡಾವನ್ನು ಸಿಂಪಡಿಸಿ. ಅಡಿಗೆ ಸೋಡಾ ಒಣಗುತ್ತದೆ ಮತ್ತು ತಿಗಣೆಗಳನ್ನು ಕೊಲ್ಲುತ್ತದೆ. ಬೇಕಿಂಗ್ ಸೋಡಾವನ್ನು ಸುಮಾರು ಒಂದು ವಾರ ಹಾಗೆಯೇ ಬಿಡಿ, ಒಂದು ವಾರದ ನಂತರ ವ್ಯಾಕ್ಯೂಮ್ ಕ್ಲೀನರ್‌ನೊಂದಿಗೆ ಸಂಪೂರ್ಣವಾಗಿ ಸ್ವಚ್ಛಗೊಳಿಸಿ.

**ಬೇವಿನ ಎಲೆಗಳು:** ಬೇವು ಕೀಟಗಳನ್ನು ದೂರವಿಡುವ ಆಂಟಿಮೈಕ್ರೊಬಿಯಲ್ ಗುಣಗಳನ್ನು ಹೊಂದಿದೆ. ಹಾಸಿಗೆ ದೋಷಗಳು ಅಡಗಿರುವ ಸ್ಥಳಗಳ ಬಳಿ ಬೇವಿನ ಎಲೆಗಳನ್ನು ಇರಿಸಿ. ಅವುಗಳ ವಾಸನೆಯು ಹಾಸಿಗೆ ದೋಷಗಳನ್ನು ಹಿಮ್ಮೆಟ್ಟಿಸುತ್ತದೆ ಅಥವಾ ಕೊಲ್ಲುತ್ತದೆ. ಬೇವಿನ ಎಣ್ಣೆ, ನೀರು ಮತ್ತು ಸ್ವಲ್ಪ ಕರ್ಪೂರ ಪುಡಿಯನ್ನು ಬೆರೆಸಿ ಹಾಸಿಗೆ ಮತ್ತು ಸೋಫಾಗಳ ಮೇಲೆ ಸಿಂಪಡಿಸಬಹುದು.

**ವಿನೆಗರ್ ಮತ್ತು ಅಡಿಗೆ ಸೋಡಾ:** ವಿನೆಗರ್ ಮತ್ತು ಅಡಿಗೆ ಸೋಡಾವನ್ನು ದ್ರಾವಣದಲ್ಲಿ ಬೆರೆಸಿ ಸ್ಪ್ರೇ ಬಾಟಲಿಯಲ್ಲಿ ತುಂಬಿಸಿ. ಈ ಮಿಶ್ರಣವನ್ನು ತಿಗಣೆಗಳು ಇರುವ ಪ್ರದೇಶಗಳಲ್ಲಿ ಸಿಂಪಡಿಸಿ. ವಿನೆಗರ್ ಮತ್ತು ಬೇವಿನ ಎಣ್ಣೆ/ಬೇವಿನ ಎಲೆಯ ನೀರಿನ ಮಿಶ್ರಣವನ್ನು ಸಹ ಬಳಸಬಹುದು.

**ಲ್ಯಾವೆಂಡರ್ ಎಣ್ಣೆ:** ಲ್ಯಾವೆಂಡರ್ ಎಣ್ಣೆಯನ್ನು ತಿಗಣೆಗಳನ್ನು ತೊಡೆದುಹಾಕಲು ಪರಿಣಾಮಕಾರಿ ಎಂದು ಪರಿಗಣಿಸಲಾಗುತ್ತದೆ. ಇದನ್ನು ಮಾಡಲು, 10 ರಿಂದ 15 ಹನಿ ಲ್ಯಾವೆಂಡರ್ ಎಣ್ಣೆಯನ್ನು 50 ಮಿಲಿ ನೀರಿನೊಂದಿಗೆ ಬೆರೆಸಿ ಸ್ಪ್ರೇ ಬಾಟಲಿಯಲ್ಲಿ ತುಂಬಿಸಿ. ಈ ಮಿಶ್ರಣವನ್ನು ತಿಗಣೆಗಳಿರುವ ಪ್ರದೇಶಗಳಲ್ಲಿ ಸಿಂಪಡಿಸಿ.

**ಬಿಸಿನೀರು ಮತ್ತು ಸೂರ್ಯನ ಬೆಳಕು:** ತಿಗಣೆಗಳು ಶಾಖವನ್ನು ಸಹಿಸುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿ ನಿಮ್ಮ ಬೆಡ್‌ಶೀಟ್‌ಗಳು, ಮತ್ತು ದಿಂಬಿನ ಕವರ್‌ಗಳು ಮತ್ತು ಪರದೆಗಳನ್ನು ಬಿಸಿ ನೀರಿನಿಂದ ತೊಳೆಯಿರಿ ಮತ್ತು ನಂತರ ಅವುಗಳನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ. ಹಾಸಿಗೆಗಳು, ದಿಂಬುಗಳು ಮತ್ತು ಕುಶನ್‌ಗಳನ್ನು ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆಯಾದರೂ ಪ್ರಕಾಶಮಾನವಾದ ಸೂರ್ಯನ ಬೆಳಕಿಗೆ ಒಡ್ಡಿಕೊಳ್ಳಿ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ಕಳೆದ ಉದ್ಯಮಗಳ ಯಶಸ್ಸು ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಇಂದು ಹಣ ನಿಮ್ಮ ಕೈಯಲ್ಲಿ ಉಳಿಯುದಿಲ್ಲ. ಇಂದು ನೀವು ಹಣವನ್ನು ಉಳಿಸುವಲ್ಲಿ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ ನೀವು ಬಾಕಿಯಿರುವ ಎಲ್ಲಾ ಕುಟುಂಬದ ಸಾಲಗಳನ್ನು ತೀರಿಸಲು ಸಾಧ್ಯವಾಗುತ್ತದೆ.

**ವೃಷಭ** ನೀವು ವಿಶ್ರಾಂತಿ ಪಡೆಯಲು ಸಾಧ್ಯವಾಗುವ ಒಂದು ದಿನ. ನಿಮ್ಮ ಸ್ನಾಯುಗಳಿಗೆ ವಿಶ್ರಾಂತಿ ನೀಡಲು ತೈಲದಿಂದ ನಿಮ್ಮ ದೇಹಕ್ಕೆ ಮಸಾಜ್ ಮಾಡಿ. ಇಂದು ನಿಮ್ಮ ತಂದೆ ತಾಯಿಯರಲ್ಲಿ ಯಾರಾದರೂ ಒಬ್ಬರು ಹಣವನ್ನು ಸಂಗ್ರಹಿಸುವ ಬಗ್ಗೆ ಉಪನ್ಯಾಸಗಳನ್ನು ನೀಡಬಹುದು.

**ಮಿಥುನ** ನೀವು ಚೈತನ್ಯದಿಂದ ತುಂಬಿರುತ್ತೀರಿ ಮತ್ತು ಇಂದು ಅಸಾಮಾನ್ಯವಾದದ್ದೇನಾದರೂ ಸಾಧಿಸುತ್ತೀರಿ. ಚಂದ್ರನ ಸ್ಥಾನದಿಂದಾಗಿ, ಇಂದು ನಿಮ್ಮ ಹಣವನ್ನು ಅನಗತ್ಯ ಕೆಲಸಗಳಿಗೆ ಖರ್ಚು ಮಾಡಬಹುದು. ನೀವು ಹಣವನ್ನು ಸಂಗ್ರಹಿಸಲು ಬಯಸಿದರೆ ನಿಮ್ಮ ಸಂಗಾತಿಯೊಂದಿಗೆ, ಪೋಷಕರೊಂದಿಗೆ ಮಾತನಾಡಿ.

**ಕರ್ಕಾಟಕ** ನೀವು ವಿರಾಮದ ಸಂತೋಷವನ್ನು ಅನುಭವಿಸಲಿದ್ದೀರಿ. ನಿಮ್ಮ ಯಾವುದೇ ಹಳೆಯ ಸ್ನೇಹಿತ ಇಂದು ವ್ಯಾಪಾರದಲ್ಲಿ ಲಾಭಗಳಿಸಲು ನಿಮಗೆ ಸಲಹೆ ನೀಡಬಹುದು, ನೀವು ಈ ಸಲಹೆಯನ್ನು ಅನುಸರಿಸಿದರೆ, ನೀವು ಖಂಡಿತವಾಗಿಯೂ ಹಣ ಗಳಿಸುವಿರಿ. ಸಾಮಾಜಿಕ ಕಾರ್ಯಗಳಿಗೆ ಹಾಜರಾಗಲು ಅವಕಾಶಗಳಿರಬಹುದು.

**ಸಿಂಹ** ನಿಮ್ಮ ದಿಟ್ಟ, ನಿರ್ಭಯ ಅಭಿಪ್ರಾಯಗಳು ನಿಮ್ಮ ಸ್ನೇಹಿತನ ಅತ್ಮಗೌರವವನ್ನು ಹಾನಿ ಮಾಡಬಹುದು. ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ. ನಿಮ್ಮ ಬಿಡುವಿನ ವೇಳೆಯನ್ನು ನಿಮ್ಮ ಮನೆಯ ಸೌಂದರ್ಯ ಹೆಚ್ಚಿಸಲು ಬಳಸಿ. ನೀವು ಕುಟುಂಬಕ್ಕೆ ಇದರಿಂದ ಸಂತೋಷವಾಗುತ್ತದೆ. ಯಾರೂ ನಿಮ್ಮ ಪ್ರೀತಿಯನ್ನು ಬೇರ್ಪಡಿಸಲಾಗದು.

**ಕನ್ಯಾ** ನಿಮ್ಮ ವೈಯಕ್ತಿಕ ಸಮಸ್ಯೆಗಳು ಮಾನಸಿಕ ಸಂತೋಷವನ್ನು ಹಾಳು ಮಾಡಬಹುದು. ಆದರೆ ಒತ್ತಡವನ್ನು ನಿಭಾಯಿಸಲು ಆಸಕ್ತಿದಾಯಕವಾದದ್ದನ್ನೇನಾದರೂ ಓದುವ ಮೂಲಕ ಸ್ವಲ್ಪ ಮಾನಸಿಕ ವ್ಯಾಯಾಮ ಮಾಡಿಕೊಳ್ಳಿ. ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಇಂದು ಪರಿಹರಿಸಬಹುದು.

**ತುಲಾ** ಉತ್ತಮ ಆರೋಗ್ಯ ಏನಾದರೂ ಅಸಾಮಾನ್ಯವಾಗಿದ್ದನ್ನು ಸಾಧಿಸಲು ಸಾಧ್ಯವಾಗಿಸುವ ಒಂದು ವಿಶೇಷ ದಿನ. ಕಳೆದ ದಿನಗಳನ್ನು ಹೋಲಿಸಿದರೆ ಇಂದು ಆರ್ಥಿಕ ಉತ್ತಮವಾಗಲಿದೆ, ನೀವು ಹೆಚ್ಚಿನ ಹಣವನ್ನು ಪಡೆಯುತ್ತೀರಿ . ಕೌಟುಂಬಿಕ ಅಗತ್ಯಗಳಿಗೆ ತಕ್ಷಣದ ಗಮನ ನೀಡಬೇಕು.

**ವೃಶ್ಚಿಕ** ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ, ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ಇಂದಿನವರೆಗೂ ಅಗತ್ಯವಿಲ್ಲದೆ ಹಣ ಖರ್ಚುಮಾಡುತ್ತಿದ್ದ ಜನರು, ಇಂದು ಅವರು ತನ್ನನ್ನು ನಿಯಂತ್ರಿಸಬೇಕು, ಹಣಉಳಿಸಬೇಕು. ಅಂಚೆಯ ಮೂಲಕ ಬಂದ ಪತ್ರ ಸಂತೋಷದ ಸುದ್ದಿ ತರುತ್ತದೆ.

**ಧನಸ್ಸು** ಮಕ್ಕಳ ನಿಮ್ಮ ಇಚ್ಚೆಯಂತೆ ನಡೆದುಕೊಳ್ಳುವುದಿಲ್ಲ, ಇದು ನಿಮಗೆ ಕೋಪ ತರುತ್ತದೆ. ಅನಿಯಂತ್ರಿತ ಕೋಪ ಸಾಮಾನ್ಯವಾಗಿ ಎಲ್ಲರನ್ನೂ, ವಿಶೇಷವಾಗಿ ಕೋಪಗೊಂಡವರನ್ನು ಹೆಚ್ಚು ಘಾಸಿಗೊಳಿಸುತ್ತದೆ. ಏಕೆಂದರೆ ಇದು ಶಕ್ತಿಯನ್ನು ಕುಂಠಿತಗೊಳಿಸುತ್ತದೆ, ನಿರ್ಧಾರ ತೆಗೆದುಕೊಳ್ಳುವ ಶಕ್ತಿಯನ್ನು ಕಡಿಮೆಯಾಗಿಸುತ್ತದೆ.

**ಮಕರ** ಆರೋಗ್ಯದ ಬಗ್ಗೆ ಸ್ವಲ್ಪ ಕಾಳಜಿ ವಹಿಸಬೇಕು. ಇಂದು ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಾಮರ್ತ್ಯರಾಗಿರುತ್ತೀರಿ. ಸಾಮಾಜಿಕ ಸಮಾರಂಭಗಳು ಪ್ರಭಾವಿ ಮತ್ತು ಪ್ರಮುಖ ಜನರೊಡನೆ ನಿಮ್ಮ ಬಾಂಧವ್ಯವನ್ನು ಸುಧಾರಿಸಲು ಒಂದು ಪರಿಪೂರ್ಣ ಅವಕಾಶವಾಗಿರುತ್ತದೆ.

**ಕುಂಭ** ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ವ್ಯಾಪರದಲ್ಲಿ ಪ್ರಯೋಜನ ಇಂದು ಅನೇಕ ವ್ಯಾಪಾರಿಗಳ ಮುಖದ ಮೇಲೆ ಸಂತೋಷವನ್ನು ತರಬಹುದು. ಮನೆಯಲ್ಲಿನ ಹಬ್ಬದ ವಾತಾವರಣ ನಿಮ್ಮ ಉದ್ವೇಗವನ್ನು ಶಮನಗೊಳಿಸುತ್ತದೆ. ನೀವು ಇದರಲ್ಲಿ ಭಾಗವಹಿಸುತ್ತೀರಿ.

**ಮೀನ** ಒತ್ತಡದ ದಿನದ ಹೊರತಾಗಿಯೂ ಆರೋಗ್ಯ ಪರಿಪೂರ್ಣವಾಗಿರುತ್ತದೆ. ಬಯಸದೆ ಇರುವ ಯಾವುದೇ ಅತಿಥಿ ಇಂದು ನಿಮ್ಮ ಮನೆಗೆ ಬರಬಹುದು , ಅವರು ಬರುವುದರಿಂದಾಗಿ ನೀವು ಬರುವ ತಿಂಗಳಿಗೆ ಮುಂದೂಡಲಾಯಿಸಿರುವ ಮನೆಯ ಆ ವಸ್ತುಗಳ ಮೇಲು ಖರ್ಚು ಮಾಡಬಹುದು .

# ಬೀದರ್‌ನಲ್ಲಿ 5ನೇ ದಿನಕ್ಕೆ ಕಾಲಿಟ್ಟ ಕಬ್ಬು ಬೆಳೆಗಾರರ ಧರಣಿ

• ಉದಯವಾಹಿನಿ, ಬೀದರ್



ಉದಯವಾಹಿನಿ ಚಿತ್ರ



ಕಳೆದ ಐದು ದಿನಗಳಿಂದ ನಡೆಯುತ್ತಿರುವ ಕಬ್ಬಿನ ದರ ನಿಗದಿ ಹೋರಾಟವನ್ನು ಅಂತಿಮ ಹಂತಕ್ಕೆ ಕೊಂಡೊಯ್ಯಲು ಜಿಲ್ಲಾಡಳಿತವು ಸತತ ಪ್ರಯತ್ನ ನಡೆಸಿದ್ದು, ಹೆಚ್ಚುವರಿ ದರಕ್ಕೆ ಸಕ್ಕರೆ ಕಾರ್ಖಾನೆ ಮಾಲೀಕರು ಒಪ್ಪದ ಹಿನ್ನೆಲೆಯಲ್ಲಿ 5ನೇ ಬಾರಿ ಸಭೆಯೂ ಪೂರ್ಣ ಫಲ ಸಿಕ್ಕದೆ ಇರುವುದರಿಂದ ಇನ್ನೂ ಕಬ್ಬಿನ ಕಿಚ್ಚು ಮುಂದುವರಿದಿದೆ. ನಗರದ ಪ್ರವಾಸಿ ಮಂದಿರ ಎದುರು ಸಂಯುಕ್ತ ಕಿಸಾನ್ ಮೋರ್ಚಾ, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ನೇತೃತ್ವದಲ್ಲಿ ನಡೆಯುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹ ಸೋಮವಾರ 5ನೇ ದಿನಕ್ಕೆ ಕಾಲಿಟ್ಟಿದೆ. ರೈತರ ಹೋರಾಟ ಸ್ಥಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಪೌರಾಡಳಿತ ಸಚಿವ ರಹೀಂ ಖಾನ್ ಭೇಟಿ ನೀಡಿ ರೈತರ ಸಮಸ್ಯೆ ಆಲಿಸಿದರು. ಪ್ರತಿಟನ್ ಕಬ್ಬಿಗೆ 3,100 ರೂ. ಬೆಲೆ ನಿಗದಿಗೆ ಸಕ್ಕರೆ ಕಾರ್ಖಾನೆಗಳು ಒಪ್ಪದ ಹಿನ್ನೆಲೆಯಲ್ಲಿ ಕಳೆದ ಐದು ದಿನಗಳಿಂದ ಅಹೋರಾತ್ರಿ ಧರಣಿ ನಡೆಸಲಾಗುತ್ತಿದ್ದು, ನಮಗೆ ನ್ಯಾಯ ಕೊಡಿಸಬೇಕು ಎಂದು ಸಂಯುಕ್ತ ಕಿಸಾನ್ ಮೋರ್ಚಾ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ, ಜಿಲ್ಲಾರೈತ ಸಂಘದ ಅಧ್ಯಕ್ಷ ಸಿದ್ರಾಮಪ್ಪ ಆಣದೂರೆ ಕೋರಿದರು. ಕಬ್ಬಿನ ದರ ಕುರಿತು ಈಗಾಗಲೇ ಜಿಲ್ಲೆಯ ಸಕ್ಕರೆ ಕಾರ್ಖಾನೆಯವರೊಂದಿಗೆ ಚರ್ಚೆ ಮಾಡಿದ್ದೇನೆ. ಪ್ರತಿ ಟನ್‌ಗೆ 2,800 ರೂ. ಕೊಡಲು ಸಿದ್ಧರಿದ್ದು, ಹೆಚ್ಚುವರಿ ದರ ನೀಡಲು ಸಾಧ್ಯವಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕಬ್ಬಿನ ತೂಕದಲ್ಲಿ ಹೇರಾಫೇರಿ ನಡೆಯುತ್ತಿರುವ ಬಗ್ಗೆ ರೈತರಿಂದ ದೂರುಗಳು ಬಂದಿದ್ದು, ತೂಕದಲ್ಲಿ ದೋಷ ಕಂಡುಬಂದಲ್ಲಿ ಸಂಬಂಧಪಟ್ಟವರ ವಿರುದ್ಧ ಕ್ರಿಮಿನಲ್ ಮೊಕದಮ್ಮೆ ಹೂಡಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

> ಎಫ್‌ಆರ್‌ಪಿ ಆಧಾರ ಮೇಲೆ ಪ್ರತಿಟನ್ ಕಬ್ಬಿಗೆ 3,300 ರೂ. ಬೆಲೆ ನಿಗದಿಪಡಿಸಿರುವ ರಾಜ್ಯ ಸರಕಾರ ಈಗಾಗಲೇ ನಿಗದಿಯಾದ 3,200 ರೂ.ಗೆ ಹೆಚ್ಚುವರಿಯಾಗಿ ಸಕ್ಕರೆ ಕಾರ್ಖಾನೆಗಳಿಂದ 50 ರೂ. ಹಾಗೂ ರಾಜ್ಯ ಸರಕಾರದಿಂದ 50 ರೂ. ಭರಿಸುವ ಮೂಲಕ ಕಬ್ಬಿನ ದರ ನಿಗದಿಪಡಿಸಲಾಗಿದೆ. ಕಬ್ಬಿನ 11.25 ರಿಕವರಿಗೆ ಸಾಗಾಣಿಕೆ, ಕಟಾವು ವೆಚ್ಚ ಸೇರಿ 3300 ರೂ. ಬೆಲೆ ಆಗಲಿದೆ.
> – ಈಶ್ವರ ಖಂಡ್ರೆ, ಸಚಿವ

# ಚಿಂತನಹಳ್ಳಿ 'ಗವಿ' ಅಭಿವೃದ್ಧಿ ಯಾವಾಗ?

## ಮಿನಿ ಫಾಲ್ಸ್‌ನಡುವೆ ದೇವರ ದರ್ಶನ ಪ್ರವಾಸಿಗರಿಗೆ 'ಮರೀಚಿಕೆ'ಯಾಗಿದೆಯೇ?

• ಉದಯವಾಹಿನಿ, ಯಾದಗಿರಿ

**ಉಮೇಶ ಕೆ. ಮುದ್ನಾಳ ಗರಂ**

ಗುರುಮಠಕಲ್ ತಾಲ್ಲೂಕಿನ ಚಿಂತನಹಳ್ಳಿ ಶ್ರೀ ಗವಿ ಸಿದ್ಧಲಿಂಗೇಶ್ವರ ದೇವಾಲಯ ಪ್ರಕೃತಿ ಸೌಂದರ್ಯ, ಭಕ್ತಿಭಾವದ ಅಪೂರ್ವ ಸಂಗಮ. ಬೆಟ್ಟದ ಮಡಿಲಲ್ಲಿ ಅರಳಿರುವ ಪುಣ್ಯಕ್ಷೇತ್ರ, ಗರ್ಭಗುಡಿಯ ಮೇಲಿನಿಂದಲೇ ವರ್ಷಪೂರ್ತಿ ಹರಿಯುವ ಮಿನಿ ಫಾಲ್ಸ್ ದೇವರ ದರ್ಶನಕ್ಕೆ ಬರುವವರಿಗಿದು ಭಕ್ತಿಯಲ್ಲಿ ತೇಲಿಸುವ ವಿಶೇಷ ಅನುಭವ. ಆದರೆ, ಇಷ್ಟೊಂದು ಶಕ್ತಿ ಸಾಮರ್ಥ್ಯವಿದ್ದರೂ ಸರಕಾರ ಮತ್ತು ಜಿಲ್ಲಾಡಳಿತದ ನಿರ್ಲಕ್ಷ್ಯದಿಂದ ಸ್ಥಳ ಅಭಿವೃದ್ಧಿ ಕಾಣದೆ ಪ್ರವಾಸಿಗರ ಕಣ್ಣಿಗೆ ಮರೀಚಿಕೆ ಆಗಿ ಬಿಟ್ಟಿದೆ ಎಂದು ಸಾಮಾಜಿಕ ಹೋರಾಟಗಾರ ಉಮೇಶ ಕೆ. ಮುದ್ನಾಳ ಆರೋಪಿಸಿದ್ದಾರೆ.

**ವರ್ಷದ 12 ತಿಂಗಳು ಹರಿಯುವ ಫಾಲ್ಸ್-ಭಕ್ತರಿಗೆ ಮಿನಿ ಪ್ರವಾಸಿ ತಾಣ:** ಚಿಂತನಹಳ್ಳಿ ಗವಿಗೆ ಮಳೆಗಾಲ ಮಾತ್ರವಲ್ಲದೆ ವರ್ಷದ ಹನ್ನೆರಡು ತಿಂಗಳುವೂ ನೀರು ಹರಿಯುತ್ತದೆ. ಫಾಲ್ಸ್ ಮಧ್ಯೆ ದಾರಿ ಮಾಡಿ ಕೊಂಡು ಹೋಗಿ ದೇವರ ದರ್ಶನ ಮಾಡುವುದು ಇಲ್ಲಿ ಕಂಡುಬರುವ ಅಪರೂಪದ ಸೊಬಗು. ದಿನ ನಿತ್ಯ ನೂರಾರು ಭಕ್ತರು ಪ್ರವಾಸಿಗರು ಆಗಮಿಸುತ್ತಿದ್ದರೂ, ಸ್ಥಳದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಗಟ್ಟಿ ಸಮಸ್ಯೆಯಾಗಿದೆ. ಈ ಸಂದರ್ಭದಲ್ಲಿ ದೊಡ್ಡಯ್ಯಸ್ವಾಮಿ, ಶರಣು, ಸುನಂದ, ಹರ್ಷಿತಾ, ಅರ್ಪಿತಾ, ಪವನ, ವಿಶಾಲ್ ಸೇರಿ ಅನೇಕ ಭಕ್ತರು ಉಪಸ್ಥಿತರಿದ್ದರು.

> ವರ್ಷಪೂರ್ತಿ ಜಲಪಾತ ಹರಿಯುವ ಸ್ಥಳವೇ ವಿರಳ. ಇಲ್ಲಿ ಎಲ್ಲವಿದೆ ಆದರೆ ವ್ಯವಸ್ಥೆ ಮಾತ್ರ ಇಲ್ಲ. ಸರ್ಕಾರ ಗಂಭೀರವಾಗಿ ಗಮನ ಹರಿಸಬೇಕು.
> – ಪವನ, ಪ್ರವಾಸಿಗ




ಉದಯವಾಹಿನಿ ಚಿತ್ರ



ಉದಯವಾಹಿನಿ ಚಿತ್ರ

> ಕನಿಷ್ಠ ಸೌಕರ್ಯಗಳ ಕೊರತೆ ಭಕ್ತರಿಗೆ ಕಿರಿಕಿರಿ. ತಕ್ಷಣ ಜೀರ್ಣೋದ್ದಾರ ಮಾಡಿ ಭಕ್ತಸೇವೆಯನ್ನು ಬಲಪಡಿಸುವ ಅಗತ್ಯವಿದೆ.
> – ಹರ್ಷಿತಾ, ಭಕ್ತೆ

> **ಈ ಪುಣ್ಯ ಕ್ಷೇತ್ರದಲ್ಲಿ ವ್ಯವಸ್ಥೆಯೇ ಇಲ್ಲ! ಮುದ್ನಾಳ ಅಸಮಾಧಾನ**
> ಗವಿ ಸಿದ್ದಲಿಂಗೇಶ್ವರ ದೇವಾಲಯಕ್ಕೆ ಭಾರೀ ಸಂಖ್ಯೆಯಲ್ಲಿ ಭಕ್ತರು ಬರುತ್ತಿದ್ದಾರೆ. ಆದರೆ, ರಸ್ತೆಯಿಂದ ಹಿಡಿದು ಕುಳಿತುಕೊಳ್ಳುವ ಜಾಗ, ಸ್ವಚ್ಛತೆ, ಭಕ್ತರಿಗೆ ಬೇಕಾದ ಸೌಲಭ್ಯ ಯಾವುದು ಸರಿಯಾಗಿಲ್ಲ. ದೇವಾಲಯ ಜೀರ್ಣೋದ್ದಾರ ಮಾಡಿ, ಸೂಕ್ತ ಮೂಲಭೂತ ಸೌಕರ್ಯ ಒದಗಿಸಿ, ಈ ಸ್ಥಳವನ್ನು ಪ್ರವಾಸಿ ತಾಣವನ್ನಾಗಿ ಘೋಷಿಸಬೇಕು.
> –ಉಮೇಶ ಕೆ. ಮುದ್ನಾಳ, ಸಾಮಾಜಿಕ ಹೋರಾಟಗಾರ

## ವಿಶ್ವದಲ್ಲಿ ಪ್ರಜಾಪ್ರಭುತ್ವ ಬಹುದೊಡ್ಡ ಅಸ್ತ್ರ




ಉದಯವಾಹಿನಿ ಚಿತ್ರ

• ಉದಯವಾಹಿನಿ, ಯಲಬುರ್ಗಾ

ಪ್ರಜೆಗಳೇ ಪ್ರಜೆಗಳಿಗಾಗಿ ಆಳ್ವಿಕೆ ಮಾಡಿಕೊಳ್ಳುವ ವ್ಯವಸ್ಥೆಯಾದ ಪ್ರಜಾಪ್ರಭುತ್ವ ಇಡೀ ವಿಶ್ವದಲ್ಲಿ ಬಹು ದೊಡ್ಡ ಅಸ್ತ್ರ ಎಂದು ಕಾರ್ಯಕ್ರಮದ ಅಧ್ಯಕ್ಷತೆಯನ್ನ ವಸತಿ ಶಾಲೆಯ ಪ್ರಾಂಶುಪಾಲರು ಹನುಮಪ್ಪ ಉಪ್ಪಾರ ಅವರು ಹೇಳಿದರು.

ಪಟ್ಟಣದ ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನ ಅಂಗವಾಗಿ ಸಂವಿಧಾನ ಪೂರ್ವ ಪೀಠಿಕೆಯ ಮಹತ್ವದ ಕುರಿತಾದ ಭಾಷಣ ಸ್ಪರ್ಧೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳು ಉತ್ತಮವಾಗಿ ಸಂವಿಧಾನ ಕುರಿತಾಗಿ ಮಾತನಾಡಿದರು. ಈ ಸಂಧರ್ಭದಲ್ಲಿ ಬಿ ವ್ಹಿ ಹನುಮಶಟ್ಟಿ ಪ್ರಾಂಶುಪಾಲರು, ನಿರ್ಣಯಕರಾಗಿ ನೂರುಭಾಷಾ, ವಿಜಯ ಕುಮಾರ್ ಭಾಗ್ಯಶ್ರೀ ಎಮ್ ವಹಿಸಿಕೊಂಡಿದ್ದರು. ಕಾರ್ಯಕ್ರಮದ ನಿರೂಪಣೆ ಶಿವರಾಜ ಕುಂಬಾರ ಶಿಕ್ಷಕರ ಹಾಗೂ ಸಂವಿಧಾನ ಪೂರ್ವ ಪೀಠಿಕೆ ಕುರಿತು ಮಾತನಾಡಿದರು ಹಾಗೂ ಎಲ್ಲಾ ವಸತಿ ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಪತಿ–ಅತ್ತೆಯ ಕಿರುಕುಳಕ್ಕೆ ಮನನೊಂದು ಮಗುವಿನೊಂದಿಗೆ ನದಿಗೆ ಹಾರಿ ಗೃಹಿಣಿ ಆತ್ಮಹತ್ಯೆ

• ಉದಯವಾಹಿನಿ, ಹಾಸನ

ಗಂಡ ಹಾಗೂ ಅತ್ತೆ ನೀಡುತತಿದ್ದ ಕಿರುಕುಳಕ್ಕೆ ಮನನೊಂದು ಗೃಹಿಣಿಯೊಬ್ಬರು ಮಗುವಿನೊಂದಿಗೆ ನದಿಗೆ ಹಾರಿ ಆತ್ಮಹತ್ಯೆ ಮಾಡಿ ಕೊಂಡಿರುವ ಘಟನೆ ಅರಕಲಗೂಡು ತಾಲ್ಲೂಕಿನ ರಾಮನಾಥಪುರ ಬಳಿ ನಡೆದಿದೆ.ಮಹಾದೇವಿ (29) ಆತ್ಮಹತ್ಯೆಗೆ ಶರಣಾದ ಮಹಿಳೆ. ಮಹಾದೇವಿ ಮೂರು ವರ್ಷಗಳ ಹಿಂದೆ ಅರಕಲಗೂಡು ತಾಲ್ಲೂಕಿನ ಸೀಬಿಹಳ್ಳಿ ಗ್ರಾಮದ ಕುಮಾರ್ ಜೊತೆ ಎರಡನೇ ವಿವಾಹವಾಗಿದ್ದರು. ಮೊದಲ ಪತಿಯಿಂದ ವಿಚ್ಛೇದನ ಪಡೆದಿದ್ದ ಸಾಲಿಗ್ರಾಮ ತಾಲ್ಲೂಕಿನ ಕರ್ಪೂರವಳ್ಳಿ ಗ್ರಾಮದ ಮಹಾದೇವಿ ಎರಡನೇ ಮದುವೆ ಸಂದರ್ಭ ಕುಟುಂಬಸ್ಥರು ವರದಕ್ಷಿಣೆ ರೂಪದಲ್ಲಿ 100 ಗ್ರಾಂ ಚಿನ್ನ ನೀಡಿದ್ದರು. ಆದರೆ ಇತ್ತೀಚೆಗೆ ಪತ್ನಿ ಮೇಲೆ ಅನುಮಾನ ಪಡುತ್ತಿದ್ದ ಕುಮಾರ್ ಅವಾಚ್ಯ ಶಬ್ದಗಳಿಂದ ನಿಂದಿಸಿ ಕಿರುಕುಳ ನೀಡುತ್ತಿದ್ದ. ಕುಮಾರ್ ಕಿರುಕುಳ ತಾಳಲಾರದೆ ಮಹಾದೇವಿ ಕಳೆದ ಹದಿನೈದು ದಿನಗಳ ಹಿಂದೆ ತವರು ಮನೆ ಸೇರಿದ್ದರು. ಆದರೂ ಸುಮನಾಗದ ಕುಮಾರ್ ಪತ್ನಿಗೆ ಅಶ್ಲೀಲ ಮೆಸೇಜ್ ಮಾಡಿ ಮಾನಸಿಕ ಕಿರುಕುಳ ನೀಡುತ್ತಿದ್ದ. ಹಾಸನಕ್ಕೆ ಬಂದಿದ್ದ ಮಹಾದೇವಿಗೆ ಬಸ್ ನಿಲ್ದಾಣದಲ್ಲೇ ಕುಮಾರ್ ನಿಂದಿಸಿದ್ದ. ಇದರಿಂದ ಮನನೊಂದಿದ್ದ ಮಹಾದೇವಿ ನಂತರ ಹಾಸನ ಮಹಿಳಾ ಪೊಲೀಸ್ ಠಾಣೆಗೆ ಬಂದು ದೂರು ನೀಡಿದ್ದರು. ಬಳಿಕ ಡೆತ್‌ನೋಟ್ ಬರೆದಿಟ್ಟು ಮಗುವಿನೊಂದಿಗೆ ವಿಡಿಯೋ ಮಾಡಿ ತನಗಾದ ಅನ್ಯಾಯ, ಕಿರುಕುಳ ತಿಳಿಸಿ ನದಿಗೆ ಹಾರಿದಾರೆ. ಬಳಿಕ ಕುಟುಂಬಸ್ಥರು ಮಹಾದೇವಿಗಾಗಿ ಎಲ್ಲೆಡೆ ಹುಡುಕಾಟ ನಡೆಸಿದ್ದರು ಬನಂತರ ಅರಕಲಗೂಡು ತಾಲ್ಲೂಕಿನ, ಬೆಟ್ಟಸೋಗೆ ಬಳಿ ಮಹಾದೇವಿ ಮೃತದೇಹ ಪತ್ತೆಯಾಗಿದೆ. ಕಳೆದ ರಾಮನಾಥಪುರದ ಬಳಿಯ ಕಾವೇರಿ ನದಿಗೆ ಒಂದೂವರೆ ವರ್ಷದ ಮಗುವಿನೊಂದಿಗೆ ಹಾರಿ ಮಹಾದೇವಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಸದ್ಯ ಮಗುವಿನ ಮೃತದೇಹ ಇನ್ನೂ ಪತ್ತೆಯಾಗಿಲ್ಲ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕೊಣನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ತಾಲ್ಲೂಕು ಮಟ್ಟದ ನಿವೃತ್ತ ನೌಕರರ ಸಮ್ಮೇಳನ 23ರಂದು

• ಉದಯವಾಹಿನಿ, ರಬಕವಿ ಬನಹಟ್ಟಿ

ಇದೇ 23ರಂದು ರಬಕವಿಯ ಶಿವದಾಸಿಮಯ್ಯ ಸಮುದಾಯ ಭವನದಲ್ಲಿ ಬೆಳಗ್ಗೆ 9 ಕ್ಕೆ ತಾಲ್ಲೂಕು ಮಟ್ಟದ ನಿವೃತ್ತ ನೌಕರರ ಸಮ್ಮೇಳನವನ್ನು, 75 ವಸಂತಗಳನ್ನು ಪೂರೈಸಿದ ತಾಲ್ಲೂಕಿನ ಹಿರಿಯ ನಿವೃತ್ತರಿಗೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ರಬಕವಿಯ ಬ್ರಹ್ಮಾನಂದ ಆಶ್ರಮದ ಗುರುಸಿದ್ದೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಶಾಸಕ ಸಿದ್ದು ಸವದಿ ಕಾರ್ಯಕ್ರಮ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ. ರಬಕವಿ ಬನಹಟ್ಟಿ ತಾಲ್ಲೂಕು ಘಟಕದ ಅಧ್ಯಕ್ಷ ಮೃತ್ಯುಂಜಯ ರಾಮದುರ್ಗ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ಸಿದ್ದು ದಿವಾಣ ಮತ್ತು ಎಂ.ಎಸ್.ಬದಾಮಿ ಉಪನ್ಯಾಸ ನೀಡಲಿದ್ದಾರೆ. ಸಿದ್ಧರಾಮ ಮನಹಳ್ಳಿ, ವಿ.ಜಿ.ಗೋವಿಂದಪ್ಪಗೋಳ, ವಿಜಯರಾವ ಕುಲಕರ್ಣಿ, ಮಲ್ಲಿಕಾರ್ಜುನ ಕೋಟಿ, ತಹಶೀಲ್ದಾರ್ ಗಿರೀಶ ಸ್ವಾದಿ, ಎಸ್.ಆರ್.ಪಾಟೀಲ, ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ, ಸಂಘದ ಉಪಾಧ್ಯಕ್ಷ ಶಶಿಕಾಂತ ಹುನ್ನೂರ ಸೇರಿದಂತೆ ಅನೇಕರು ಉಪಸ್ಥಿತರಿರಲಿದ್ದಾರೆ ಎಂದು ಸಂಘದ ಕಾರ್ಯದರ್ಶಿ ಬಿ.ಎಂ.ಮಟ್ಟಿಕಲ್ಲಿ ತಿಳಿಸಿದರು.

## ಯುವ ಸಬಲೀಕರಣ, ಕ್ರೀಡಾ ಇಲಾಖೆ: ಪ್ರೋತ್ಸಾಹ ಧನಕ್ಕೆ ಅರ್ಜಿ

• ಉದಯವಾಹಿನಿ, ಬಾಗಲಕೋಟೆ

ಯುವ ಸಬಲೀಕರಣ, ಕ್ರೀಡಾ ಇಲಾಖೆಯಿಂದ ಅರ್ಹ ಸಾಧಕ ಕ್ರೀಡಾಪಟುಗಳು, ಇತರರಿಂದ ವಿವಿಧ ಪ್ರಶಸ್ತಿ ಮತ್ತು ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಏಕಲವ್ಯ ಪ್ರಶಸ್ತಿ, ಜೀವಮಾನ ಸಾಧನೆ ಪ್ರಶಸ್ತಿ, ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ, ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ, ಗುರಿ–ಒಲಿಂಪಿಕ್ ಪದಕ, ನಗದು ಪುರಸ್ಕಾರ, ಶೈಕ್ಷಣಿಕ ಶುಲ್ಕ ಮರುಪಾವತಿ ಮತ್ತು ಕ್ರೀಡಾ ವಿದ್ಯಾರ್ಥಿ ವೇತನಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಕ್ರೀಡಾಪಟುಗಳು ಡಿ.3ರೊಳಗೆ ಅಧಿಕೃತ https://sevasindhu.karnataka.gov.in ಮೂಲಕ ಅರ್ಜಿ ಸಲ್ಲಿಸಿರಿ. ಅರ್ಜಿ ಸಲ್ಲಿಸುವಾಗ ಸಮಸ್ಯೆಗಳು ಎದುರಾದಲ್ಲಿ ಯುವ ಸಹಾಯವಾಣಿ: 155265 ಅನ್ನು ಸಂಪರ್ಕಿಸಬಹುದು ಎಂದು ಬಾಗಲಕೋಟೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಪ್ರಕಟಣೆ ತಿಳಿಸಿದೆ.

## ಮೋಹನ ಎಚ್. ಭಜಂತ್ರಿ ರಾಷ್ಟ್ರೀಯ ಫೆಲೋಶಿಪ್‌ಗೆ ಆಯ್ಕೆ

• ಉದಯವಾಹಿನಿ, ಗದಗ

2025ನೇ ಸಾಲಿನ ಬಾಬಾಸಾಹೇಬ ಡಾ. ಅಂಬೇಡ್ಕರ್ ರಾಷ್ಟ್ರೀಯ ಫೆಲೋಶಿಪ್‌ಗೆ ನಗರದ ಹಿರಿಯ ವಕೀಲ ಮೋಹನ ಎಚ್. ಭಜಂತ್ರಿ ಆಯ್ಕೆಯಾಗಿದ್ದಾರೆ.




ಹುಬ್ಬಳ್ಳಿಯ ಕೆಎಸ್‌ಎಲ್‌ಯುನ ಸಿಂಡಿಕೇಟ್ ಸದಸ್ಯರು, ಭಜಂತ್ರಿ ಸಮಾಜದ ಗದಗ ಜಿಲ್ಲಾ ಘಟಕದ ಅಧ್ಯಕ್ಷರೂ ಆಗಿರುವ ಮೋಹನ ಎಚ್. ಭಜಂತ್ರಿ ಅವರ ಸಾಮಾಜಿಕ ಸೇವೆ, ಸಮಾಜದಲ್ಲಿ ತುಳಿತಕ್ಕೆ ಒಳಗಾದ ಜನರೊಂದಿಗಿನ ಒಡನಾಟ, ಕಾನೂನು ಸೇವೆ ಗುರುತಿಸಿ ದೆಹಲಿಯ ಪ್ರತಿಷ್ಠಿತ ಭಾರತೀಯ ದಲಿತ ಅಕಾಡೆಮಿಯು ಫೆಲೋಶಿಪ್‌ಗೆ ಆಯ್ಕೆ ಮಾಡಿದೆ ಎಂದು ಪ್ರಕಟಣೆ ತಿಳಿಸಿದೆ.

## ಎಫ್‌ಆರ್‌ಪಿ ದರ ಮರುಪರಿಶೀಲನೆಗೆ ತಿಮ್ಮಾಪುರ ಒತ್ತಾಯ

• ಉದಯವಾಹಿನಿ, ಬಾಗಲಕೋಟೆ

ಕಬ್ಬು ಬೆಳೆಗಾರರಿಗೆ ಮಾರಕವಾಗಿರುವ ಎಫ್‌ಆರ್‌ಪಿ ಬೆಲೆ ನಿಗದಿ ಮರುಪರಿಶೀಲಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್ ಬಿ ತಿಮ್ಮಾಪುರ ಒತ್ತಾಯಿಸಿದ್ದಾರೆ. ಶೇ9.5 ಇಳುವರಿಗೆ ಇದ್ದ ಎಫ್‌ಆರ್‌ಪಿ ನಿಗದಿಯನ್ನು ಶೇ10.25ರಷ್ಟಕ್ಕೆ ಹೆಚ್ಚಿಸಿರುವುದು ಅವೈಜ್ಞಾನಿಕವಾಗಿದ್ದು, ರೈತರ ಹಿತಾಸಕ್ತಿ ಮಾರಕವಾಗಿದೆ. ಇದರಿಂದ ಕಬ್ಬು ಬೆಳೆಗಾರರಿಗೆ ಅನ್ಯಾಯವಾಗುತ್ತಿದೆ. ಕೂಡಲೇ ಹಿಂದಿನ ಇಳುವರಿಯನ್ನೇ ಪರಿಗಣಿಸಬೇಕು ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಆಗ್ರಹಿಸಿದ್ದಾರೆ. ಎಥೆನಾಲ್ ಕೋಟಾ ಹಂಚಿಕೆಯಲ್ಲೂ ಗಮನಾರ್ಹ ವ್ಯತ್ಯಾಸವಿದೆ.



ಉದಯವಾಹಿನಿ ಚಿತ್ರ

ಮಹಾರಾಷ್ಟ್ರ ರಾಜ್ಯಕ್ಕೆ ಶೇ12.4 ಮತ್ತು ಉತ್ತರ ಪ್ರದೇಶ ರಾಜ್ಯಕ್ಕೆ ಶೇ15.3 ರಷ್ಟಿದೆ, ಕರ್ನಾಟಕಕ್ಕೆ ಶೇ11.1ರಷ್ಟಿದ್ದು, ಬೇರೆ ರಾಜ್ಯಗಳಿಗೆ ಹೆಚ್ಚಿದ್ದು, ಕರ್ನಾಟಕಕ್ಕೆ ಕಡಿಮೆ ಇದೆ. ಈ ವ್ಯತ್ಯಾಸವನ್ನು ಸರಿಪಡಿಸಬೇಕು ಎಂದು ಒತ್ತಾಯಿಸಿದ್ದಾರೆ. ಅಂತರರಾಷ್ಟ್ರೀಯ ಸಕ್ಕರೆ ಮಾರುಕಟ್ಟೆ ಮತ್ತು ವಿತರಣೆ ಗಮನದಲ್ಲಿಟ್ಟುಕೊಂಡು ಸರ್ಕಾರವು ಕಬ್ಬಿನ ಉತ್ಪಾದನೆ, ಸಂಗ್ರಹಣೆ ಮಾರುಕಟ್ಟೆ ಮತ್ತು ಬೆಲೆಯ ವಿವಿಧ ಅಂಶಗಳನ್ನು ಪರಿಗಣಿಸಿ ಸಕ್ಕರೆ ರಫ್ತು ನೀತಿಯನ್ನು ಬದಲಾಯಿಸಬೇಕು. ಗೃಹ ಬಳಕೆ ಹಾಗೂ ವಾಣಿಜ್ಯ ಉದ್ದೇಶಕ್ಕೆ ಬಳಸುವ ಸಕ್ಕರೆಗೆ ಪ್ರತ್ಯೇಕ ದರ ನಿಗದಿ ಮಾಡಬೇಕು ಎಂದು ರೈತರ ಆಗ್ರಹವಾಗಿದ್ದು, ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವ ಮೂಲಕ ರಾಜ್ಯದ ರೈತರ ಹಿತಾಸಕ್ತಿ ಕಾಪಾಡಬೇಕು ಆಗ್ರಹಿಸಿದ್ದಾರೆ.

## ಕೋಣೆಯಲ್ಲಿ ಇದ್ದಿಲಿನಿಂದ ಬೆಂಕಿ ಹಾಕಿ ನಿದ್ರೆ ಮಲಗಿದ್ದಲ್ಲೇ ಉಸಿರುಗಟ್ಟಿ 3 ಸಾವು

• ಉದಯವಾಹಿನಿ, ಬೆಳಗಾವಿ

ಇಲ್ಲಿನ ಅಮನ್ ನಗರದಲ್ಲಿ ರಾತ್ರಿ ರೂಮಿನಲ್ಲಿ ಮಲಗಿದ್ದ ಮೂವರು ಯುವಕರು ಹೊಗೆಯಿಂದ ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ. ಒಬ್ಬನ ಸ್ಥಿತಿ ಚಿಂತಾಜನಕವಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಮಂಗಳವಾರ ಸಂಜೆ ಪಾಲಕರು ಇವರನ್ನು ಹುಡುಕುತ್ತ ಬಂದಾಗಲೇ ಘಟನೆ ಗೊತ್ತಾಗಿದೆ. ಅಮನ್ ನಗರದ ನಿವಾಸಿಗಳಾದ ರಿಹಾನ್ ಮತ್ತೆ (22), ಮೋಹಿನ್ ನಾಲಬಂದ (23) ಹಾಗೂ ಸರ್ಫರಾಜ್ ಹರಪ್ಪನಹಳ್ಳಿ (22) ಮೃತಪಟ್ಟವರು. ಇವರೊಂದಿಗೇ ಮಲಗಿದ್ದ ಶಾಹನವಾಜ್ (19) ಎಂಬ ಪ್ರಜ್ಞಾಹೀನವಾಗಿದ್ದು ಚಿಕಿತ್ಸೆ ನೀಡಲಾಗುತ್ತಿದೆ.

ನಾಲ್ವರೂ ಸೇರಿ ಮಧ್ಯಾಹ್ನ ಯಾವುದೋ ಕಾರ್ಯಕ್ರಮಕ್ಕೆ ಹೋಗಿ ಬಂದಿದ್ದರು. ರಾತ್ರಿ ಚಳಿ ಹೆಚ್ಚಾಗಿದ್ದರಿಂದ ಮಲಗುವ ಕೋಣೆಯಲ್ಲಿ ಇದ್ದಿಲಿನ ಒಲೆ (ಶೀಗಡಿ)ಯಲ್ಲಿ ಬೆಂಕಿ ಹಾಕಿ ರೂಮಿನಲ್ಲಿ ಇಟ್ಟುಕೊಂಡಿದ್ದರು. ಅದೇ ಒಲೆಯಲ್ಲಿ ನಾಲ್ಕು ಸೊಳ್ಳೆ ನಿರೋಧಕ ಕಾಯಿಲ್‌ಗಳನ್ನು ಹಾಕಿದ್ದು ಗೊತ್ತಾಗಿದೆ.

ಯುವಕರು ಮಲಗಿದ ರೂಮಿಗೆ ಕಿಟಕಿಗಳಿಲ್ಲ. ಬಾಗಿಲನ್ನು ಭದ್ರವಾಗಿ ಹಾಕಿಕೊಂಡಿದ್ದರು. ನಿದ್ರೆಗೆ ಜಾರಿದ ಮೇಲೆ ಕೋಣೆಯ ಒಳಗೆ ಇದ್ದಿಲಿನ ಹೊಗೆ ದಟ್ಟವಾಗಿ ಆವರಿಸಿ, ಉಸಿರಾಟಕ್ಕೆ ಸಮಸ್ಯೆ ಆಗಿದೆ. ಆಕ್ಸಿಜನ್ ಕೊರತೆಯಿಂದ ಸಾವು ಸಂಭವಿಸಿರಬಹುದು ಎಂದು ಪೊಲೀಸರು ಅಂದಾಜಿಸಿದ್ದಾರೆ. ಶಾಸಕ ಆಸಿಫ್ ಸೇಠ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಮೃತರ ಪಾಲಕರ ಆಕ್ರಂದನ ಮುಗಿಲು ಮುಟ್ಟಿತ್ತು. ಮಾಳಮಾರುತಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಉದಯವಾಹಿನಿ ಚಿತ್ರ

> **ಕೋಣೆಯ ಬಾಗಿಲು ಮುರಿದಾಗ ಘಟನೆ ಗೊತ್ತಾಗಿದೆ**
> ನಾಲ್ವರೂ ಅಕ್ಕಪಕ್ಕದ ಮನೆಯವರೇ ಆಗಿದ್ದು, ನಾಲ್ವರ ಪಾಲಕರೂ ಮಂಗಳವಾರ ಸಂಜೆಯವರೆಗೆ ಯಾರನ್ನೂ ಹುಡುಕಾಡಿಲ್ಲ. ಸಂಜೆಗೆ ಮಲಗುವ ಕೋಣೆಯ ಬಾಗಿಲು ಮುರಿದಾಗ ಘಟನೆ ಗೊತ್ತಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

## ಮಾದರಿ ಸೌರ ಗ್ರಾಮ: ಹೆಸ್ಕಾಂ ವ್ಯಾಪ್ತಿಯ ಏಳು ಜಿಲ್ಲೆಗಳ 24 ಹಳ್ಳಿಗಳು ಆಯ್ಕೆ

• ಉದಯವಾಹಿನಿ, ಹುಬ್ಬಳ್ಳಿ

ಹೆಸ್ಕಾಂ ವ್ಯಾಪ್ತಿಯ ಏಳು ಜಿಲ್ಲೆಗಳ 24 ಗ್ರಾಮಗಳನ್ನು ಕೇಂದ್ರ ಸರ್ಕಾರದ ಮಾದರಿ ಸೌರ ಗ್ರಾಮ ಯೋಜನೆಯಡಿ ಸ್ಪರ್ಧಾ ಗ್ರಾಮಗಳೆಂದು ಆಯ್ಕೆ ಮಾಡಲಾಗಿದ್ದು, ಅಂತಿಮವಾಗಿ ಆಯ್ಕೆಯಾದ ಗ್ರಾಮಕ್ಕೆ ನವೀಕರಿಸಬಹುದಾದ ಇಂಧನ ಸಚಿವಾಲಯದಿಂದ 1 ಕೋಟಿ ಪ್ರೋತ್ಸಾಹಧನ ಲಭಿಸಲಿದೆ. ಹಾವೇರಿ ಜಿಲ್ಲೆಯ ಆಡೂರು, ಅಕ್ಕಿ ಆಲೂರು, ಮಾಸಣಗಿ, ವಿಜಯಪುರ ಜಿಲ್ಲೆಯ ತೆಲಗಿ, ಮೋರಟಗಿ, ಹೊನ್ನುಟಗಿ, ಕಾಖಂಡಕಿ, ಬಾಗಲಕೋಟೆ ಜಿಲ್ಲೆಯ ತೊಗಲಬಾಗಿ, ನಂದಿಕೇಶ್ವರ, ಧಾರವಾಡ ಜಿಲ್ಲೆಯ ಹೆಬಸೂರು, ಯಲಿವಾಳ, ಹೆಬ್ಬಳ್ಳಿ, ಮಿಶ್ರಿ ಕೋಟಿ, ಉತ್ತರ ಕನ್ನಡದ ಬನವಾಸಿ, ರಾಮನಗರ, ಮಜಲಿ, ಹೆಬ್ಬೆ, ಬೆಳಗಾವಿ ಜಿಲ್ಲೆಯ ಮುದಕವಿ, ಅಂಬಡಗಟ್ಟಿ, ಅಳಗವಾಡಿ, ಉಚಗಾಂವ್ ಹಾಗೂ ಗದಗ ಜಿಲ್ಲೆಯ ಸೊರಗಟಿ, ಬಿಂಕದಕಟ್ಟೆ ಮತ್ತು ಗೋಗೇರಿ ಆಯ್ಕೆಯಾದ ಗ್ರಾಮಗಳು.



ಉದಯವಾಹಿನಿ ಚಿತ್ರ

ಈ ಗ್ರಾಮಗಳಲ್ಲಿ ಆಯಾ ಪಂಚಾಯಿತಿಗಳ ನೇತೃತ್ವದಲ್ಲಿ ವಸತಿ ಗ್ರಾಹಕರಿಗೆ ಪಿಎಂ ಸೂರ್ಯಘರ್ ಯೋಜನೆಯಡಿ ಮೇಲ್ಚಾವಣಿ ಸೌರಶಕ್ತಿ ಅಳವಡಿಸುವುದು, ಇತರೆ ಗ್ರಾಹಕರಿಗೆ ಸಬ್ಸಿಡಿ ರಹಿತ ಯೋಜನೆಯಡಿ ಮೇಲ್ಚಾವಣಿ ಸೌರಶಕ್ತಿ ಅಳವಡಿಸಲು ಪ್ರೋತ್ಸಾಹ ನೀಡಲಾಗುತ್ತದೆ. ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಪಿಎಂ ಕುಸುಮ್–ಬಿ ಯೋಜನೆಯಡಿ ಸೌರ ಪಂಪ್‌ಸೆಟ್ ಅಳವಡಿಕೆಗೆ ಒತ್ತು ನೀಡಲಾಗುವುದು.

ಸರ್ಕಾರಿ ಕಟ್ಟಡಗಳ ಮೇಲೆ ಸೌರ ಮೇಲ್ಚಾವಣಿ ಅಳವಡಿಸಲು, ಕುಡಿಯುವ ನೀರು ಹಾಗೂ ಬೀದಿ ದೀಪಗಳಿಗೆ ಸೌರಶಕ್ತಿ ಅಳವಡಿಸಲು ಪ್ರೋತ್ಸಾಹಿಸಲಾಗುವುದು ಎಂದು ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ. ಸ್ಪರ್ಧೆಯ ಅವಧಿ ಆರು ತಿಂಗಳು ಇರಲಿದ್ದು, ಮೌಲ್ಯಮಾಪನದ ಆಧಾರದ ಮೇಲೆ ಗರಿಷ್ಠ ನವೀಕರಿಸಬಹುದಾದ ಇಂಧನ ಬಳಸಿದ ಗ್ರಾಮವನ್ನು ಮಾದರಿ ಸೌರ ಗ್ರಾಮ ಎಂದು ಘೋಷಿಸಲಾಗುವುದು ಎಂದು ತಿಳಿಸಿದೆ.

### ಜಿಲ್ಲಾ ಪಂಚಾಯತ್ ಸಿಇಓ ಭನ್ವರ್ ಸಿಂಗ್ ಮೀನಾ ದಿಢೀರನೇ ಚಿಂಚೋಳಿ ಭೇಟಿ ವಿವಿಧೆಡೆ ವಿಕ್ಷಿಸಿ, ಪರೀಶೀಲನೆ

# ಆಸ್ಪತ್ರೆಯಲ್ಲಿ ವೈದ್ಯರು ದಿನಾಲು ಕಾರ್ಯನಿರ್ವಹಿಸಲು ಸೂಚನೆ

• ಉದಯವಾಹಿನಿ ಚಿಂಚೋಳಿ

ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ವಾರಕ್ಕೆ ಎರಡು ದಿನ ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆಂದು ದೂರು ಬರುತ್ತಿದ್ದು ವೈದ್ಯರು ದಿನಾಲು ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸಬೇಕು ಆಸ್ಪತ್ರೆ ಹಾಜರಾತಿಯನ್ನು ಮಾಹಿತಿ ನೀಡುವಂತೆ ಟಿಹೆಚ್‌ಓ ಮಹ್ಮದ್ ಗಫಾರ್ ಅವರಿಗೆ ದೂರವಾಣಿ ಮೂಲಕ ಜಿ.ಪಂ.ಸಿಇಓ ಭನ್ವರ್ ಸಿಂಗ್ ಮೀನಾ ಸೂಚಿಸಿದರು. ತಾಲ್ಲೂಕಿನ ಸುಲೇಪೇಟ ಪಟ್ಟಣದ ಪೌಷ್ಟಿಕಾಂಶ ಉತ್ಪಾದನೆ ಕೇಂದ್ರ, ಕೆಪಿಎಸ್ ಶಾಲೆ,ತಾಲ್ಲೂಕಾ ಪಂಚಾಯತ್ ಕಾರ್ಯಾಲಯ ಕಟ್ಟಡ ವಿಕ್ಷಣೆ ಸೇರಿದಂತೆ ವಿವಿಧೆಡೆ ಜಿಪಂ.ಸಿಇಓ ಭನ್ವರ್ ಸಿಂಗ್ ಮೀನಾ ಭೇಟಿನೀಡಿ ಪರಿಶೀಲಿಸಿದರು.

ತಾಪಂ. ಕಛೇರಿಯ ಹಳೆಯ ಕಟ್ಟಡ ಪರಿಶೀಲಿಸಿ ಇದಕ್ಕೆ ತಾತ್ಕಾಲಿಕ ದುರಸ್ತಿ ಕಾಮಗಾರಿ ಕೈಗೊಳ್ಳಲು ಕ್ರೀಯಾಯೋಜನೆ ಪಿ.ಆರ್.ಇ ಎಇಇ ಪ್ರವೀಣಕುಮಾರ ಅವರು ಸಿದ್ದಪಡಿಸಿ ತಾಪಂ. ಇಓ ಸಂತೋಷ ಚವ್ಹಾಣ ಅವರಿಗೆ ನೀಡಲು ಸೂಚಿಸಿದರು.

ತದನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು,ಈಗಾಗಲೇ ತಾಪಂ.ನೂತನ ಕಟ್ಟಡ ನಿರ್ಮಾಣಕ್ಕೆ 2.4ಕೋಟಿ ರೂ.ಪ್ರಸ್ತಾವನೆ ಸಲ್ಲಿಸಲಾಗಿದೆ, ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಮಧ್ಯಾಹ್ನ ಬಿಸಿಯೂಟ ಮಕ್ಕಳಿಗೆ ಸೇವಿಸಲು ಕೆಳಗೆ ಜಮಖಾನಿ ಹಾಕಲು ಈ ವರ್ಷ ಜಿಲ್ಲೆಯಾದ್ಯಂತ 40ಲಕ್ಷ ರೂ.ನೀಡಲಾಗಿದೆ, ಜಮಖಾನಿ ಹಾಕದೆ ಇರುವುದು ದೂರು ಬರುತ್ತಿದ್ದು ಪಾಲನೇ ಮಾಡಲು ಸೂಚಿಸುತ್ತೇನೆ, ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ವಾರಕ್ಕೆ ಎರಡು ದಿನ ಮಾತ್ರ ಕೆಲಸ ಮಾಡುತ್ತಿದ್ದು ತಿಂಗಳಲ್ಲಿ 10ದಿನ ಆದರೆ 20ದಿನದ ಸಂಬಳ ಫ್ರೀ ಆಗಿ ಸರ್ಕಾರ ಕೊಡಬೇಕು ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ವೈದ್ಯರು ದಿನಾಲು ಕೆಲಸ ಮಾಡಬೇಕು ಯಾಕೆ ಎರಡು ದಿನ ಕೆಲಸ ಮಾಡಬೇಕು ಆ ತರಹ ಸರ್ಕಾರ ಆದೇಶ ಇಲ್ಲ, ವೈದ್ಯರ ಹಾಜರಾತಿ ನೀಡುವಂತೆ ಟಿಹೆಚ್‌ಓಗೆ ಸೂಚಿಸುತ್ತೇನೆ ಅಂಥಹ ತಪ್ಪುಗಳು ಕಂಡುಬಂದರೆ ಕ್ರಮಕೈಗೊಳ್ಳಲಾಗುವುದು ಎಂದರು.

ಕುಂಚಾವರಂ ಆಸ್ಪತ್ರೆಯಲ್ಲಿ ಮಹಿಳಾ ವೈದ್ಯ ವಿರುದ್ಧ ದೂರು ಕೇಳಿ ಬರುತ್ತಿದ್ದು ಒಂದು ತನಿಖಾ ತಂಡ ರಚಿಸಿ ವರದಿ ಸಿದ್ದಪಡಿಸಿ ಕೊಡಿ, ಫ್ಯಾಮಿಲಿ ಆಪರೇಷನ್ ಮಾಡಲು ವೈದ್ಯರು ಹಣದ ಬೇಡಿಕೆ ಇಡುವುದು ಆರೋಪ ಕೇಳಿ ಬರುತ್ತಿದ್ದು ಒಮ್ಮೆ ಪರಿಶೀಲಿಸುವಂತೆ ಟಿಹೆಚ್‌ಓ ಮಹ್ಮದ್ ಗಫಾರ್ ಅವರಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ತಾಲ್ಲೂಕಾ ಪಂಚಾಯತ್ ಇಓ ಸಂತೋಷ ಚವ್ಹಾಣ, ಪಿಆರ್.ಇ ಎಇಇ ಪ್ರವೀಣಕುಮಾರ, ತಾಪಂ.ವ್ಯವಸ್ಥಾಪಕ ಮಲ್ಲಿಕಾರ್ಜುನ, ಟಿಪಿಓ ಮಲ್ಲಿಕಾರ್ಜುನ, ನರೇಗಾ ಎಡಿ ನಾಗೇಂದ್ರಪ್ಪಾ, ಜೆಇ ಸಚಿನ, ರಾಜಶೇಖರ ಹಿತ್ತಲ, ಸೇರಿದಂತೆ ಅನೇಕರಿದ್ದರು.



ಉದಯವಾಹಿನಿ ಚಿತ್ರ

> **ನರೇಗಾ ಯೋಜನೆಯಲ್ಲಿ 20ಲಕ್ಷದವರೆಗೆ ಕಟ್ಟಡ ನಿರ್ಮಾಣಕ್ಕೆ ಅವಕಾಶ**
> ತಾಪಂ. ಜಿಪಂ. ವರ್ಷಕ್ಕೆ ಜಿಲ್ಲೆಯಾದ್ಯಂತ 35ಕೋಟಿ ರೂ.ಬರುತ್ತದೆ ಅದರಲ್ಲಿ 30 ಪ್ರತಿಶತಃ ಶಿಕ್ಷಣಕ್ಕೆ ಮೀಸಲಿಡಲಾಗುವುದು ಉಳಿದ ಹಣ ಅಭಿವೃದ್ಧಿ ಕಾಮಗಾರಿ ಮಾಡಲಾಗುವುದು. ಅಣವಾರ ಗ್ರಾಪಂ ಸಂಪೂರ್ಣ ಕುಸಿದು ಬಿಳುವ ಸ್ಥಿತಿಯಲ್ಲಿದೆ ಎಂದು ಹೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ನರೇಗಾ ಯೋಜನೆಯಲ್ಲಿ 20ಲಕ್ಷದವರೆಗೆ ಕಟ್ಟಡ ನಿರ್ಮಾಣಕ್ಕೆ ಅವಕಾಶವಿದ್ದು ಸದುಪಯೋಗ ಪಡೆದು ಉಳಿದ ಹಣ 15ನೇ ಹಣಕಾಸು ಯೋಜನೆಯಲ್ಲಿ 5-10ಲಕ್ಷ ಕ್ರೀಯಾಯೋಜನೆ ಸಿದ್ದಪಡಿಸಿಕೊಂಡು ಗ್ರಾ.ಪಂ.ಕಟ್ಟಡ ನಿರ್ಮಾಣ ಮಾಡಿಕೊಳ್ಳಬೇಕು ಎಂದರು.

> ಅತಿವೃಷ್ಟಿ ಅನಾವೃಷ್ಠಿಯಿಂದ ಹಾಳಾದ 20ರಸ್ತೆಗಳು ಮತ್ತು ಸೇತುವೆಗಳು ಹಾಳಾಗಿವೆ ಒಟ್ಟಾರೆ 20ಕೋಟಿ ರೂ.ವೆಚ್ಚವಾಗಲಿದೆ ಎಂದು ಪಿಆರ್.ಇ ಎಇಇ ಪ್ರವೀಣಕುಮಾರ ವರದಿ ಕೊಟ್ಟಿದ್ದಾರೆ ಕೆಡಿಪಿಆರ್ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದು ಶೀಘ್ರದಲ್ಲೇ ಅನುದಾನ, ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ ಮೊಟ್ಟೆ ಮಕ್ಕಳಿಗೆ ವಿತರಣೆ ಮಾಡಲಾಗುತ್ತಿದೆ, ಬಾಲವಿಕಾಸ ಮೂಲಕ ಬಿಲ್ಲು ಸಂದಾಯವಾಗುತ್ತಿದೆ, ಕುಕುಟಾ ಸಂಜೀವಿನಿ ಕೋಳಿ ಸಾಗಾಣಿಕೆ ಯೋಜನೆ ಜಾರಿಗೆ ಬಂದಿದೆ 500ಕೋಳಿ ಸಾಗಾಣಿಕೆ ಮಾಡಿದರೆ 8ಲಕ್ಷದವರೆಗೆ ಅನುದಾನವಿದೆ ಇಲಾಖೆ ವತಿಯಿಂದ ಔಷಧಿ ಮತ್ತು ತರಬೇತಿ ನೀಡುತ್ತೇವೆ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

## ಜಿ-20 ಸಮಾವೇಶಕ್ಕೂ ಮುನ್ನ ಮೋದಿ ವಿರುದ್ಧ ಕಿಡಿಕಾರುತ್ತಿರುವ ಸಂಘಟನೆಗಳು

**ಜೋಹಾನ್:** ಇಲ್ಲಿ ನಡೆಯಲಿರುವ ಜಿ-20 ಸಮಾವೇಶಕ್ಕೂ ಮುನ್ನವೇ ಕೆಲವು ಸಂಘಟನೆಗಳು ಮುಸ್ಲಿಂ ವಕೀಲರ ಸಂಘದ ಸಾರಥ್ಯದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಅಂತಾರಾಷ್ಟ್ರೀಯ ಅಪರಾಧ ಕಾನೂನಿನಡಿ ವಿಚಾರಣೆ ನಡೆಸಬೇಕೆಂದು ದಕ್ಷಿಣ ಆಫ್ರಿಕಾ ಪೊಲೀಸ್ ಮುಖ್ಯಸ್ಥರಿಗೆ, ಅಪರಾಧ ತನಿಖಾ ಸಂಸ್ಥೆಗಳಿಗೆ ದೂರು ನೀಡಿದೆ. ಕಾಶ್ಮೀರದಲ್ಲಿ ಮಾನವ ಹಕ್ಕು ಉಲ್ಲಂಘನೆಯಾಗುತ್ತಿದೆಯೆಂದು ಆರೋಪಿಸಿರುವ ದಿ ಸೌತ್ ಆಫ್ರಿಕಾ ಕಾಶ್ಮೀರ ಆಕ್ಷನ್ ಗ್ರೂಪ್, ಮುಸ್ಲಿಂ ವಕೀಲ ಸಂಘ ಜೋಹಾನ್ಸ್‌ಬರ್ಗ್‌ಗೆ ಆಗಮಿಸಲಿರುವ ಭಾರತದ ಪ್ರಧಾನಿಯನ್ನು ಬಂಧಿಸಬೇಕೆಂದು ಮನವಿ ಸಲ್ಲಿಸಿದೆ. ಇದು ವಿದೇಶದ ಹಲವಾರು ನಾಯಕರ ಆಕ್ರೋಶಕ್ಕೆ ಕಾರಣವಾಗಿದ್ದು, ಮೂಲಭೂತವಾದಿಗಳು ಭಾರತದ ಬೆಳವಣಿಗೆಯನ್ನು ಸಹಿಸದೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಪ್ಪು ಮಸಿ ಬಳಿಯಲು ಪ್ರಯತ್ನಿಸುತ್ತಿದ್ದಾರೆ. ಭಾರತದ ಶಾಂತಿ ಮಂತ್ರ, ಸಾಮರ್ಥ್ಯವನ್ನು ಕದಡಲು ಇಂತಹ ಸಂಘಟನೆಗಳು ಅಂತಾರಾಷ್ಟ್ರೀಯ ಸಮಾವೇಶ ಸಂದರ್ಭದಲ್ಲಿ ಧಕ್ಕೆ ತರುವ ಹೇಳಿಕೆಗಳನ್ನು ನೀಡಿ ತಪ್ಪು ಮಾಹಿತಿಗಳನ್ನು ಹರಡುತ್ತಿದ್ದಾರೆ. ಭಾರತದಲ್ಲಿ ಅದರಲ್ಲೂ ಕಾಶ್ಮೀರದಲ್ಲಿ ಯಾವುದೇ ಮಾನವ ಹಕ್ಕು ಉಲ್ಲಂಘನೆ, ಹಿಂಸಾಚಾರದ ಘಟನೆಗಳು ನಡೆಯದೇ ಇದ್ದರೂ ಜನರಲ್ಲಿ ದ್ವೇಷ ಭಾವನೆ ಹುಟ್ಟಿಸಲು ಭಾರೀ ಪ್ರಮಾಣದ ನಿಧಿ ಸಂಗ್ರಹಿಸಲಾಗಿದೆ.



ಇದು ದಕ್ಷಿಣ ಆಫ್ರಿಕಾ ನಾಗರಿಕರನ್ನೂ ಕೂಡ ಕೆರಳಿಸಿದ್ದು, ಇದು ದುಷ್ಟರ ದುರಂಹಕಾರದ ಪರಮಾವಧಿಯೆಂದು ಬಣ್ಣಿಸುತ್ತಿದ್ದಾರೆ. ಇಷ್ಟೆಲ್ಲಾ ಬೆಳವಣಿಗೆಯಾಗುತ್ತಿದ್ದರೂ. ದಕ್ಷಿಣ ಆಫ್ರಿಕಾದಲ್ಲಿರುವ ಭಾರತೀಯ ರಾಯಭಾರಿ ಕಚೇರಿ, ಯಾವುದೇ ಕ್ರಮಗಳನ್ನು ಕೈಗೊಳ್ಳದೆ ಸುಮನಿರುವುದು ಆಕ್ರೋಶಕ್ಕೆ ಕಾರಣವಾಗಿದೆ. ಭಾರತದ ವಿರುದ್ಧ ನಡೆಯುತ್ತಿರುವ ಸುಳ್ಳು ಮಾಹಿತಿಗಳು, ಹೋರಾಟದ ಬಗ್ಗೆ ರಾಜತಾಂತ್ರಿಕವಾಗಿ ಕಾರ್ಯನಿರ್ವಹಿಸುವ ಅಗತ್ಯತೆ ಇದೆ, ಆದರೆ ಈ ಬಗ್ಗೆ ಈವರೆಗೆ ಚಕಾರ ಎತ್ತದಿರುವುದು ವಿಷಾದನೀಯ ಎಂದು ಅಲ್ಲಿ ಪ್ರಜೆಗಳೇ ವಿಷಾದ ವ್ಯಕ್ತಪಡಿಸಿದ್ದಾರೆ.

# ಇರಾನ್‌ಗೆ ಹೋಗುವವರಿಗೆ ಬೇಕು ಕಡ್ಡಾಯ ವೀಸಾ

## ಕಳ್ಳಸಾಗಣೆ ಭಾರತೀಯರ ಅಪಹರಣ ತಡೆಗೆ ಇರಾನ್ ಹೊಸ ನಿಯಮ



**ಹೊಸದಿಲ್ಲಿ:** ಇರಾನ್ ಭಾರತೀಯ ಸಾಮಾನ್ಯ ಪಾಸ್‌ಪೋರ್ಟ್ ಹೊಂದಿರುವ ನಾಗರಿಕರಿಗೆ ನೀಡಲಾಗಿದ್ದ ಒಂದು-ಮಾರ್ಗದ ವೀಸಾ ವಿನಾಯಿತಿಯನ್ನು ಅಮಾನತುಗೊಳಿಸಿ ಘೋಷಣೆ ಮಾಡಿದೆ. ಇದರಿಂದಾಗಿ ನ.22ರಿಂದ ಇರಾನ್‌ಗೆ ಪ್ರವೇಶಿಸಲು ಅಥವಾ ಅಲ್ಲಿಂದ ಬೇರೆ ದೇಶಗಳಿಗೆ ಪ್ರಯಾಣಿಸಲು (ಟ್ರಾನ್ಸಿಟ್) ಬಯಸುವ ಎಲ್ಲಾ ಭಾರತೀಯರು ಮುಂಚಿತವಾಗಿ ವೀಸಾ ಪಡೆಯುವುದು ಕಡ್ಡಾಯವಾಗಿದೆ. ಇದಕ್ಕೆ ಕಾರಣ ಇರಾನ್‌ನಲ್ಲಿ ಭಾರತೀಯರ ಮೇಲೆ ನಡೆಯುತ್ತಿರುವ ಕಳ್ಳಸಾಗಣೆ ಹಾಗೂ ಅಪಹರಣದ ಪ್ರಕರಣಗಳು ಹೆಚ್ಚಾಗುತ್ತಿರುವುದು ಎಂದು ತಿಳಿದು ಬಂದಿದೆ.

**ಇರಾನ್‌ನಲ್ಲಿ ಭಾರತೀಯರ ಅಪಹರಣ ಪ್ರಕರಣಗಳ ಕಡಿವಾಣಕ್ಕೆ ಬಂತು ಹೊಸ ನಿಯಮ:** ಈ ಕುರಿತು ಮಾಹಿತಿ ನೀಡಿರುವ ಭಾರತದ ವಿದೇಶಾಂಗ ಸಚಿವಾಲಯ ಮಾಧ್ಯಮ ಪ್ರಕಟಣೆ ಹೊಡಿಸಿದೆ. ಇದರಲ್ಲಿ ಭಾರತೀಯ ಪ್ರಜೆಗಳನ್ನು ಉದ್ಯೋಗದ ಸುಳ್ಳು ಭರವಸೆಗಳ ಮೇಲೆ ಅಥವಾ ಮೂರನೇ ದೇಶಗಳಿಗೆ ಮುಂದಿನ ಸಾಗಣೆಯ ಭರವಸೆಯ ಮೇಲೆ ಭಾರತೀಯ ಪ್ರಜೆಗಳನ್ನು ಇರಾನ್‌ಗೆ ಆಕರ್ಷಿಸಲಾಗುತ್ತಿರುವ ಹಲವಾರು ಘಟನೆಗಳು ನಡೆಯುತ್ತಿದ್ದು, ಭಾರತೀಯ ಪಾಸ್‌ಪೋರ್ಟ್ ಹೊಂದಿರುವವರಿಗೆ ಲಭ್ಯವಿರುವ ವೀಸಾ ವಿನಾಯಿತಿ ಸೌಲಭ್ಯವನ್ನು ಬಳಸಿಕೊಂಡು ಅಪಹರಣ ಮತ್ತು ಕಳ್ಳಸಾಗಣೆ ಮಾಡುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿರುವುದನ್ನು ಸರ್ಕಾರ ಗಮನಿಸಿದೆ ಎಂದು ತಿಳಿಸಿದೆ.

- ಇರಾನ್‌ನಲ್ಲಿ ಭಾರತೀಯರ ಅಪಹರಣ ಮತ್ತು ಕಳ್ಳಸಾಗಣೆ ತಡೆಗಟ್ಟಲು ವೀಸಾ ಫ್ರೀ ಎಂಟ್ರಿ ನಿಯಮ ರದ್ದುಗೊಳಿಸಿದ ಇರಾನ್
- ವೀಸಾ ರದ್ದು ಕುರಿತು ಮಾಧ್ಯಮ ಪ್ರಕಟಣೆ ಹೊರಡಿಸಿ ಮಾಹಿತಿ ನೀಡಿದ ಭಾರತದ ವಿದೇಶಾಂಗ ಸಚಿವಾಲಯ

**ನ.22ರಿಂದ ಇರಾನ್‌ಗೆ ಹೋಗಲು ಬೇಕು ಕಡ್ಡಾಯ ವೀಸಾ:** ಹಾಗಾಗಿ ಕ್ರಿಮಿನಲ್ ಅಂಶಗಳಿಂದ ಸೌಲಭ್ಯವನ್ನು ಮತ್ತಷ್ಟು ದುರುಪಯೋಗಪಡಿಸಿಕೊಳ್ಳುವುದನ್ನು ತಡೆಗಟ್ಟುವ ಉದ್ದೇಶದಿಂದ ಈ ರದ್ದು ಹೊರಡಿಸಿದ್ದು, ನ.22ರಿಂದ ಸಾಮಾನ್ಯ ಪಾಸ್‌ಪೋರ್ಟ್‌ಗಳನ್ನು ಹೊಂದಿರುವ ಭಾರತೀಯ ಪ್ರಜೆಗಳು ಇರಾನ್ ಪ್ರವೇಶಿಸಲು ಅಥವಾ ಇರಾನ್ ವಿಮಾನ ನಿಲ್ದಾಣಗಳ ಮೂಲಕ ಪ್ರಯಾಣಿಸುವವರು (ಟ್ರಾನ್ಸಿಟ್) ಸಹ ವೀಸಾವನ್ನು ಪಡೆಯುವುದು ಕಡ್ಡಾಯವಾಗಿದೆ ಎಂದು ತಿಳಿಸಿದೆ.

**ಇರಾನ್ ಹೋಗುವ ಪ್ರಯಾಣಿಕರ ಮೇಲೆ ಬೀಳಲಿದೆ ಪರಿಣಾಮ:** ಇರಾನ್ ತನ್ನ ಶ್ರೀಮಂತ ಸಾಂಸ್ಕೃತಿಕ ಮತ್ತು ಐತಿಹಾಸಿಕ ಆಕರ್ಷಣೆಗಳಿಂದಾಗಿ ಭಾರತೀಯ ಪ್ರವಾಸಿಗರಿಗೆ ಬಹಳ ಹಿಂದಿನಿಂದಲೂ ಜನಪ್ರಿಯ ತಾಣವಾಗಿದೆ. ಇಸ್ಫಹಾನ್ ಮತ್ತು ಶಿರಜ್ ನಗರಗಳು ತಮ್ಮ ವಾಸ್ತುಶಿಲ್ಪ ಪರಂಪರೆಗಾಗಿ ಪ್ರವಾಸಿಗರನ್ನು ಆಕರ್ಷಿಸುತ್ತವೆ. ದೇಶದ ಮರುಭೂಮಿ ಭೂದೃಶ್ಯಗಳು ಮತ್ತು ಐತಿಹಾಸಿಕ ಸಿಲ್ಕ್ ರೋಡ್ ಮಾರ್ಗಗಳು ಸಹ ಪ್ರವಾಸಿಗರನ್ನು ಸೆಳೆದಿದ್ದವು. ಅಲ್ಲದೆ, ಯುರೋಪ್ ಅಥವಾ ಮಧ್ಯ ಏಷ್ಯಾ ಕಡೆಗೆ ಪ್ರಯಾಣಿಸುವ ಬಜೆಟ್ ಪ್ರವಾಸಿಗರಿಗೆ ಇರಾನ್ ಅನುಕೂಲಕರ ಟ್ರಾನ್ಸಿಟ್ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿತ್ತು.

ಆದರೆ, ಈ ಕಡ್ಡಾಯ ವೀಸಾ ನಿಯಮವು, ಹಿಂದೆ ಇರಾನ್‌ನ ವೀಸಾ-ಮುಕ್ತ ಪ್ರವೇಶ ಮತ್ತು ಸುಲಭ ಟ್ರಾನ್ಸಿಟ್ ಆಯ್ಕೆಗಳನ್ನು ಅವಲಂಬಿಸಿದ್ದ ಅನೇಕ ಪ್ರಯಾಣಿಕರ ಯೋಜನೆಗಳ ಮೇಲೆ ಗಣನೀಯ ಪರಿಣಾಮ ಬೀರಲಿದೆ ಎಂದು ನಿರೀಕ್ಷಿಸಲಾಗಿದೆ. ಈ ನಿರ್ಧಾರವು ಭಾರತೀಯ ಪ್ರವಾಸಿಗರಿಗೆ ಮತ್ತು ವ್ಯಾಪಾರಿಗಳಿಗೆ ಸ್ವಲ್ಪ ಅನಾನುಕೂಲತೆಯನ್ನು ಉಂಟುಮಾಡಬಹುದು. ಆದರೆ, ನಾಗರಿಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಅಕ್ರಮ ಚಟುವಟಿಕೆಗಳನ್ನು ತಡೆಯಲು ಈ ಕ್ರಮ ಅಗತ್ಯ ಎಂದು ಹೇಳಲಾಗಿದೆ.

**ಮುಂಚಿತವಾಗಿ ವೀಸಾ ಪಡೆಯಬೇಕು**

**ಭಾರತೀಯ ಸಾಮಾನ್ಯ ಪಾಸ್‌ಪೋರ್ಟ್ ಹೊಂದಿರುವವರಿಗೆ ಇರಾನ್ ನೀಡಿದ್ದ ಒಂದು-ಮಾರ್ಗದ ವೀಸಾ ವಿನಾಯಿತಿಯನ್ನು ಅಮಾನತುಗೊಳಿಸಲಾಗಿದೆ. ಕಳ್ಳಸಾಗಣೆ ಮತ್ತು ಅಪಹರಣ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ನವೆಂಬರ್ 22ರಿಂದ ಇರಾನ್‌ಗೆ ಪ್ರವೇಶಿಸಲು ಅಥವಾ ಅಲ್ಲಿಂದ ಪ್ರಯಾಣಿಸಲು ಭಾರತೀಯರು ಕಡ್ಡಾಯವಾಗಿ ಮುಂಚಿತವಾಗಿ ವೀಸಾ ಪಡೆಯಬೇಕು ಎಂದು ಭಾರತದ ವಿದೇಶಾಂಗ ಸಚಿವಾಲಯ ತಿಳಿಸಿದೆ.**

# ಹಸೀನಾ ಗಡೀಪಾರು ವಿಚಾರದಲ್ಲಿ ಎಚ್ಚರಿಕೆಯ ಹೆಜ್ಜೆ ಇಟ್ಟ ಭಾರತ

## ಶೇಖ್ ಹಸೀನಾಗೆ ಗಲ್ಲು ಶಿಕ್ಷೆ ಕುರಿತು ಭಾರತದ ಮೊದಲ ಪ್ರತಿಕ್ರಿಯೆ, ಬಾಂಗ್ಲಾದೇಶದ ವಿಶೇಷ ನ್ಯಾಯಲಯದ ತೀರ್ಪು ಪಕ್ಷಪಾತ

**ನಿಗೂಢ ಸ್ಥಳದಲ್ಲಿ ಆಶ್ರಯ**

**ಹೊಸದಿಲ್ಲಿ:** ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರಿಗೆ 2024ರ ವಿದ್ಯಾರ್ಥಿ ಪ್ರತಿಭಟನೆ ಹತ್ತಿಕ್ಕುವ ನಿಟ್ಟಿನಲ್ಲಿ ಹಲವರ ಜೀವ ತೆಗೆದಿದ್ದಾರೆಂದು ಆರೋಪಿಸಿ ಬಾಂಗ್ಲಾದೇಶ ಅಂತಾರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ ಗಲ್ಲು ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದೆ. ಈ ಕುರಿತು ಭಾರತ ಮೊದಲ ಪ್ರತಿಕ್ರಿಯೆ ನೀಡಿದ್ದು, ಈ ತೀರ್ಪನ್ನು ಭಾರತ ಗಮನಿದೆ ಎಂದು ಹೇಳಿದೆ ಆದರೆ, ಹಸೀನಾರನ್ನು ಬಾಂಗ್ಲದೇಶಕ್ಕೆ ಒಪ್ಪಿಸುವ ಕುರಿತು ಯಾವುದೇ ಸ್ಪಷ್ಟ ಹೇಳಿಕೆ ನೀಡಿಲ್ಲ.

**ಹಸೀನಾಗೆ ಶಿಕ್ಷೆ ಬೆನ್ನಲ್ಲೇ ಭಾತರದ ಮೊದಲ ಹೇಳಿಕೆ:** ಹಸೀನಾ ವಿರುದ್ಧ ಬಾಂಗ್ಲಾ ನ್ಯಾಯಲಯ ತೀರ್ಪು ಹೊರಡಿಸಿ ಮರಣದಂಡನೆ ನೀಡಿದ್ದು, ಈ ಬೆನ್ನಲ್ಲೇ ಭಾರತದ ವಿದೇಶಾಂಗ ಸಚಿವಾಲಯ ಹೇಳಿಕೆ ಬಿಡುಗಡೆ ಮಾಡಿದೆ. ಈ ಸೂಕ್ಷ್ಮತೆಯನ್ನು ಅರಿತು ನೀಡಿರುವ ಹೇಳಿಕೆಯಲ್ಲಿ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ಕುರಿತು ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ ಘೋಷಿಸಿದ ತೀರ್ಪನ್ನು ಭಾರತ ಗಮನಿಸಿದೆ.

ನಿಕಟ ನೆರೆಯ ರಾಷ್ಟ್ರವಾಗಿ, ಭಾರತವು ಬಾಂಗ್ಲಾದೇಶದ ಜನರ ಹಿತಾಸಕ್ತಿಗಳಿಗೆ ಬದ್ಧವಾಗಿದೆ, ಅದರಲ್ಲಿ ಶಾಂತಿ, ಪ್ರಜಾಪ್ರಭುತ್ವ, ಸೇರ್ಪಡೆ ಮತ್ತು ಸ್ಥಿರತೆ ಸೇರಿವೆ. ಆ ನಿಟ್ಟಿನಲ್ಲಿ ನಾವು ಯಾವಾಗಲೂ ಎಲ್ಲಾ ಪಾಲುದಾರರೊಂದಿಗೆ ರಚನಾತ್ಮಕವಾಗಿ ತೊಡಗಿಸಿಕೊಳ್ಳುತ್ತೇವೆ ಎಂದು ಹೇಳಿದೆ.



ಆದರೆ ಬಾಂಗ್ಲಾದಲ್ಲಿ ಕಳೆದ ವರ್ಷ ನಡೆದ ಹಿಂಸಾತ್ಮಕ ಪ್ರತಿಭಟನೆಗಳಿಂದ ತನ್ನ ದೇಶ ತೊರೆದು ಭಾರತಕ್ಕೆ ಬಂದು ನವದೆಹಲಿಯ ನಿಗೂಢ ಸ್ಥಳದಲ್ಲಿ ಆಶ್ರಯ ಪಡೆಯುತ್ತಿರುವ ಹಸೀನಾರನ್ನು ಭಾರತದಿಂದ ಗಡೀಪಾರು ಮಾಡಿ ಬಾಂಗ್ಲಾದೇಶಕ್ಕೆ ಒಪ್ಪಿಸಬೇಕು ಎಂಬ ಮನವಿಯ ಬಗ್ಗೆ ಯಾವುದೇ

**ಇನ್ನು, ಈ ಕುರಿತು ಮೊದಲ ಬಾರಿಗೆ ಹೇಳಿಕೆ ನೀಡಿದ ಹಸೀನಾ ತೀರ್ಪು ಪಕ್ಷಪಾತ, ರಾಜಕೀಯ ಪ್ರೇರಿತವಾಗಿದೆ. ಸಾಕ್ಷ್ಯಗಳನ್ನು ತೂಗಿ ನ್ಯಾಯಯುತವಾಗಿ ಪರೀಕ್ಷಿಸಬಹುದಾದ ಸರಿಯಾದ ನ್ಯಾಯಮಂಡಳಿಯಲ್ಲಿ ನನ್ನ ಆರೋಪ ಮಾಡುವವರನ್ನು ಎದುರಿಸಲು ನಾನು ಹೆದರುವುದಿಲ್ಲ**

**– ಶೇಖ್ ಹಸೀನಾ, ಮಾಜಿ ಪ್ರಧಾನಿ**

ಸ್ಪಷ್ಟ ಉತ್ತರ ನೀಡಿಲ್ಲ. ಕಳೆದ ಡಿಸೆಂಬರ್‌ನಿಂದಲೂ ಬಾಂಗ್ಲಾದೇಶ ಈ ಮನವಿಯನ್ನು ಮಾಡುತ್ತಿದ್ದರು ಸಹ ಭಾರತ ಈವರೆಗೂ ಈ ಮನವಿಗೆ ಸ್ಪಂದಿಸಿಲ್ಲ. ಅಂತಯೇ ಭಾರತ ಈಗಲೂ ಬಾಂಗ್ಲಾದ ಆಂತರಿಕ ವಿಷಯದಲ್ಲಿ ಯಾವುದೇ ನಿಲುವನ್ನು ಕಾಯ್ದುಕೊಂಡಿಲ್ಲ. ಕಳೆದ ವರ್ಷ ಜೂನ್‌ನಲ್ಲಿ ಬಾಂಗ್ಲಾದೇಶದಲ್ಲಿ ಹಸೀನಾ ಸರ್ಕಾರದ ಭ್ರಷ್ಟಾಚಾರಗಳನ್ನು ಖಂಡಿಸಿ ಭುಗಿಲೆದಿದ್ದ ವಿದ್ಯಾರ್ಥಿಗಳ ಪ್ರತಿಭಟನೆ ಹಿಂಸಾತ್ಮಕ ರೂಪ ಪಡೆದುಕೊಂಡ ನಂತರ ಹಸೀನಾ ತನ್ನ ಆಪ್ತರೊಂದಿಗೆ ಸೇರಿ ವಿದ್ಯಾರ್ಥಿಗಳ ಮೇಲೆ ನಡೆಸಿದ ದಾಳಿಗಳಿಂದ ಸಾವಿರಾರು ವಿದ್ಯಾರ್ಥಿಗಳು ಸಾವನ್ನಪ್ಪಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನ.17ರಂದು ವಿಚಾರಣೆ ನಡೆಸಿದ ಬಾಂಗ್ಲಾದೇಶದ ವಿಶೇಷ ನ್ಯಾಯಲಯ ಮಾನವೀಯತೆ ವಿರುದ್ಧ ಶೇಖ್ ಹಸೀನಾ ನಡೆಸಿರುವ ಅಪರಾಧಗಳು ಗರಿಷ್ಠ ಶಿಕ್ಷೆಗೆ ಅರ್ಹ ಎಂದು ಹೇಳಿ ಗಲ್ಲು ಶಿಕ್ಷೆ ವಿಧಿಸಿದೆ. ಈ ತೀರ್ಪು ಹಸೀನಾ ಅವರ ಪ್ರಕರಣವನ್ನು ಮತ್ತಷ್ಟು ಜಟಿಲಗೊಳಿಸುತ್ತದೆ. ಇನ್ನು, ಹಸೀನಾ ವಿರುದ್ಧ ಬಾಂಗ್ಲಾದೇಶ ಹೊರಡಿಸಿರುವ ತೀರ್ಪು ಭಾರತಕ್ಕೆ ಮುಳ್ಳಾಗಿದ್ದು, ಭಾರತ ಹೇಗೆ ಈ ಪ್ರಕರಣವನ್ನು ನಿಭಾಯಿಸುತ್ತದೆ ಜೊತೆಗೆ ಬಾಂಗ್ಲಾದೊಂದಿಗೆ ಈಗಾಗಲೇ ಹದಗೆಟ್ಟಿರುವ ಸಂಬಂಧವನ್ನು ಮತ್ತೆ ಪುನಶ್ಚೇತನಗೊಳಿಸುತ್ತದೆ ಎಂಬುದು ಕುತೂಹಲಕಾರಿ ಆಗಿದೆ. ಇವೆಲ್ಲದರ ಜೊತೆಗೆ ಹಸೀನಾರ ವಿಷಯದಲ್ಲಿ ಭಾರತದ ಮುಂದಿನ ಹೆಜ್ಜೆ ಏನು ಎಂಬುದು ಕಾದು ನೋಡಬೇಕಿದೆ.

**ಬಾಂಗ್ಲಾದೇಶ-ಭಾರತದ ನಡುವಿನ 2013ರ ಗಡೀಪಾರು ಒಪ್ಪಂದ**

**ಇನ್ನು, ಬಾಂಗ್ಲಾದೇಶ ಹಾಗೂ ಭಾರತದ ನಡುವೆ 2013ರಲ್ಲಿ ಗಡಿಪಾರು ಒಪ್ಪಂದವೊಂದು ಇದೆ. ಈ ಒಪ್ಪಂದದ ಪ್ರಕಾರ, ರಾಜಕೀಯ ಕಾರಣಗಳಿಗಾಗಿ ನೀಡುವ ಶಿಕ್ಷೆಗಳಿಗೆ ಗಡಿಪಾರು ನಿರಾಕರಿಸಬಹುದು. ಹತ್ಯೆಯಂತಹ ಪ್ರಕರಣಗಳಿಗೆ ಇದು ಅನ್ವಯಿಸುವುದಿಲ್ಲ ಎಂದು ಬಾಂಗ್ಲಾದೇಶ ವಾದಿಸಬಹುದು. ಆದರೆ, ಆರೋಪಗಳು ನ್ಯಾಯದ ಹಿತಾಸಕ್ತಿಗಾಗಿ ಮಾಡಿಲ್ಲ ಎಂದು ಸಾಬೀತುಪಡಿಸಿದರೆ ಗಡಿಪಾರು ನಿರಾಕರಿಸಬಹುದು ಎಂದು ಒಪ್ಪಂದದ 8ನೇ ವಿಧಿ ಹೇಳುತ್ತದೆ. ಹೀಗಾಗಿ, ಹಸೀನಾ ಅವರನ್ನು ಗಡಿಪಾರು ಮಾಡುವ ಪ್ರಕ್ರಿಯೆ ಬಹಳ ಸಂಕೀರ್ಣ ಮತ್ತು ಸುದೀರ್ಘವಾಗಿರುತ್ತದೆ. ಆದರೆ, ಭಾರತಕ್ಕೆ ಇದು ಕಾನೂನು ಮತ್ತು ಭೌಗೋಳಿಕ ರಾಜಕೀಯ ಸವಾಲುಗಳನ್ನು ತಂದೊಡ್ಡುತ್ತದೆ.**

# ಉಗ್ರರ ತಾಣವಾಗಿರುವ ಅಲ್ ಫಲಾಹ್ ವಿವಿ ಮೇಲೆ ಇಡಿ ದಾಳಿ

**ನವದೆಹಲಿ:** ಕೆಂಪು ಕೋಟೆ ಪ್ರದೇಶದ ಕಾರು ಸ್ಫೋಟ ಪ್ರಕರಣದ ಕೇಂದ್ರಬಿಂದುವಾಗಿರುವ ಫರೀದಾಬಾದ್‌ನ ಅಲ್ ಫಲಾಹ್ ವಿಶ್ವವಿದ್ಯಾನಿಲಯದ ಟ್ರಸ್ಟಿಗಳು, ಪ್ರವರ್ತಕರ ವಿರುದ್ಧ ಜಾರಿ ನಿರ್ದೇಶನಾಲಯ ಇಂದು ದೆಹಲಿ-ಎನ್‌ಸಿಆರ್‌ನಲ್ಲಿ ಏಕಕಾಲದಲ್ಲಿ ಶೋಧ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಫೆಡರಲ್ ತನಿಖಾ ಸಂಸ್ಥೆಯ ಹಲವಾರು ತಂಡಗಳು ಬೆಳಿಗ್ಗೆ 5:15 ರಿಂದ ಅಲ್ ಫಲಾಹ್ ಟ್ರಸ್ಟ್ ಮತ್ತು ವಿಶ್ವವಿದ್ಯಾನಿಲಯದ ಕನಿಷ್ಠ 25 ಆವರಣಗಳ ಮೇಲೆ ದಾಳಿ ನಡೆಸಿವೆ ಎಂದು ಅವರು ಹೇಳಿದರು. ದೆಹಲಿಯ ಓಖ್ಲಾ ಪ್ರದೇಶದ ಕಚೇರಿ ಸ್ಥಳದ ಮೇಲೆ ಏಜೆನ್ಸಿಯ ತಂಡಗಳು ಪೊಲೀಸ್ ಮತ್ತು ಅರೆಸೈನಿಕ ಪಡೆಗಳಿಂದ ಭದ್ರತಾ ಕವಚವನ್ನು ಒದಗಿಸಲಾಗಿದೆ.

ನವೆಂಬರ್ 10 ರಂದು ದೆಹಲಿಯ ಐಕಾನಿಕ್ ಸ್ಮಾರಕದ ಬಳಿ ನಡೆದ ಸ್ಫೋಟದಲ್ಲಿ ಹದಿನೈದು ಜನರು ಸಾವನ್ನಪ್ಪಿದ್ದಾರೆ ಮತ್ತು ವಿಶ್ವವಿದ್ಯಾಲಯ ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದ ಹಲವಾರು ವೈದ್ಯರ ಪಾತ್ರವನ್ನು ಭಯೋತ್ಪಾದನಾ ವಿರೋಧಿ ತನಿಖಾ ಸಂಸ್ಥೆಗಳು ಪರಿಶೀಲಿಸುತ್ತಿವೆ. ಈ ಕಾರ್ಯಾಚರಣೆಯು ಹಣಕಾಸಿನ ಅಕ್ರಮಗಳು, ಶೆಲ್ ಕಂಪನಿಗಳ ಬಳಕೆ, ವಸತಿ ಘಟಕಗಳು ಮತ್ತು ಹಣ ವರ್ಗಾವಣೆಯ ಬಗ್ಗೆ ನಡೆಯುತ್ತಿರುವ ತನಿಖೆಯ ಭಾಗವಾಗಿದೆ. ಅಲ್-ಫಲಾಹ್ ಟ್ರಸ್ಟ್, ಸಂಬಂಧಿತ ಘಟಕಗಳ ಪಾತ್ರ ತನಿಖೆಯಲ್ಲಿದೆ ಎಂದು ಇಡಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಟ್ರಸ್ಟ್ ಮತ್ತು ವಿಶ್ವವಿದ್ಯಾಲಯದ ಹಣಕಾಸು ಮತ್ತು ಆಡಳಿತವನ್ನು ನೋಡಿಕೊಳ್ಳುವ ಪ್ರಮುಖ ಸಿಬ್ಬಂದಿಯನ್ನು ಸಹ ದಾಳಿಗಳಲ್ಲಿ ಸೇರಿಸಲಾಗಿದೆ ಎಂದು ಅಧಿಕಾರಿ ಹೇಳಿದರು.

**ಬ್ಯಾಂಕಿಂಗ್ ಮಾರ್ಗಗಳ ಮೂಲಕ ಕನಿಷ್ಠ ವೇತನ ವಿತರಣೆಯ ನಿದರ್ಶನಗಳು, ಸಂಸ್ಥೆಗಳಾದ್ಯಂತ ಸಿಂಕ್ರೊನೈಸ್ಡ್ ಇನ್ಕಾರ್ಪೊರೇಷನ್ ಮಾದರಿಗಳು ಮತ್ತು ಸಾಮಾನ್ಯ ಸಂಪರ್ಕ ನಿರ್ದೇಶಾಂಕಗಳಿಂದ ದಾಖಲೆಗಳ ಅನುಪಸ್ಥಿತಿಯು ವಿಶ್ವವಿದ್ಯಾಲಯದಲ್ಲಿ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.**



ಈ ಪ್ರಕರಣದಲ್ಲಿ, ದೆಹಲಿ ಪೊಲೀಸರು ಸಲ್ಲಿಸಿದ ಪ್ರಥಮ ಮಾಹಿತಿ ವರದಿಗಳನ್ನು ಸಂಸ್ಥೆ ಗಮನದಲ್ಲಿಟ್ಟುಕೊಂಡಿದೆ. ಇಲ್ಲಿಯವರೆಗೆ, ಆತ್ಮಹತ್ಯಾ ಬಾಂಬರ್ ಡಾ. ಉಮರ್ ನಬಿ ಅವರ ಆಪ್ತ ಸಹಾಯಕರು ಎಂದು ಹೇಳಲಾದ ಇಬ್ಬರು ವ್ಯಕ್ತಿಗಳನ್ನು ಬಂಧಿಸಲಾಗಿದೆ. ಒಂದೇ ವಿಳಾಸದಲ್ಲಿ ನೋಂದಾಯಿಸಲಾದ ಗುಂಪಿಗೆ ಸಂಬಂಧಿಸಿದ ಕನಿಷ್ಠ ಒಂಬತ್ತು ಶೆಲ್ ಕಂಪನಿಗಳು ಇಡಿಯ ಪರಿಶೀಲನೆಯಲ್ಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಘೋಷಿತ ವ್ಯವಹಾರ ಸ್ಥಳಗಳಲ್ಲಿ ಭೌತಿಕ ಉಪಸ್ಥಿತಿ, ಅರ್ಥಪೂರ್ಣ ಉಪಯುಕ್ತತೆಯ ಬಳಕೆ ಇಲ್ಲದಿರುವುದು, ವಿವಿಧ ಕಂಪನಿಗಳು, ಖಾತೆಗಳಲ್ಲಿ ಸಾಮಾನ್ಯ ಮೊಬೈಲ್ ಸಂಖ್ಯೆ, ಇಮೇಲ್‌ನಂತಹ ಶೆಲ್- ಕಂಪನಿಯ ನಡವಳಿಕೆಗೆ ಹೊಂದಿಕೆಯಾಗುವ ಬಹು ಅಪಾಯ ಸೂಚಕಗಳನ್ನು ಪ್ರಾಥಮಿಕ ಸಂಶೋಧನೆಗಳು ಸೂಚಿಸುತ್ತವೆ. ವರದಿಯಾದ ಕಾರ್ಯಾಚರಣೆಗಳ ಪ್ರಮಾಣ, ನಿರ್ದೇಶಕರು, ಸಹಿದಾರರ ಅತಿಕ್ರಮಣ, ಘಟಕಗಳಾದ್ಯಂತ ದುರ್ಬಲ ಹಾದಿಗಳಿಗೆ ಹೊಂದಿಕೆಯಾಗದ ಫೈಲಿಂಗ್‌ಗಳ ಅನುಪಸ್ಥಿತಿಯನ್ನು ತನಿಖಾಧಿಕಾರಿಗಳು ಕಂಡುಕೊಂಡಿದ್ದಾರೆ.

ಇದಲ್ಲದೆ, ಯುಜಿಸಿ, ನ್ಯಾಕ್ ಮಾನ್ಯತೆಗೆ ಸಂಬಂಧಿಸಿದ ಹಕ್ಕುಗಳಲ್ಲಿ ಪ್ರಾಥಮಿಕವಾಗಿ ವ್ಯತ್ಯಾಸಗಳನ್ನು ಗಮನಿಸಲಾಗಿದೆ, ಇದು ಶಿಕ್ಷಣ ಸಂಸ್ಥೆಗಳಿಗೆ ಸ್ಥಾಪಿಸಲಾದ ಮಾನದಂಡಗಳನ್ನು ಪಾಲಿಸದಿರುವುದನ್ನು ಸೂಚಿಸುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಲ್ ಫಲಾಹ್ ವಿಶ್ವವಿದ್ಯಾಲಯವು ಹರಿಯಾಣದ ಫರಿದಾಬಾದ್ ಜಿಲ್ಲೆಯ ಧೌಜ್ ಪ್ರದೇಶದಲ್ಲಿದೆ ಮತ್ತು ಇದು ವೈದ್ಯಕೀಯ ಕಾಲೇಜು-ಕಮ್-ಆಸ್ಪತ್ರೆ ಆಗಿದೆ.

# ಆಂಬ್ಯುಲೆನ್ಸ್‌ಗೆ ಬೆಂಕಿ ಬಿದ್ದು ನಾಲ್ವರ ದಹನ

**ಮೋಡಸಾ:** ಮಂಗಳವಾರ ಬೆಳಗಿನ ಜಾವ ಗುಜರಾತ್‌ನ ಅರ್ವಳ್ಳಿ ಜಿಲ್ಲೆಯ ಮೋಡಸಾ ಪಟ್ಟಣದ ಬಳಿ ಆಂಬ್ಯುಲೆನ್ಸ್ ಗೆ ಬೆಂಕಿ ಹೊತ್ತಿಕೊಂಡು ನವಜಾತ ಶಿಶು, ವೈದ್ಯ, ಇಬ್ಬರು ವ್ಯಕ್ತಿಗಳು ಜೀವಂತ ದಹನವಾಗಿದ್ದಾರೆ. ನವಜಾತ ಶಿಶು, ವೈದ್ಯರು ಇತರ ಇಬ್ಬರು ಪ್ರಯಾಣಿಸುತ್ತಿದ್ದ ಆಂಬ್ಯುಲೆನ್ಸ್‌ಗೆ ಬೆಂಕಿ ಹೊತ್ತಿಕೊಂಡ ಪರಿಣಾಮ, ಎಲ್ಲರೂ ಸುಟ್ಟು ಕರಕಲಾದರು ಎಂದು ಪೊಲೀಸರು ತಿಳಿಸಿದ್ದಾರೆ. ಹೆರಿಗೆಯ ನಂತರ ಅಸ್ವಸ್ಥನಾಗಿದ್ದ ಒಂದು ದಿನದ ಗಂಡು ಮಗುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೋಡಸಾ ಮೂಲದ ಆಸ್ಪತ್ರೆಯಿಂದ ಅಹಮದಾಬಾದ್‌ನ ಖಾಸಗಿ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ ಬೆಳಗಿನ ಜಾವ 1 ಗಂಟೆ ಸುಮಾರಿಗೆ ಮೋಡಸಾ-ಧನ್ಸುರ ರಸ್ತೆಯಲ್ಲಿ ಆಂಬ್ಯುಲೆನ್ಸ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತು ಎಂದು ಪೊಲೀಸ್ ಇನ್ಸ್‌ಪೆಕ್ಟರ್ ಡಿಬಿ ವಾಲಾ ತಿಳಿಸಿದ್ದಾರೆ. ಮಗು, ಅದರ ತಂದೆ ಜಿಗ್ನೇಶ್ ಮೋಚಿ (38), ಅಹಮದಾಬಾದ್‌ನ ವೈದ್ಯ ಶಾಂತಿಲಾಲ್ ರೆಂಟಿಯಾ (30) ಮತ್ತು ಅರ್ವಳ್ಳಿ ಮೂಲದ ನರ್ಸ್ ಭೂರಿಬೆನ್ ಮನಾತ್ (23) ಸಾವನ್ನಪ್ಪಿದ್ದಾರೆ ಎಂದು ಅವರು ಹೇಳಿದರು.



ಮೋಚಿಯ ಇಬ್ಬರು ಸಂಬಂಧಿಕರು ಮತ್ತು ಖಾಸಗಿ ಆಂಬ್ಯುಲೆನ್ಸ್ ಚಾಲಕ ಸೇರಿದಂತೆ ಮೂವರು ಸುಟ್ಟ ಗಾಯಗಳಿಂದ ಬಳಲುತ್ತಿದ್ದು, ಅವರನ್ನು ಹತ್ತಿರದ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಜಿಗ್ನೇಶ್ ಮೋಚಿ ನೆರೆಯ ಮಹಿಸಾಗರ್ ಜಿಲ್ಲೆಯವರಾಗಿದ್ದು, ಅವರ ನವಜಾತ ಶಿಶು ಹೆರಿಗೆಯ ನಂತರ ಮೋಡಸಾದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿತ್ತು. ಅವರನ್ನು ಮತ್ತೊಂದು ಖಾಸಗಿ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ, ಯಾವುದೋ ಅಪರಿಚಿತ ಕಾರಣದಿಂದ ಆಂಬ್ಯುಲೆನ್ಸ್ ದಾರಿಯಲ್ಲಿ ಬೆಂಕಿಗೆ ಆಹುತಿಯಾಯಿತು ಎಂದು ವಾಲಾ ಹೇಳಿದರು. ಪೊಲೀಸರು ಬಿಡುಗಡೆ ಮಾಡಿದ ಸಿಸಿಟಿವಿ ದೃಶ್ಯಾವಳಿಗಳಲ್ಲಿ, ಆಂಬ್ಯುಲೆನ್ಸ್ ಹಿಂಭಾಗದಲ್ಲಿ ಬೆಂಕಿ ಹೊತ್ತಿಕೊಂಡಿರುವುದನ್ನು ಚಾಲಕ ಅರಿತುಕೊಂಡ ನಂತರ ಚಾಲಕ ಮತ್ತು ಮುಂಭಾಗದ ಸೀಟಿನಲ್ಲಿದ್ದ ಮೋಚಿಯ ಇಬ್ಬರು ಸಂಬಂಧಿಕರು ಗಾಯಗಳೊಂದಿಗೆ ಪಾರಾಗಿದ್ದರೂ, ಮಗು, ಅವನ ತಂದೆ, ವಾಹನದ ಹಿಂಭಾಗದಲ್ಲಿದ್ದ ವೈದ್ಯರು ಮತ್ತು ನರ್ಸ್ ಬೆಂಕಿಯಲ್ಲಿ ಸುಟ್ಟು ಕರಕಲಾದರು ಎಂದು ವಾಲಾ ಹೇಳಿದರು. ಸ್ಥಳೀಯ ಅಗ್ನಿಶಾಮಕ ದಳವು ಸ್ಥಳಕ್ಕೆ ಧಾವಿಸಿದ ನಂತರ ನಾಲ್ವರು ಬಲಿಪಶುಗಳನ್ನು ಉಳಿಸಲು ಸಾಧ್ಯವಾಗಲಿಲ್ಲ ಎಂದು ಅವರು ಹೇಳಿದರು. ಗಾಯಗೊಂಡವರನ್ನು ಚಾಲಕ ಅಂಕಿತ್ ಠಾಕೂರ್ ಮತ್ತು ಜಿಗ್ನೇಶ್ ಮೋಚಿಯ ಸಂಬಂಧಿಕರಾದ ಗೌರಂಗ್ ಮೋಚಿ ಮತ್ತು ಗೀತಾಬೆನ್ ಮೋಚಿ ಎಂದು ಗುರುತಿಸಲಾಗಿದೆ. ಘಟನೆಯ ತನಿಖೆ ನಡೆಸಲು ಮತ್ತು ದುರಂತಕ್ಕೆ ಕಾರಣವಾದ ಕಾರಣಗಳನ್ನು ಕಂಡುಹಿಡಿಯಲು ವಿಧಿವಿಜ್ಞಾನ ತಜ್ಞರನ್ನು ಕರೆಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮನೋಹರ್ ಸಿಂಗ್ ಜಡೇಜಾ ತಿಳಿಸಿದ್ದಾರೆ.

# ಆಂಧ್ರ ಪ್ರದೇಶದಲ್ಲಿ ಆರು ನಕ್ಸಲರ ಎನ್‌ಕೌಂಟರ್

**ಮಾರೇಡುಮಿಲಿ:** ನೆರೆಯ ಆಂಧ್ರ ಪ್ರದೇಶದಲ್ಲಿ ಆರು ನಕ್ಸಲರನ್ನು ಹತ್ಯೆ ಮಾಡಲಾಗಿದೆ ಇಲ್ಲಿನ ಅಲ್ಲೂರಿ ಸೀತಾರಾಮರಾಜು ಜಿಲ್ಲೆಯಲ್ಲಿ ಭದ್ರತಾ ಸಿಬ್ಬಂದಿಯೊಂದಿಗೆ ನಡೆದ ಎನ್‌ಕೌಂಟರ್‌ನಲ್ಲಿ ಆರು ಮಾವೋವಾದಿಗಳು ಸಾವನ್ನಪ್ಪಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಾರೇಡುಮಿಲ್ಲಿ ಮಂಡಲದ ಅರಣ್ಯ ಪ್ರದೇಶದಲ್ಲಿ ಬೆಳಿಗ್ಗೆ 6.30 ರಿಂದ ಬೆಳಿಗ್ಗೆ 7 ಗಂಟೆಯ ನಡುವೆ ಎನ್‌ಕೌಂಟರ್ ನಡೆಸಲಾಗಿದೆ ಎಂದು ಅಲ್ಲೂರಿ ಸೀತಾರಾಮರಾಜು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮಿತ್ ಬರ್ದಾರ್ ತಿಳಿಸಿದ್ದಾರೆ.

ಹೌದು, ಇಂದು ಅಲ್ಲೂರಿ ಜಿಲ್ಲೆಯಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಆರು ಮಾವೋವಾದಿಗಳು ಸಾವನ್ನಪ್ಪಿದ್ದಾರೆ ಎಂದು ಬರ್ದಾರ್ ಪಿಟಿಐಗೆ ತಿಳಿಸಿದ್ದಾರೆ. ಎಸ್‌ಪಿ ಪ್ರಕಾರ, ಇದು ಪೊಲೀಸ್ ಇಲಾಖೆಯ ವಿವಿಧ ವಿಭಾಗಗಳು ನಡೆಸಿದ ಜಂಟಿ ಕಾರ್ಯಾಚರಣೆಯಾಗಿದೆ. ದೇಶವನ್ನು ನಕಲ್‌ಮುಕ್ತಗೊಳಿಸಲು ಕೇಂದ್ರ ಸರ್ಕಾರ ನಿರ್ಧರಿಸಿರುವ ಬೆನ್ನಲ್ಲೇ ಹಲವಾರು ನಕ್ಸಲರು ಹತ್ಯೆ ಮಾಡಲಾಗಿದ್ದರೆ, ಇನ್ನು ಕೆಲವು ನಕ್ಸಲರು ಪೊಲೀಸರಿಗೆ ಶರಣಾಗಿ ಮುಖ್ಯ ವಾಹಿನಿಗೆ ಮರುಳಿದ್ದಾರೆ.

ಇನ್ನು ಕೆಲ ಕಡೆ ನಕ್ಸಲರು ಅಟ್ಟಹಾಸ ಮೆರೆಯುತ್ತಿದ್ದು, ಅವರನ್ನು ಕೊನೆಗಾಣಿಸಲು ಭದ್ರತಾ ಪಡೆಗಳು ಕಾರ್ಯಚರಣೆ ನಡೆಸುತ್ತಿವೆ. ಮಂಗಳವಾರ ಬೆಳಿಗ್ಗೆ ಆಂಧ್ರದಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಆರು ನಕ್ಸಲರು ಹತರಾಗಿದ್ದಾರೆ.

## ಮಿನಿ ನ್ಯೂಸ್

### ಹಸುವಿನ ಹಾಲಿನಿಂದ ತಯಾರಿಸಿದ್ದ ಪ್ರಸಾದ ಸೇವನೆಯಿಂದ ರೇಬೀಸ್ ಭೀತಿ

**ಗೋರಖ್‌ಪುರ:** ಗೋರಖ್‌ಪುರ ಗ್ರಾಮದಲ್ಲಿ ಸುಮಾರು 150 ಜನರು ಹಸುವಿನ ಹಸಿ ಹಾಲಿನಿಂದ ತಯಾರಿಸಿದ ಪಂಚಾಮೃತ ಸೇವಿಸಿದ ನಂತರ ಭಯ ಆವರಿಸಿದೆ 1 ಹಸು ರೇಬೀಸ್‌ನಿಂದ ಸಾವನ್ನಪ್ಪಿದೆ ಎಂದು ಅಧಿಕಾರಿಗಳು ತಿಳಿಸಿದ ನಂತರ ಗ್ರಾಮಸ್ಥರು ಆತಂಕಗೊಂಡಿದ್ದಾರೆ. ಜಿಲ್ಲಾ ಕೇಂದ್ರದಿಂದ ಸುಮಾರು 40 ಕಿ.ಮೀ ದೂರದಲ್ಲಿರುವ ಉರುವಾ ಬ್ಲಾಕ್‌ನಲ್ಲಿರುವ ರಾಮ್ಡಿಹ್ ಗ್ರಾಮದಲ್ಲಿ ಈ ಘಟನೆ ಬೆಳಕಿಗೆ ಬಂದಿದೆ.

ಸುಮಾರು 160 ಗ್ರಾಮಸ್ಥರಿಗೆ ಇಲ್ಲಿಯವರೆಗೆ 24 ಜನರಿಗೆ ರೇಬೀಸ್ ನಿರೋಧಕ ಲಸಿಕೆಯನ್ನು ನೀಡಲಾಗಿದೆ, ಉಳಿದವರಿಗೆ ಮುಂದಿನ ಏಳನೇ ದಿನದಲ್ಲಿ ಲಸಿಕೆ ನೀಡಲು ನಿಗದಿಪಡಿಸಲಾಗಿದೆ ಎಂದು ಉರುವಾ ಪ್ರಾಥಮಿಕ ಆರೋಗ್ಯ ಕೇಂದ್ರದ ಉಸ್ತುವಾರಿ ಡಾ. ಜೆ. ಪಿ. ತಿವಾರಿ ಹೇಳಿದ್ದಾರೆ. ಸೋಂಕಿತ ಹಸುವಿನ ಹಾಲಿನ ಮೂಲಕ ಮನುಷ್ಯರಿಗೆ ರೇಬೀಸ್ ಹರಡಬಹುದು ಎಂದು ತೋರಿಸುವ ಯಾವುದೇ ಸ್ಥಾಪಿತ ಸಂಶೋಧನೆ ಇಲ್ಲ. ಆದಾಗ್ಯೂ, ಮುನ್ನೆಚ್ಚರಿಕೆಯಾಗಿ ನಾವು ಲಸಿಕೆ ಹಾಕಲು ಸಲಹೆ ನೀಡಿದ್ದೇವೆ ಎಂದು ಅವರು ಹೇಳಿದರು. ಗ್ರಾಮಸ್ಥರಾದ ರಾಜೀವ್ ಗೌರ್, ಸೋನು ವಿಶ್ವಕರ್ಮ ಅವರು ನಡೆಸಿದ ಆಚರಣೆಯಲ್ಲಿ ಈ ಹಾಲನ್ನು ಬಳಸಲಾಯಿತು.ಆ ಹಸು ಧರ್ಮೇಂದ್ರ ಗೌರ್ ಅವರಿಗೆ ಸೇರಿದ್ದು, ಸುಮಾರು ಮೂರು ತಿಂಗಳ ಹಿಂದೆ ಬೀದಿ ನಾಯಿ ಕಚ್ಚಿತ್ತು. ಮುಖ್ಯ ವೈದ್ಯಾಧಿಕಾರಿ ಡಾ. ರಾಜೇಶ್ ಝಾ ಅವರು ಪರಿಸ್ಥಿತಿಯನ್ನು ನಿಗಾದಲ್ಲಿ ಇರಿಸಲಾಗಿದೆ ಎಂದು ಹೇಳಿದರು.

### ಶೇಖ್ ಹಸೀನಾ ಹೇಳಿಕೆ ಪ್ರಕಟಿಸದಂತೆ ಮಾಧ್ಯಮಗಳಿಗೆ ವಾರ್ನಿಂಗ್

**ಢಾಕಾ:** ಬಾಂಗ್ಲಾದೇಶದ ಮಧ್ಯಂತರ ಸರ್ಕಾರವು ಎಲ್ಲಾ ಮುದ್ರಣ, ಎಲೆಕ್ಟ್ರಾನಿಕ್ ಮತ್ತು ಆನ್‌ಲೈನ್ ಮಾಧ್ಯಮಗಳಿಗೆ ರಾಷ್ಟ್ರೀಯ ಭದ್ರತೆ ಮತ್ತು ಸಾರ್ವಜನಿಕ ಸುವ್ಯವಸ್ಥೆಯ ಬಗ್ಗೆ ಕಳವಳ ವ್ಯಕ್ತಪಡಿಸಿ, ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರು ನೀಡಿದ ಹೇಳಿಕೆಗಳನ್ನು ವರದಿ ಮಾಡದಂತೆ ಎಚ್ಚರಿಕೆ ನೀಡಿದೆ.

ರಾಷ್ಟ್ರೀಯ ಸೈಬರ್ ಭದ್ರತಾ ಸಂಸ್ಥೆ ಬಿಡುಗಡೆ ಮಾಡಿದ ಪತ್ರಿಕಾ ಪ್ರಕಟಣೆಯಲ್ಲಿ ಹಸೀನಾ ಅವರ ಹೇಳಿಕೆಗಳು ಹಿಂಸೆ, ಅವ್ಯವಸ್ಥೆ, ಅಪರಾಧ ಚಟುವಟಿಕೆಗಳನ್ನು ಪ್ರಚೋದಿಸುವ, ಸಾಮಾಜಿಕ ಸಾಮರಸ್ಯವನ್ನು ಭಂಗಗೊಳಿಸುವ ಸಾಮರ್ಥ್ಯವಿರುವ ನಿರ್ದೇಶನಗಳು, ಕರೆಗಳನ್ನು ಒಳಗೊಂಡಿರಬಹುದು ಎಂದು ಹೇಳಿಕೊಂಡಿದೆ ಎಂದು ದಿ ಡೈಲಿ ಸ್ಟಾರ್ ಪತ್ರಿಕೆ ವರದಿ ಮಾಡಿದೆ.

ರಾಷ್ಟ್ರೀಯ ಭದ್ರತೆಯ ಹಿತದೃಷ್ಟಿಯಿಂದ ಮಾಧ್ಯಮಗಳು ಜವಾಬ್ದಾರಿಯುತವಾಗಿ ವರ್ತಿಸಬೇಕೆಂದು ನಾವು ಒತ್ತಾಯಿಸುತ್ತೇವೆ, ಎಂದು ಪ್ರಕಟಣೆ ತಿಳಿಸಿದೆ. ಕೆಲವು ಮಾಧ್ಯಮ ಸಂಸ್ಥೆಗಳು ಶಿಕ್ಷೆಗೊಳಗಾದ ಮತ್ತು ಪರಾರಿ ಹಸೀನಾ ಅವರ ಹೇಳಿಕೆಗಳನ್ನು ಪ್ರಸಾರ ಮಾಡುತ್ತಿವೆ ಮತ್ತು ಪ್ರಕಟಿಸುತ್ತಿವೆ ಎಂಬುದು ತೀವ್ರ ಕಳವಳ ಎಂದು ಸಂಸ್ಥೆ ಹೇಳಿದೆ. ಶಿಕ್ಷೆಗೊಳಗಾದ ಮತ್ತು ಪರಾರಿಯಾಗಿರುವ ವ್ಯಕ್ತಿಗಳ ಹೇಳಿಕೆಗಳನ್ನು ಪ್ರಸಾರ ಮಾಡುವುದು ಅಥವಾ ಪ್ರಕಟಿಸುವುದು ಸೈಬರ್ ಭದ್ರತಾ ಸುಗ್ರೀವಾಜ್ಞೆಯ ನಿಬಂಧನೆಗಳನ್ನು ಉಲ್ಲಂಘಿಸುತ್ತದೆ ಎಂದು ಗಮನಿಸಿದ ಸಂಸ್ಥೆ, ರಾಷ್ಟ್ರೀಯ ಸಮಗ್ರತೆ, ಭದ್ರತೆ, ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ತರುವ, ಜನಾಂಗೀಯ, ಧಾರ್ಮಿಕ ದ್ವೇಷವನ್ನು ಉತ್ತೇಜಿಸುವ, ನೇರವಾಗಿ ಹಿಂಸಾಚಾರವನ್ನು ಪ್ರಚೋದಿಸುವ ವಿಷಯವನ್ನು ತೆಗೆದುಹಾಕಲು ಅಥವಾ ನಿರ್ಬಂಧಿಸಲು ಅಧಿಕಾರಿಗಳಿಗೆ ಅಧಿಕಾರವಿದೆ ಎಂದು ಎಚ್ಚರಿಸಿದೆ.

### ಚೀನಾವನ್ನು ಮೀರಿಸಬೇಕಾದರೆ 9-9-6 ಮಾದರಿ ಕೆಲಸ ಅನಿವಾರ್ಯ

**ನವದೆಹಲಿ:** ಇನ್ಫೋಸಿಸ್ ಸಂಸ್ಥಾಪಕ ನಾರಾಯಣ ಮೂರ್ತಿ ಅವರು ಮತ್ತೊಮ್ಮೆ ಯುವ ಜನಾಂಗ ಹೆಚ್ಚು ಕಾಲ ಕೆಲಸ ಮಾಡಬೇಕು ಎಂದು ಸಲಹೆ ನೀಡಿದ್ದು, ಅದಕ್ಕೆ ಚೀನಾದ 9-9-6 ಮಾದರಿಯ ಉದಾಹರಣೆ ನೀಡಿ ಗಮನ ಸೆಳೆದಿದ್ದಾರೆ. ಯುವ ಜನಾಂಗ ಭಾರತವನ್ನು ವೇಗವಾಗಿ ಬೆಳೆಸಲು ಸಹಾಯ ಮಾಡಲು ಹೆಚ್ಚು ಸಮಯ ಕೆಲಸ ಮಾಡಬೇಕು ಎಂಬ ತಮ್ಮ ದೀರ್ಘಕಾಲದ ದೃಷ್ಟಿಕೋನವನ್ನು ಬೆಂಬಲಿಸಲು ಚೀನಾದ ಪ್ರಸಿದ್ಧ 9-9-6 ಕೆಲಸದ ಸಂಸ್ಕೃತಿಯನ್ನು ಮೂರ್ತಿ ಉಲ್ಲೇಖಿಸಿದ್ದಾರೆ. ಈ ಹಿಂದೆ 2023 ರಲ್ಲಿ ರಾಷ್ಟ್ರ ನಿರ್ಮಾಣಕ್ಕಾಗಿ ಭಾರತೀಯರು ವಾರಕ್ಕೆ 70 ಗಂಟೆಗಳ ಕಾಲ ಕೆಲಸ ಮಾಡಬೇಕು ಎಂದು ಹೇಳಿದಾಗ ವ್ಯಾಪಕ ಚರ್ಚೆಗೆ ಕಾರಣರಾಗಿದ್ದರು.

ಈ ಬಾರಿ, ಕಳೆದ ಕೆಲವು ದಶಕಗಳಲ್ಲಿ ವೇಗವಾಗಿ ಬೆಳೆದಿರುವ ಮತ್ತು ಕೈಗಾರಿಕಾ ಮತ್ತು ಆರ್ಥಿಕ ಪ್ರಗತಿಗೆ ಮಾನದಂಡವಾಗಿ ಬಳಸಲಾಗುವ ದೇಶವಾದ ಚೀನಾವನ್ನು ಸೂಚಿಸುವ ಮೂಲಕ ಅವರು ಮತ್ತೆ ಅದೇ ವಿಚಾರವನ್ನು ಮುಂದಿಟ್ಟಿದ್ದಾರೆ. 9-9-6 ನಿಯಮ ಏನು? ಈ ನಿಯಮವು ಒಂದು ಕಾಲದಲ್ಲಿ ಚೀನೀ ಟೆಕ್ ಕಂಪನಿಗಳಲ್ಲಿ ಸಾಮಾನ್ಯವಾಗಿದ್ದ ಕೆಲಸದ ವೇಳಾಪಟ್ಟಿಯನ್ನು ಸೂಚಿಸುತ್ತದೆ, ಅಲ್ಲಿ ಉದ್ಯೋಗಿಗಳು ವಾರದಲ್ಲಿ ಆರು ದಿನಗಳು ಬೆಳಿಗ್ಗೆ 9 ರಿಂದ ರಾತ್ರಿ 9 ರವರೆಗೆ ಕೆಲಸ ಮಾಡಬೇಕಾಗಿತ್ತು. ಇದು 72 ಗಂಟೆಗಳ ಕೆಲಸದ ವಾರಕ್ಕೆ ಸಮನಾಗಿರುತ್ತದೆ. ಜನರು ಜೀವನವನ್ನು ಪಡೆಯಬೇಕು ಮತ್ತು ನಂತರ ಕೆಲಸ-ಜೀವನದ ಸಮತೋಲನದ ಬಗ್ಗೆ ಚಿಂತಿಸಬೇಕು ಎಂದು ಅವರು ಹೇಳಿದರು.

# ಟಿಎಂಸಿ ಸರ್ಕಾರದ ಅನ್ಯಾಯ, ಲೂಟಿಯನ್ನು ಬಯಲುಗೊಳಿಸುವ ಗುರಿ

## ಸಿಪಿಐ(ಎಂ) ಪಕ್ಷದಿಂದ ನವೆಂಬರ್ 29 ರಿಂದ 1,000 ಕಿಲೋಮೀಟರ್ ಯಾತ್ರೆಯ ಬಾಂಗ್ಲಾ ಬಚಾವ್ ಯಾತ್ರೆ, ಮತದಾರರೊಂದಿಗೆ ಮರುಸಂಪರ್ಕ ಸಾಧಿಸಲು ಸಹಾಯ

**ಕಲ್ಕತ್ತಾ:** ಸಿಪಿಐ(ಎಂ) ಪಕ್ಷವು ನ. 29 ರಿಂದ 1,000 ಕಿಲೋಮೀಟರ್ ಯಾತ್ರೆಯ ಬಾಂಗ್ಲಾ ಬಚಾವ್ ಯಾತ್ರೆಯನ್ನು ಪ್ರಾರಂಭಿಸಲಿದೆ. ಈ ಯಾತ್ರೆಯು ಪಶ್ಚಿಮ ಬಂಗಾಳದಲ್ಲಿ ಆಡಳಿತ ನಡೆಸುತ್ತಿರುವ ಟಿಎಂಸಿ ಸರ್ಕಾರದ ಅನ್ಯಾಯ, ಲೂಟಿ, ಪ್ರಜಾಪ್ರಭುತ್ವದ ನಾಶವನ್ನು ಬಯಲುಗೊಳಿಸುವ ಗುರಿಯನ್ನು ಹೊಂದಿದೆ. ಇದರ ಜೊತೆಗೆ, ಕೇಂದ್ರದ ಬಿಜೆಪಿ ಸರ್ಕಾರದ ಜನವಿರೋಧಿ ನೀತಿಗಳಿಂದಾಗಿ ರಾಜ್ಯದಲ್ಲಿ ಹೆಚ್ಚುತ್ತಿರುವ ಸಂಕಷ್ಟವನ್ನು ಎದುರಿಸಲು ಈ ಯಾತ್ರೆ ಕರೆ ನೀಡಿದೆ. ಈ ಯಾತ್ರೆಯು ಪಕ್ಷದ ಕಾರ್ಯಕರ್ತರಲ್ಲಿ ಹೊಸ ಉತ್ಸಾಹ ತುಂಬಿ, 2026ರ ವಿಧಾನಸಭಾ ಚುನಾವಣೆಗೆ ಮುನ್ನ ಮತದಾರರೊಂದಿಗೆ ಮರುಸಂಪರ್ಕ ಸಾಧಿಸಲು ಸಹಾಯ ಮಾಡಲಿದೆ ಎಂದು ಪಕ್ಷದ ನಾಯಕರು ಆಶಿಸಿದ್ದಾರೆ.

**ಆಡಳಿತ ವಿರೋಧಿ ಅಲೆ**

**ನವೆಂಬರ್ 29 ರಿಂದ ಡಿಸೆಂಬರ್ 17 ರವರೆಗೆ ಯಾತ್ರೆ:** ಈ ಯಾತ್ರೆಯು ನ. 29 ರಿಂದ ಡಿಸೆಂಬರ್ 17 ರವರೆಗೆ ನಡೆಯಲಿದೆ.



**ಶಿಕ್ಷಣದಿಂದ ಉದ್ಯೋಗದವರೆಗೆ, ಆರೋಗ್ಯದಿಂದ ಮಹಿಳಾ ಸುರಕ್ಷತೆಯವರೆಗೆ, ಪ್ರತಿಯೊಂದು ಸ್ತಂಭವೂ ದುರ್ಬಲಗೊಂಡಿದೆ. ಈ ಯಾತ್ರೆಯು ನಮ್ಮ ಘನತೆ, ಹಕ್ಕುಗಳು, ಪ್ರಜಾಪ್ರಭುತ್ವವನ್ನು ಪುನಃಸ್ಥಾಪಿಸಲು, ದೆಹಲಿಯ ಜನವಿರೋಧಿ ನೀತಿಗಳು ಹಾಗೂ ಕೋಲ್ಕತ್ತಾದ ಜನವಿರೋಧಿ ಆಡಳಿತವನ್ನು ವಿರೋಧಿಸಲು ನಮ್ಮ ಪ್ರತಿಜ್ಞೆಯಾಗಿದೆ, ಈ ಯಾತ್ರೆಯು ಟಿಎಂಸಿಯ ಭ್ರಷ್ಟಾಚಾರ ಮತ್ತು ಬಿಜೆಪಿಯ ಆರ್ಥಿಕ ದಾಳಿಯ ನಡುವೆ ಸಿಲುಕಿರುವ ಜನರ ನಿಜ ಜೀವನದ ಅನುಭವಗಳನ್ನು ಮುನ್ನೆಲೆಗೆ ತರುತ್ತದೆ. ಬಂಗಾಳವು ತನ್ನ ಧ್ವನಿಯನ್ನು ಮರಳಿ ಪಡೆಯಬೇಕು.** – ಸಲೀಂ

ಇದು ಉತ್ತರ ಬಂಗಾಳದ ಕೂಚ್‌ಬೆಹಾರ್ ಜಿಲ್ಲೆಯ ತುಫನ್ ಗಂಜ್‌ನಿಂದ ಆರಂಭಗೊಂಡು, ಉತ್ತರ 24 ಪರಗಣ ಜಿಲ್ಲೆಯ ಕಮಾರ್‌ಹಾಟಿಯಲ್ಲಿ ಕೊನೆಗೊಳ್ಳಲಿದೆ.

ಒಟ್ಟು 11 ಜಿಲ್ಲೆಗಳು, ಕೆಲವು ಸುತ್ತಮುತ್ತಲಿನ ಪ್ರದೇಶಗಳನ್ನು ಇದು ಕ್ರಮಿಸಲಿದೆ. ಹತ್ತಿರದ ಪ್ರದೇಶಗಳಿಂದ ಅನೇಕ ಸಣ್ಣ ಯಾತ್ರೆಗಳು ಮುಖ್ಯ ಯಾತ್ರೆಯೊಂದಿಗೆ ಸೇರಲಿವೆ. ರಾಜ್ಯದ ದುರಾಡಳಿತದಿಂದ ನೊಂದಿರುವ ಎಲ್ಲಾ ವರ್ಗದ ಜನರೊಂದಿಗೆ ಸಂಪರ್ಕ ಸಾಧಿಸಲು' ಈ ಮಾರ್ಗವನ್ನು ರೂಪಿಸಲಾಗಿದೆ ಎಂದು ಸಿಪಿಐ(ಎಂ) ಹೇಳಿದೆ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮೊಹಮ್ಮದ್ ಸಲೀಂ ಅವರು ಕೋಲ್ಕತ್ತಾದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಬಾಂಗ್ಲಾ ಬಚಾವ್ ಯಾತ್ರೆ ಒಂದು ಸರಿಪಡಿಸುವ ಚಳುವಳಿಯಾಗಿದೆ ಎಂದು ತಿಳಿಸಿದರು. ಬಂಗಾಳ ಸರ್ಕಾರವು ರಾಜ್ಯವನ್ನು ಲೂಟಿ, ಭ್ರಷ್ಟಾಚಾರ, ದುರಾಡಳಿತ ಮತ್ತು ವಂಚನೆಯ ಕಥೆಯನ್ನಾಗಿ ಮಾರ್ಪಡಿಸಿದೆ. ಇತ್ತ ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರವು ಕಾರ್ಮಿಕರು, ರೈತರು ಮತ್ತು ಬಡವರನ್ನು ನಾಶಪಡಿಸಿದ ನೀತಿಗಳನ್ನು ಜಾರಿಗೆ ತಂದಿದೆ ಎಂದು ಸಲೀಂ ಹೇಳಿದರು.


**ಸಿಪಿಐ (ಎಂ) ಹೇಳುವುದೇನು?**

**ಈ ಯಾತ್ರೆಯು ಗ್ರಾಮೀಣ ಆರೋಗ್ಯ ಮತ್ತು ಶಿಕ್ಷಣ ವ್ಯವಸ್ಥೆಯ ಕುಸಿತ , ರೈತರು, ವಲಸೆ ಕಾರ್ಮಿಕರು, ಚಹಾ ತೋಟದ ಕಾರ್ಮಿಕರು, ಬೀಡಿ ಕಾರ್ಮಿಕರು ಮತ್ತು ಗಿಗ್-ಎಕಾನಮಿ (ಅನಿಶ್ಚಿತ ಉದ್ಯೋಗ)ಯಲ್ಲಿರುವವರ ಸಂಕಷ್ಟದಂತಹ ವ್ಯಾಪಕ ಸಮಸ್ಯೆಗಳನ್ನು ಎತ್ತಿ ತೋರಿಸಲಿದೆ. ಸಿಪಿಐ(ಎಂ) ಪಕ್ಷದ ಪ್ರಕಾರ, ಟಿಎಂಸಿ ಮತ್ತು ಕೇಂದ್ರದ ಬಿಜೆಪಿ ಸರ್ಕಾರಗಳು ತಮ್ಮದೇ ಆದ ರೀತಿಯಲ್ಲಿ ಪಶ್ಚಿಮ ಬಂಗಾಳದಲ್ಲಿ ಜೀವನೋಪಾಯ ಮತ್ತು ಪ್ರಜಾಪ್ರಭುತ್ವದ ಬಿಕ್ಕಟ್ಟುಗಳನ್ನು ಉಲ್ಬಣಗೊಳಿಸಿವೆ. ಟಿಎಂಸಿ ಸರ್ಕಾರವು ಲೂಟಿ, ಬೆದರಿಕೆ ಮತ್ತು ಸುಲಿಗೆಯ ಆಡಳಿತ ನಡೆಸಿದೆ ಎಂದು ಪಕ್ಷ ಆರೋಪಿಸಿದೆ. ಇತ್ತ ಕೇಂದ್ರದ ಬಿಜೆಪಿ ಸರ್ಕಾರವು ಜನವಿರೋಧಿ ಆರ್ಥಿಕ ನೀತಿಗಳನ್ನು ಅನುಸರಿಸಿದ್ದು, ಇದರಿಂದಾಗಿ ನಿರುದ್ಯೋಗ, ಹಣದುಬ್ಬರ ಮತ್ತು ಗ್ರಾಮೀಣ ಪ್ರದೇಶದ ಬಡತನ ಹೆಚ್ಚಾಗಿದೆ ಎಂದು ಹೇಳಿದೆ.**

# ಅಜಯ್ ರಾವ್ ಹೊಸ ಸಿನಿಮಾ 'ರಾಧೇಯ'

ಕೃಷ್ಣ ಅಜಯ್ ರಾವ್ ನಟನೆಯ 'ರಾಧೇಯ' ಸಿನಿಮಾದಲ್ಲಿ ಸೋನಲ್ ಮಾಂತೆರೋ ಅವರು ಕ್ರೈಮ್ ರಿಪೋರ್ಟರ್ ಪಾತ್ರ ಮಾಡಿದ್ದಾರೆ. ವಿಯಾನ್ (ಸ್ಯಾಂಡಿ) ಅವರು ಸಂಗೀತ ನೀಡಿದ್ದಾರೆ. ರಮ್ಮಿ ಅವರ ಛಾಯಾಗ್ರಹಣ, ಸುರೇಶ್ ಆರ್ಮುಗಂ ಅವರ ಸಂಕಲನ ಈ ಚಿತ್ರಕ್ಕಿದೆ. ಬೆಂಗಳೂರು ಸುತ್ತಮುತ್ತ ಈ ಚಿತ್ರಕ್ಕೆ ಶೂಟಿಂಗ್ ನಡೆಸಲಾಗಿದೆ.

ಕೃಷ್ಣ ಅಜಯ್ ರಾವ್ ಅವರ ಹೊಸ ಸಿನಿಮಾ 'ರಾಧೇಯ' ಈ ವಾರ ರಾಜ್ಯಾದ್ಯಂತ ಬಿಡುಗಡೆ ಆಗಲಿದೆ. ಈ ಸಿನಿಮಾಗೆ ವೇದಗುರು ಅವರು ನಿರ್ದೇಶನ ಮಾಡಿದ್ದಾರೆ. ಇದು ಅವರ ಚೊಚ್ಚಲ ಸಿನಿಮಾ.



ಹಲವಾರು ನಿರ್ದೇಶಕರ ಜೊತೆ ಕೆಲಸ ಮಾಡಿದ ಅನುಭವ ವೇದಗುರು ಅವರಿಗೆ ಇದೆ. 'ಕೀರ್ತಿ ಚಾಹ್ನಾ ಸಿನಿಮಾ ಕಾರ್ಖಾನೆ' ಬ್ಯಾನರ್ ಮೂಲಕ ವೇದಗುರು ಅವರೇ 'ರಾಧೆಯಾ' ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ಈ ಸಿನಿಮಾದಲ್ಲಿ ಕೃಷ್ಣ ಅಜಯ್ ರಾವ್ ಮತ್ತು ಸೋನಲ್ ಮಂತೆರೋ ಅವರು ಜೋಡಿಯಾಗಿ ನಟಿಸಿದ್ದಾರೆ. ಮಹಾಭಾರತದ ಕರ್ಣನ ಇನ್ನೊಂದು ಹೆಸರು 'ರಾಧೇಯ'. ಚಿತ್ರದ ಶೀರ್ಷಿಕೆ ಕೌತುಕ ಮೂಡಿಸಿದೆ. ಇದೊಂದು ಲವ್ ಸ್ಟೋರಿ ಸಿನಿಮಾ ಆದರೂ ಬೇರೆಯದೇ ರೀತಿಯಲ್ಲಿ ಕಟ್ಟಿಕೊಡಲು ನಿರ್ದೇಶಕರು ಪ್ರಯತ್ನಿಸಿದ್ದಾರೆ. ಜೈಲಿನಲ್ಲಿರುವ ವ್ಯಕ್ತಿಯೊಬ್ಬನ ಪಾತ್ರದ ಸುತ್ತ ಈ ಚಿತ್ರದ ಕಥೆ ಸಾಗಲಿದೆ ಎಂದು 'ರಾಧೇಯ' ಚಿತ್ರತಂಡ ಹೇಳಿದೆ. ಕಥಾನಾಯಕ ರಾಧೇಯ ತನ್ನ ಪ್ರೀತಿಯನ್ನು ಹೇಗೆ ಉಳಿಸಿಕೊಳ್ಳುತ್ತಾನೆ ಅದಕ್ಕಾಗಿ ಆತ ಏನೆಲ್ಲಾ ಅಡ್ಡಿ, ಆತಂಕಗಳನ್ನು ಎದುರಿಸುತ್ತಾನೆ ಎಂಬುದನ್ನು ಈ ಸಿನಿಮಾ ಮೂಲಕ ನಿರ್ದೇಶಕ ವೇದಗುರು ಅವರು ತೋರಿಸಲಿದ್ದಾರೆ.



# ಗಿಲ್ಲಿ ನಟ ವಿರುದ್ಧ ದೂರು





ಬಿಗ್ ಬಾಸ್ ಕನ್ನಡ ಸೀಸನ್ 12ರಲ್ಲಿ ರಿಯಲ್ ಎಂಟರ್‌ಟೇನರ್ ಅಂದ್ರೆ ಅದು ಗಿಲ್ಲಿ ನಟ. ಸಖತ್ ಕಾಮಿಡಿ ಟೈಮಿಂಗ್ ಹೊಂದಿರುವ ಗಿಲ್ಲಿ ಪಂಚಿಂಗ್ ಡೈಲಾಗ್ಸ್‌ಗೆ ದೊಡ್ಡ ಫ್ಯಾನ್ ಬೇಸ್ ಇದೆ. ವ್ಯಂಗ್ಯವಾಗಿ ಕಾಲೆಳೆಯುವ ಗಿಲ್ಲಿ ನಟ ಮಾತುಗಳಿಗೆ ದೊಡ್ಡ ಅಭಿಮಾನಿ ಬಳಗವೇ ಇದೆ. ಯಾವುದೇ ತಯಾರಿ ಇಲ್ಲದೆ ಸ್ಪಾಟ್‌ನಲ್ಲೇ ಕಾಮಿಡಿ ಮಾಡುವ ಗಿಲ್ಲಿ ಪ್ರತಿಭೆಗೆ ಅನೇಕರು ಭೇಷ್ ಎಂದಿದ್ದಾರೆ. ಹೀಗಿರುವಾಗಲೇ, ಗಿಲ್ಲಿ ನಟ ವಿರುದ್ಧ ರಾಜ್ಯ ಮಹಿಳಾ ಆಯೋಗಕ್ಕೆ ದೂರು ಹೋಗಿದೆ. ಹೌದು. ಬಿಗ್ ಬಾಸ್‌ನ ಮಹಿಳಾ ಸ್ಪರ್ಧಿ ರಿಷಾ ಬಟ್ಟೆಯನ್ನ ಮುಟ್ಟಿ ವಾಶ್‌ರೂಮ್‌ನಲ್ಲಿ ಹಾಕಿದ್ದಕ್ಕೆ ಗಿಲ್ಲಿ ವಿರುದ್ಧ ಮಹಿಳಾ ಆಯೋಗಕ್ಕೆ ದೂರು ನೀಡಲಾಗಿದೆ.

**ಮಹಿಳೆಯರಿಗೆ ಅವಮಾನ ಮಾಡಿದ್ರಾ ಗಿಲ್ಲಿ?:** ಮಹಿಳಾ ಸ್ಪರ್ಧಿಯ ಬಟ್ಟೆ ಮುಟ್ಟಿ ವಾಶ್ ರೂಮಲ್ಲಿ ಹಾಕಿದ್ದಕ್ಕೆ ಕುಶಲ ಎಂಬ ಮಹಿಳೆ ಮಹಿಳಾ ಆಯೋಗಕ್ಕೆ ದೂರು ನೀಡಿದ್ದಾರೆ. ಮಹಿಳೆಯರ ವಿರುದ್ಧ ಅವಮಾನಕಾರಿಯಾಗಿ ಗಿಲ್ಲಿ ನಡೆದುಕೊಂಡಿದ್ದಾರೆ ಅಂತ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಸದ್ಯ ಮಹಿಳಾ ಆಯೋಗದಿಂದ ಈ ಪ್ರಕರಣ ಪೊಲೀಸ್ ನಗರ ಕಮಿಷನರ್‌ಗೆ ಹಾಗೂ ರಾಮನಗರ ಪೊಲೀಸರಿಗೆ ವರ್ಗಾವಣೆ ಮಾಡಲಾಗಿದೆ. ಪ್ರಕರಣದ ಕುರಿತು ಪರಿಶೀಲನೆ ನಡೆಸಿ, ಕ್ರಮ ಕೈಗೊಂಡ ಬಗ್ಗೆ ಶೀಘ್ರದಲ್ಲೇ ಆಯೋಗಕ್ಕೆ ವರದಿ ನೀಡುವಂತೆ ಮಹಿಳಾ ಆಯೋಗ ಪತ್ರ ಬರೆದಿದೆ.

**ಗಿಲ್ಲಿ ರಿಷಾ ಬಟ್ಟೆ ಮುಟ್ಟಿದ್ದೇಕೆ?:** ಗಿಲ್ಲಿ ನಟ ಬಿಸಿ ನೀರು ಬಕೆಟ್ ಕೇಳಿದಾಗ ರಿಷಾ ಕೊಡಲಿಲ್ಲ. ಬಿಸಿ ನೀರು ಬಕೆಟ್ ತುಂಬಿದ ಕೂಡಲೆ ರಿಷಾ ಬಾಗಿಲು ಹಾಕಿಕೊಂಡರು. ಬಕೆಟ್ ಕೊಡಲಿಲ್ಲ ಅಂದ್ರೆ ಏನು ಮಾಡ್ತೀನಿ ನೋಡು ಗಿಲ್ಲಿ ನಟ ಎಚ್ಚರಿಕೆ ಕೊಟ್ಟಿದ್ದರು. ತಮ್ಮ ಸ್ನಾನ ಮುಗಿಯುವವರೆಗೂ ರಿಷಾ ಬಕೆಟ್ ಕೊಡಲೇ ಇಲ್ಲ. ಹೀಗಾಗಿ, ರಿಷಾ ಬಟ್ಟೆಗಳನ್ನೆಲ್ಲಾ ಬಾತ್‌ರೂಮ್ ಏರಿಯಾಗೆ ತಂದು ಗಿಲ್ಲಿ ನಟ ಹಾಕಿದ್ದರು. ಅದನ್ನ ಕಂಡು ಕೋಪಗೊಂಡ ರಿಷಾ.. ಗಿಲ್ಲಿ ನಟನಿಗೆ ಹೊಡೆದಿದ್ದರು. ಸಾಲದಕ್ಕೆ ಎರಡು ಬಾರಿ ತಳ್ಳಿದ್ದರು. ಆ ಮೂಲಕ 'ಬಿಗ್ ಬಾಸ್' ಮನೆಯ ಮುಖ್ಯ ನಿಯಮವನ್ನ ರಿಷಾ ಉಲ್ಲಂಘಿಸಿದ್ದರು. ಈಗ ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಗಿಲ್ಲಿ ನಟ ವಿರುದ್ಧ ದೂರು ಕೊಡಲಾಗಿದೆ!

# ಜೈ ಹೌಸ್ ಫುಲ್ ಪ್ರದರ್ಶನ




ಬಿಗ್ ಬಾಸ್ ಖ್ಯಾತಿಯ ರೂಪೇಶ್ ಶೆಟ್ಟಿ ನಿರ್ದೇಶಿಸಿ, ನಟಿಸಿರುವ 'ಜೈ' ಸಿನಿಮಾಗೆ ಸಖತ್ ರೆಸ್ಪಾನ್ಸ್ ಸಿಕ್ಕಿದೆ. ನೂರಕ್ಕೂ ಹೆಚ್ಚು ಶೋಗಳು ಇವತ್ತಿಗೂ ಹೌಸ್ ಫುಲ್ ಪ್ರದರ್ಶನ ಕಾಣುತ್ತಿವೆ. ರಾಜ್ಯಾದ್ಯಂತ ಜೈ ಸಿನಿಮಾಗೆ ಪ್ರೇಕ್ಷಕ ಜೈಕಾರ ಹಾಕುತ್ತಿದ್ದಾನೆ. ಜೈ ಸಿನಿಮಾ ಟೀಮ್ ಎಫರ್ಟ್ ಅನ್ನು ಮೆಚ್ಚಿಕೊಂಡಿದ್ದಾನೆ. ಈಗಾಗಲೇ ನಟನೆಯ ಮೂಲಕ ಪ್ರೇಕ್ಷಕರ ಮನ ಮುಟ್ಟಿರುವ ರೂಪೇಶ್ ಶೆಟ್ಟಿ, ಈ ಸಿನಿಮಾದ ಮೂಲಕ ನಿರ್ದೇಶಕರಾಗಿಯೂ ಗೆದ್ದಿದ್ದಾರೆ. ತುಳುನಾಡಿನ ರಾಕ್ ಸ್ಟಾರ್ ಎಂದೇ ಖ್ಯಾತಿ ಪಡೆದಿರುವ ರೂಪೇಶ್ ಶೆಟ್ಟಿ ಜೊತೆಗೆ ಬಾಲಿವುಡ್ ನಟ ಸುನೀಲ್ ಶೆಟ್ಟಿ ಕೂಡ ಜೈ ಸಿನಿಮಾದಲ್ಲಿ ನಟಿಸಿದ್ದಾರೆ. ಇತ್ತೀಚೆಗಷ್ಟೇ ಸಿನಿಮಾ ತೆರೆಗೆ ಬಂದಿದೆ. ರಿಲೀಸ್‌ಗೂ ಮುನ್ನವೇ ಸಿನಿಮಾವನ್ನು ಒಂದಷ್ಟು ಜನರಿಗೆ ತೋರಿಸುವ ಪ್ರಯತ್ನವಾಗಿತ್ತು. ಅಲ್ಲಿಯೇ ರೂಪೇಶ್ ಶೆಟ್ಟಿ ಅರ್ಧ ಗೆದ್ದಿದ್ರು. ದುಬೈ, ಮಂಗಳೂರು, ಉಡುಪಿಲೂ ರಿಲೀಸ್‌ಗೂ ಮುನ್ನವೇ ಸಿನಿಮಾದ ಪ್ರೀಮಿಯರ್ ಮಾಡಲಾಗಿತ್ತು. ಜೈ ಸಿನಿಮಾ ತುಳು ಮತ್ತು ಕನ್ನಡ ಎರಡು ಭಾಷೆಯಲ್ಲೂ ರಿಲೀಸ್ ಆಗಿದೆ. ರೂಪೇಶ್ ಶೆಟ್ಟಿ ಸಿನಿಮಾಗೆ ಕನ್ನಡ ಇಂಡಸ್ಟ್ರಿಯ ಬಿಗ್ ಸ್ಟಾರ್‌ಗಳೇ ಜೊತೆಯಾಗಿ ನಿಂತಿದ್ದಾರೆ. ಕಿಚ್ಚ ಸುದೀಪ್, ಶ್ರೀಮುರುಳಿ ಸೇರಿದಂತೆ ಹಲವರ ಬೆಂಬಲ ಸಿಕ್ಕಿದೆ. ಅದರಲ್ಲೂ ಕಿಚ್ಚ ಸುದೀಪ್ ಅವರು ರೂಪೇಶ್ ಶೆಟ್ಟಿ ಅವರಿಗೆ ಹಣ ನೀಡಿ ಅವರಿಂದಾನೇ ಟಿಕೆಟ್ ಖರೀದಿ ಮಾಡಿದ್ದಾರೆ.

# ಮೂರನೇ ಗಂಡನನ್ನೂ ಬಿಟ್ಟ ಖ್ಯಾತ ನಟಿ


**ಮದುವೆಯಾಗಿ ಒಂದೇ ವರ್ಷ**

ಬಹುಭಾಷಾ ಖ್ಯಾತ ನಟಿಯೋರ್ವರು ಇದೀಗ ಮೂರನೇ ಮದುವೆಯಿಂದಲೂ ವಿಚ್ಛೇದನ ಪಡೆದು ಸುದ್ದಿಯಾಗಿದ್ದಾರೆ. ಮೋಹನ್‌ಲಾಲ್ ಜೊತೆ 'ತನ್ಮಾತ್ರ' ಚಿತ್ರದಲ್ಲಿ ನಟಿಸಿದ್ದ ಖ್ಯಾತ ಮಲಯಾಳಂ ನಟಿ ಮೀರಾ ವಸುದೇವನ್ ಇದೀಗ ಮೂರನೇ ಪತಿಯಿಂದ ದೂರಾಗಿರುವ ಅಧಿಕೃತ ವಿಚಾರವನ್ನು ಸೋಶಿಯಲ್ ಮೀಡಿಯಾದಲ್ಲಿ ಘೋಷಿಸಿದ್ದಾರೆ.2024ರಲ್ಲಿ ಇವರು ಸಿನಿಮಾಟೋಗ್ರಾಫರ್ ವಿಪಿನ್ ಪುತಿಯಂಕಂ ಜೊತೆ ವಿವಾಹವಾಗಿದ್ದರು. 2025ರಲ್ಲೇ ವಿಚ್ಛೇದನ ಪಡೆದು ಈಗ ಸಿಂಗಲ್ ಆಗಿರುವುದಾಗಿ ಪೋಸ್ಟ್ ಹಾಕಿದ್ದಾರೆ.

ಕನ್ನಡ ಹೊರತಾಗಿ ಮಲಯಾಳಂ, ಹಿಂದಿ, ತಮಿಳು, ತೆಲುಗು ಚಿತ್ರದಲ್ಲಿ ನಟಿಸಿದ್ದ ಮೀರಾ ವಸುದೇವನ್ 2005ರಲ್ಲಿ ವಿಶಾಲ್ ಅಗರವಾಲ್ ಎಂಬುವರನ್ನ ಮದುವೆಯಾಗಿದ್ದರು. 2010ರಲ್ಲಿ ಮದುವೆ ಮುರಿದುಬಿತ್ತು. ಬಳಿಕ 2021ರಲ್ಲಿ ಮಲಯಾಳಂ ನಟ ಜಾನ್ ಕೊಕ್ಕೇನ್ ಜೊತೆ ಮೀರಾ ಎರಡನೇ ವಿವಾಹ ಜರುಗಿತ್ತು. ಈ ದಾಂಪತ್ಯದಲ್ಲಿ ಓರ್ವ ಪುತ್ರನಿಗೂ ಜನ್ಮ ನೀಡಿದ್ದ ಮೀರಾ ವಸುದೇವನ್ 2024ರಲ್ಲಿ ವಿಪಿನ್ ಪುತಿಯಂಕಮ್ ಜೊತೆ ಮದುವೆಯಾಗಿದ್ದರು. ಇದೀಗ ಮೂರನೇ ಮದುವೆಯ ಬಂಧನದಿಂದಲೂ ಹೊರ ಬಂದಿರುವ ವಿಚಾರವನ್ನು ಹೇಳಿಕೊಂಡಿದ್ದಾರೆ. ಮೀರಾ ವಸುದೇವನ್ ಆಗಿರುವ ನಾನು ಅಧಿಕೃತವಾಗಿ ಡಿಕ್ಲೇರ್ ಮಾಡುವುದು ಏನೆಂದರೆ, 2025ರಿಂದ ನಾನು ಸಿಂಗಲ್ ಆಗಿದ್ದೇನೆ. ಈಗ ನಾನು ನನ್ನ ಜೀವನದ ಅದ್ಭುತ ಶಾಂತಚಿತ್ತ ಜೀವನವನ್ನ ನಡೆಸುತ್ತಿದ್ದೇನೆ ಎಂದು ಬರೆದುಕೊಂಡಿದ್ದಾರೆ.

# ಜೂ ಎನ್‌ಟಿಆರ್ ಪ್ರಶಾಂತ್ ಬಗ್ಗೆ ರವಿ ಹೇಳಿದ್ದೇನು

**ಸಿನಿಮಾನಲ್ಲಿ ಸಂಗೀತ ಅದ್ಧೂರಿ**



ಜೂ ಎನ್‌ಟಿಆರ್ ಸಿನಿಮಾವನ್ನು ಪ್ರಶಾಂತ್ ನೀಲ್ ನಿರ್ದೇಶನ ಮಾಡುತ್ತಿದ್ದಾರೆ. ಈ ಸಿನಿಮಾದ ಹೊಸ ಅಪ್‌ಡೇಟ್ ಇತ್ತೀಚೆಗೆ ಹೊರಬಿದ್ದಿರಲಿಲ್ಲ. ಈ ಸಿನಿಮಾಕ್ಕೆ ರವಿ ಬಸ್ರೂರು ಅವರು ಸಂಗೀತ ನೀಡುತ್ತಿದ್ದಾರೆ. ಜೂ ಎನ್‌ಟಿಆರ್ ಮತ್ತು ಪ್ರಶಾಂತ್ ನೀಲ್ ಅವರ ಸಿನಿಮಾದ ಬಗ್ಗೆ ಇದೀಗ ರವಿ ಬಸ್ರೂರು ಅವರು ಮಾತನಾಡಿದ್ದಾರೆ. ಈ ಸಿನಿಮಾ ಅದ್ಧೂರಿಯಾಗಿರುವ ಜೊತೆಗೆ ಭಾವನಾತ್ಮಕತೆಯನ್ನು ಒಳಗೊಂಡಿರಲಿದೆಯಂತೆ. ರವಿ ಬಸ್ರೂರು ಕನ್ನಡ ಚಿತ್ರರಂಗದ ಜನಪ್ರಿಯ ಸಂಗೀತ ನಿರ್ದೇಶಕ. 'ಕೆಜಿಎಫ್' ಸಿನಿಮಾಗಳ ಬಳಿಕ ಈಗ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಬ್ಯುಸಿಯಾಗಿದ್ದಾರೆ. ಸಲ್ಮಾನ್ ಖಾನ್ ಅಂಥ ಸ್ಟಾರ್ ನಟರುಗಳಿಗೂ ಸಹ ರವಿ ಬಸ್ರೂರು ಸಂಗೀತವೇ ಬೇಕಾಗಿದೆ.

ಇದೀಗ ರವಿ ಬಸ್ರೂರು ಕನ್ನಡ ಸೇರಿದಂತೆ ಹಲವು ಭಾಷೆಯ ಸಿನಿಮಾಗಳಿಗಾಗಿ ಕೆಲಸ ಮಾಡುತ್ತಿದ್ದಾರೆ. ಇವುಗಳ ಜೊತೆಗೆ ಪ್ರಶಾಂತ್ ನೀಲ್ ನಿರ್ದೇಶಿಸಿ ಜೂ ಎನ್‌ಟಿಆರ್ ನಟಿಸುತ್ತಿರುವ ಹೊಸ ಸಿನಿಮಾಕ್ಕೂ ರವಿ ಬಸ್ರೂರು ಅವರದ್ದೇ ಸಂಗೀತ.

ಈ ಸಿನಿಮಾದ ಬಗ್ಗೆ ಕೆಲ ಗುಟ್ಟಿನ ವಿಷಯಗಳನ್ನು ರವಿ ಬಸ್ರೂರು ಹಂಚಿಕೊಂಡಿದ್ದಾರೆ. ಜೂ ಎನ್‌ಟಿಆರ್-ಪ್ರಶಾಂತ್ ನೀಲ್ ಸಿನಿಮಾಕ್ಕೆ ಯಾವ ರೀತಿಯ ಸಂಗೀತ ಇರಲಿದೆ ಎಂಬುದನ್ನು ರವಿ ಬಸ್ರೂರು ಹೇಳಿದ್ದಾರೆ. 'ಜೂ ಎನ್‌ಟಿಆರ್-ನೀಲ್ ಸಿನಿಮಾ ಭಾರಿ ಬೃಹತ್ ಸಿನಿಮಾ ಆಗಿರಲಿದೆ. ಸಂಗೀತ ಮತ್ತು ದೃಶ್ಯ ಎರಡೂ ವಿಭಾಗಗಳಲ್ಲಿಯೂ ಸಹ ಈ ಸಿನಿಮಾ ಅದ್ಧೂರಿಯಾಗಿಯೇ ಇರಲಿದೆ. ಈ ಸಿನಿಮಾ ಅದ್ಧೂರಿ ಆಗಿರುವ ಜೊತೆಗೆ ನೆಲದ ಕತೆಯನ್ನೂ ಸಹ ಹೊಂದಿರಲಿದೆ. ಇದೊಂದು ಹಲವು ಶೇಡ್‌ಗಳು ಇರುವ ಕತೆಯಾಗಿದೆ' ಎಂದಿದ್ದಾರೆ ರವಿ ಬಸ್ರೂರು. 'ಈ ಸಿನಿಮಾಕ್ಕಾಗಿ ಭಿನ್ನ ರೀತಿಯ ಸಂಗೀತವನ್ನು ನೀಡತ್ತಿದ್ದೇನೆ. ಈ ಹಿಂದೆ 'ಕೆಜಿಎಫ್', 'ಸಲಾರ್' ಸಿನಿಮಾಗಳ ರೀತಿಯಲ್ಲಿ ಅಲ್ಲದೆ, ಸಂಪೂರ್ಣ ಭಿನ್ನವಾಗಿರುವ ಸಂಗೀತವನ್ನು ಬಳಸಲಿದ್ದೇನೆ. ಹಿಂದೆ ನಾನು ಎಂದೂ ಬಳಸದೇ ಇದ್ದ ವಾದ್ಯಗಳನ್ನು ಸಹ ಈ ಸಿನಿಮಾಕ್ಕಾಗಿ ಬಳಸುತ್ತಿದ್ದೇನೆ. ಈ ಸಿನಿಮಾನಲ್ಲಿ ಸಂಗೀತ ಅದ್ಧೂರಿ ಆಗಿರುವ ಜೊತೆಗೆ ಭಾವನಾತ್ಮಕವಾಗಿಯೂ ಪ್ರೇಕ್ಷಕರನ್ನು ಸೆಳೆಯಲಿದೆ' ಎಂದಿದ್ದಾರೆ.

# ಭಾರತ ತಂಡವನ್ನು ಹಾಗೆ ಮಾಡಿಟ್ಟಿದ್ದಾರೆ!

**ಒಬ್ಬನಲ್ಲೂ ಧೈರ್ಯವೇ ಇಲ್ಲ**



ಭಾರತ ಮತ್ತು ಸೌತ್ ಆಫ್ರಿಕಾ ನಡುವಣ 2 ಪಂದ್ಯಗಳ ಟೆಸ್ಟ್ ಸರಣಿಯ ಮೊದಲ ಮ್ಯಾಚ್ ಮುಗಿದಿದೆ. ಕೊಲ್ಕತ್ತಾದಲ್ಲಿ ನಡೆದ ಈ ಪಂದ್ಯದಲ್ಲಿ ಸೌತ್ ಆಫ್ರಿಕಾ ತಂಡ 30 ರನ್‌ಗಳ ಜಯ ಸಾಧಿಸಿದೆ. ಇನ್ನು ದ್ವಿತೀಯ ಪಂದ್ಯವು ನವೆಂಬರ್ 22 ರಿಂದ ಶುರುವಾಗಲಿದ್ದು, ಈ ಪಂದ್ಯಕ್ಕೆ ಗುವಾಹಟಿಯ ಬರ್ಸಪಾರ ಸ್ಟೇಡಿಯಂ ಆತಿಥ್ಯವಹಿಸಲಿದೆ. ಸೌತ್ ಆಫ್ರಿಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡ ಹೀನಾಯ ಸೋಲನುಭವಿಸಿತ್ತು.

ಅದರಲ್ಲೂ 124 ರನ್‌ಗಳ ಗುರಿ ಬೆನ್ನತ್ತಲಾಗದೇ ಸೋತು ಟೀಮ್ ಇಂಡಿಯಾ ಭಾರೀ ಮುಖಭಂಗ ಅನುಭವಿಸಿದೆ. ಸೋಲಿನ ಬೆನ್ನಲ್ಲೇ ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರ ಕಾರ್ಯವೈಖರಿ ಬಗ್ಗೆ ಪ್ರಶ್ನೆಗಳೆದ್ದಿವೆ. ಇದನ್ನೇ ಈಗ ಟೀಮ್ ಇಂಡಿಯಾದ ಮಾಜಿ ಆಟಗಾರ ಮೊಹಮ್ಮದ್ ಕೈಫ್ ಕೂಡ ಪ್ರಶ್ನಿಸಿದ್ದಾರೆ.

ಸೌತ್ ಆಫ್ರಿಕಾ ವಿರುದ್ಧದ ಸೋಲನನ್ನು ಪರಾಮರ್ಶಿಸಿದ ಮೊಹಮ್ಮದ್ ಕೈಫ್, ಭಾರತ ತಂಡದಲ್ಲಿ ಭಯ ಮತ್ತು ಅಭದ್ರತೆಯ ವಾತಾವರಣ ನಿರ್ಮಾಣವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಇದೇ ಕಾರಣದಿಂದಾಗಿ ಟೀಮ್ ಇಂಡಿಯಾ ಆಟಗಾರರಿಂದ ನಿರೀಕ್ಷಿತ ಪ್ರದರ್ಶನ ಮೂಡಿಬರುತ್ತಿಲ್ಲ ಎಂದಿದ್ದಾರೆ.

ಸರ್ಫರಾಝ್ ಖಾನ್‌ನಂತಹ ಆಟಗಾರ ಶತಕ ಬಾರಿಸಿದರೂ ಆತನನ್ನು ಭಾರತ ತಂಡದಿಂದ ಕೈ ಬಿಡಲಾಯಿತು. 87 ರನ್ ಗಳಿಸಿದ್ದರೂ ಸಾಯಿ ಸುದರ್ಶನ್ ಅವರಿಗೆ ಸೌತ್ ಆಫ್ರಿಕಾ ವಿರುದ್ಧದ ಟೆಸ್ಟ್‌ನಲ್ಲಿ ಸ್ಥಾನ ನೀಡಲಾಗಿಲ್ಲ. ಇವೆಲ್ಲವೂ ಇತರೆ ಆಟಗಾರರ ಮೇಲೂ ಪ್ರಭಾವ ಬೀರುತ್ತದೆ. ಇಂತಹ ನಿರ್ಧಾರಗಳು ಆಟಗಾರರ ಆತ್ಮವಿಶ್ವಾಸವನ್ನು ಕುಗ್ಗಿಸುತ್ತವೆ ಎಂದು ಕೈಫ್ ಹೇಳಿದ್ದಾರೆ.

ಚೆನ್ನಾಗಿ ಆಡಿದ ಮೇಲೂ ತಂಡದಿಂದ ಕೈ ಬಿಡುವುದಾದರೆ, ಉತ್ತಮವಾಗಿ ಆಡಿದ ಆಟಗಾರರನಿಗೂ ತನ್ನ ಸ್ಥಾನ ಖಾಯಂ ಎಂಬ ಭಾವನೆ ಬರುವುದಿಲ್ಲ. ಇಲ್ಲ, ನನ್ನ ಬೆಂಬಲಕ್ಕೆ ನಿಲ್ಲುತ್ತಾರೆ ಎಂಬ ವಿಶ್ವಾಸವೇ ಇರುವುದಿಲ್ಲ.

ಟೀಮ್ ಇಂಡಿಯಾ ಆಟಗಾರರಲ್ಲಿ ಇಂತಹ ಆತ್ಮ ವಿಶ್ವಾಸದ ಕೊರತೆಯಿದೆ. ಇದೇ ಕಾರಣದಿಂದಾಗಿ ಭಾರತೀಯ ಆಟಗಾರರು ಭಯದಿಂದ ಆಡುತ್ತಿದ್ದಾರೆ ಎಂದು ಮೊಹಮ್ಮದ್ ಕೈಫ್ ಅಭಿಪ್ರಾಯಪಟ್ಟಿದ್ದಾರೆ.

100 ರನ್ ಗಳಿಸಿದ ಬಳಿಕ ಕೂಡ ಸರ್ಫರಾಝ್ ಖಾನ್‌ಗೆ ಭಾರತದಲ್ಲಿ ಸ್ಥಾನ ಸಿಕ್ಕಿಲ್ಲ. ಶತಕ ಬಾರಿಸಿದ ನಂತರವೂ ಅವರು ಮತ್ತೆ ತಂಡಕ್ಕೆ ಮರಳಲು ಸಾಧ್ಯವಾಗುವುದಿಲ್ಲ. ಸಾಯಿ ಸುದರ್ಶನ್ ಕಳೆದ ಮ್ಯಾಚ್‌ನಲ್ಲಿ 87 ರನ್ ಬಾರಿಸಿದ್ದರು. ಇದಾಗ್ಯೂ ಅವರನ್ನು ಕೊಲ್ಕತ್ತಾ ಟೆಸ್ಟ್‌ನಿಂದ ಕೈ ಬಿಡಲಾಯಿತು. ಇಂತಹ ನಡೆಗಳಿಂದ ಆಟಗಾರರಲ್ಲಿ ಅಭದ್ರತೆ ಕಾಡುತ್ತದೆ.

ಇದೇ ಕಾರಣದಿಂದ ಆಗಿ ಕೊಲ್ಕತ್ತಾದ ಟರ್ನಿಂಗ್ ಟ್ರ್ಯಾಕ್‌ನಲ್ಲಿ ಟೀಮ್ ಇಂಡಿಯಾ ಬ್ಯಾಟರ್‌ಗಳು ವಿಫಲರಾಗಿದ್ದಾರೆ ಎಂಬುದು ನನ್ನ ಅನಿಸಿಕೆ. ವಾಷಿಂಗ್ಟನ್ ಸುಂದರ್ ಅವರು ಚೆನ್ನೈ ಮೂಲದ ಆಟಗಾರ. ಅಲ್ಲಿನ ಟರ್ನಿಂಗ್ ಪಿಚ್‌ನಲ್ಲಿ ಆಡಿದ ಅನುಭವ ಹೊಂದಿದ್ದಾರೆ. ಇದೇ ಕಾರಣದಿಂದ ಅವರು ಸೌತ್ ಆಫ್ರಿಕಾ ವಿರುದ್ಧ ತುಸು ಯಶಸ್ವಿಯಾಗಿದ್ದರು. ಆದರೆ ನೀವು ಅದೇ ಚೆನ್ನೈ ಪಿಚ್‌ನಲ್ಲಿ ಆಡಿದ ಬೆಳೆದ ಸಾಯಿ ಸುದರ್ಶನ್ ಅವರನ್ನು ಕೈ ಬಿಟ್ಟಿದ್ದಾರೆ. ಅವರನ್ನು ಮೂರನೇ ಕ್ರಮಾಂಕದಲ್ಲಿ ಕಣಕ್ಕಿಳಿಸಿದ್ದರೆ ಟೀಮ್ ಇಂಡಿಯಾಗೆ ಗೆಲ್ಲುವ ಚಾನ್ಸ್ ಇರುತ್ತಿತ್ತು. ಆದರೆ ಪ್ರಸ್ತುತ ತಂಡದಲ್ಲಿ ಆಗಾಗ್ಗೆ ಬದಲಾವಣೆ ಮಾಡಲಾಗುತ್ತಿದೆ. ಆಟಗಾರರ ನೈಸರ್ಗಿಕ ಆಟಗಳನ್ನು ದುರ್ಬಲಗೊಳಿಸುವ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಟೀಮ್ ಇಂಡಿಯಾ ಆಟಗಾರರ ಧೈರ್ಯವೇ ಕುಗ್ಗಿ ಹೋಗುತ್ತಿದೆ ಎಂದು ಮೊಹಮ್ಮದ್ ಕೈಫ್ ಟೀಕಿಸಿದ್ದಾರೆ. ಒಟ್ಟಿನಲ್ಲಿ ಕಳೆದ 15 ವರ್ಷಗಳಿಂದ ಭಾರತದಲ್ಲಿ ಒಂದೇ ಒಂದು ಟೆಸ್ಟ್ ಪಂದ್ಯ ಗೆಲ್ಲಲಾಗದೆ ಒದ್ದಾಡುತ್ತಿದ್ದ ಸೌತ್ ಆಫ್ರಿಕಾ ತಂಡವು ಟೀಮ್ ಇಂಡಿಯಾವನ್ನು 30 ರನ್‌ಗಳಿಂದ ಸೋಲಿಸಿ ಗೆಲುವು ದಾಖಲಿಸಿದೆ.

# 10 ತಂಡಗಳ ಕೋಚ್ ಫೈನಲ್



ಇಂಡಿಯನ್ ಪ್ರೀಮಿಯರ್ ಲೀಗ್‌ನ 19ನೇ ಆವೃತ್ತಿಗಾಗಿ ಡಿಸೆಂಬರ್ 16 ರಂದು ಮಿನಿ ಹರಾಜು ನಡೆಯಲಿದೆ. ಅಬುಧಾಬಿಯಲ್ಲಿ ನಡೆಯಲಿರುವ ಈ ಹರಾಜಿಗೂ ಮುನ್ನ 10 ಫ್ರಾಂಚೈಸಿಗಳು ತಮ್ಮ ತಂಡಗಳ ಮುಖ್ಯ ತರಬೇತುದಾರರನ್ನು ನೇಮಕ ಮಾಡಿಕೊಂಡಿದೆ. ಅದರಂತೆ ಮುಂಬರುವ ಐಪಿಎಲ್‌ನಲ್ಲಿ ಕೋಚ್ ಹುದ್ದೆಯಲ್ಲಿ ಕಾಣಿಸಿಕೊಳ್ಳಲಿರುವ ಮಾಜಿ ಆಟಗಾರರ ಪಟ್ಟಿ ಈ ಕೆಳಗಿನಂತಿದೆ... ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-19ರ ಮಿನಿ ಹರಾಜಿಗೂ ಮುನ್ನ 10 ಫ್ರಾಂಚೈಸಿಗಳು ತಮ್ಮ ತಂಡಗಳ ಕೋಚ್‌ಗಳನ್ನು ಫೈನಲ್ ಮಾಡಿಕೊಂಡಿದೆ. ವಿಶೇಷ ಎಂದರೆ ಈ ಹತ್ತು ಕೋಚ್‌ಗಳಲ್ಲಿ ಕೇವಲ ಮೂವರು ಭಾರತೀಯರು ಮಾತ್ರ ಪ್ರಧಾನ ಹುದ್ದೆ ಅಲಂಕರಿಸಿದ್ದಾರೆ. ಹಾಗಿದ್ರೆ ಈ ಬಾರಿಯ ಐಪಿಎಲ್‌ನಲ್ಲಿ ಕೋಚ್‌ಗಳಾಗಿ ಕಾಣಿಸಿಕೊಳ್ಳುವವರು ಯಾರು ಎಂಬುದನ್ನು ನೋಡೋಣ...

**ಮುಂಬೈ ಇಂಡಿಯನ್ಸ್:** ಶ್ರೀಲಂಕಾದ ಮಾಜಿ ಆಟಗಾರ ಮಹೇಂದ್ರ ಜಯವರ್ಧನೆ ಕಳೆದ ಸೀಸನ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡದ ಮುಖ್ಯ ಕೋಚ್ ಆಗಿ ನೇಮಕವಾಗಿದ್ದರು. ಈ ಬಾರಿ ಕೂಡ ಅವರನ್ನೇ ಹೆಡ್ ಕೋಚ್ ಆಗಿ ಮುಂದುವರೆಸಲು ಮುಂಬೈ ಇಂಡಿಯನ್ಸ್ ನಿರ್ಧರಿಸಿದೆ.

**ಚೆನ್ನೈ ಸೂಪರ್ ಕಿಂಗ್ಸ್:** ಸಿಎಸ್‌ಕೆ ತಂಡದ ತರಬೇತಿಯ ಉಸ್ತುವಾರಿ ಈ ಬಾರಿ ಕೂಡ ನ್ಯೂಝಿಲೆಂಡ್ ತಂಡದ ಮಾಜಿ ಆಟಗಾರ ಸ್ಟೀಫನ್ ಫ್ಲೇಮಿಂಗ್ ಕೈಯಲ್ಲಿದೆ. ಕಳೆದ ಕೆಲ ವರ್ಷಗಳಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಯಶಸ್ವಿ ಪಥದತ್ತ ಮುನ್ನಡೆಸಿರುವ ಫ್ಲೆಮಿಂಗ್ ಸಿಎಸ್‌ಕೆ ತಂಡದ ಬೆನ್ನೆಲುಬು ಎಂದರೆ ತಪ್ಪಾಗಲಾರದು.

**ಸನ್‌ರೈಸರ್ಸ್ ಹೈದರಾಬಾದ್:** ಎಸ್‌ಆರ್‌ಹೆಚ್ ತಂಡದ ಕೋಚ್ ಆಗಿ ನ್ಯೂಝಿಲೆಂಡ್ ತಂಡದ ಮಾಜಿ ನಾಯಕ ಡೇನಿಯಲ್ ವೆಟ್ಟೋರಿ ಆಯ್ಕೆಯಾಗಿದ್ದಾರೆ. ಈ ಹಿಂದೆ ಆರ್‌ಸಿಬಿ ತಂಡವನ್ನು ಮುನ್ನಡೆಸಿದ್ದ ವೆಟ್ಟೋರಿ ಇದೀಗ ಕೋಚ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಗುಜರಾತ್ ಟೈಟಾನ್ಸ್:** ಗುಜರಾತ್ ಟೈಟಾನ್ಸ್ ತಂಡ ತಮ್ಮ ಕೋಚ್ ಅನ್ನು ಬದಲಿಸಿಲ್ಲ.



# ಒಂದೇ ಒಂದು ರನ್ ನೀಡದೇ 5 ವಿಕೆಟ್ ಕಬಳಿಸಿದ ಅಮಿತ್ ಶುಕ್ಲಾ!



**8 ವಿಕೆಟ್ ಕಬಳಿಸಿದ ಅಮಿತ್ ಶುಕ್ಲಾ**

ರಣಜಿ ಟೂರ್ನಿಯಲ್ಲಿ 22 ವರ್ಷದ ಯುವ ಸ್ಪಿನ್ನರ್ ಅಮಿತ್ ಶುಕ್ಲಾ ಹೊಸ ಇತಿಹಾಸವನ್ನು ರಚಿಸಿದ್ದಾರೆ. ಅದು ಸಹ 4 ಓವರ್‌ಗಳಲ್ಲೇ 5 ವಿಕೆಟ್ ಕಬಳಿಸುವ ಮೂಲಕ. ಆದರೆ ಈ ನಾಲ್ಕು ಓವರ್‌ಗಳು ಕೂಡ ಮೇಡನ್ ಆಗಿತ್ತು ಎಂಬುದು ವಿಶೇಷ. ಅಂದರೆ ಯಾವುದೇ ರನ್ ನೀಡದೇ ಅಮಿತ್ ಶುಕ್ಲಾ 5 ವಿಕೆಟ್‌ಗಳನ್ನು ಕಬಳಿಸಿದ್ದಾರೆ.

ಪ್ರಸ್ತುತ ನಡೆಯುತ್ತಿರುವ ರಣಜಿ ಟೂರ್ನಿಯಲ್ಲಿ ಅಮಿತ್ ಶುಕ್ಲಾ ಹೊಸ ಇತಿಹಾಸ ರಚಿಸಿದ್ದಾರೆ. ಅದು ಸಹ ಒಂದೇ ಒಂದು ರನ್ ನೀಡದೇ 5 ವಿಕೆಟ್ ಕಬಳಿಸುವ ಮೂಲಕ. ರೋಹ್ಟಕ್‌ನಲ್ಲಿ ನಡೆಯುತ್ತಿರುವ ಎಲೈಟ್ ಗ್ರೂಪ್-ಸಿ ಪಂದ್ಯದಲ್ಲಿ ಸರ್ವೀಸಸ್ ಮತ್ತು ಹರ್ಯಾಣ ತಂಡಗಳು ಮುಖಾಮುಖಿಯಾಗಿವೆ. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಸರ್ವೀಸಸ್ ತಂಡವು ಕೇವಲ 211 ರನ್‌ಗಳಿಸಿ ಆಲೌಟ್ ಆಗಿತ್ತು.

ಇದಕ್ಕುತ್ತರವಾಗಿ ಪ್ರಥಮ ಇನಿಂಗ್ಸ್ ಶುರು ಮಾಡಿದ ಹರ್ಯಾಣ ತಂಡಕ್ಕೆ ಯುವ ಸ್ಪಿನ್ನರ್ ಅಮಿತ್ ಶುಕ್ಲಾ ಆಘಾತದ ಮೇಲೆ ಆಘಾತ ನೀಡಿದರು. 2ನೇ ಓವರ್‌ನಲ್ಲಿ ದಾಳಿಗಿಳಿದ ಅಮಿತ್ ತನ್ನ ದ್ವಿತೀಯ ಎಸೆತದಲ್ಲೇ ಮೊದಲ ವಿಕೆಟ್ ಪಡೆದರು. ಈ ಓವರ್‌ನಲ್ಲಿ ಅವರು ಯಾವುದೇ ರನ್ ನೀಡಿರಲಿಲ್ಲ. ಇದಾದ ಬಳಿಕ ನಾಲ್ಕನೇ ಓವರ್‌ನ ಮೊದಲ ಎಸೆತದಲ್ಲೇ 2ನೇ ವಿಕೆಟ್ ಕಬಳಿಸಿದರು. ಈ ಓವರ್‌ನಲ್ಲೂ ಯಾವುದೇ ರನ್ ಬಿಟ್ಟು ಕೊಟ್ಟಿರಲಿಲ್ಲ. ಆನಂತರ 6ನೇ ಓವರ್‌ನ 5ನೇ ಎಸೆತದಲ್ಲಿ ಮತ್ತೊಂದು ವಿಕೆಟ್ ಪಡೆದರು. ಈ ಓವರ್ ಕೂಡ ಮೇಡನ್ ಆಗಿತ್ತು, ಇನ್ನು 8ನೇ ಓವರ್‌ನ ಮೊದಲ ಎಸೆತದಲ್ಲಿ ಧೀರು ಸಿಂಗ್ ವಿಕೆಟ್ ಪಡೆದ ಅಮಿತ್ ಶುಕ್ಲಾ, ಮೂರನೇ ಎಸೆತದಲ್ಲಿ ನಿಖಿಲ್ ಕಶ್ಯಪ್ ವಿಕೆಟ್ ಕಬಳಿಸಿದರು. ಈ ಮೂಲಕ ಒಂದೇ ಒಂದು ರನ್ ನೀಡದೇ ಐದು ವಿಕೆಟ್‌ಗಳ ಸಾಧನೆ ಮಾಡಿದರು. ಯಾವುದೇ ರನ್ ನೀಡದೇ ಮೊದಲ 5 ವಿಕೆಟ್ ಕಬಳಿಸಿದ ಅಮಿತ್ ಶುಕ್ಲಾ ಆ ಬಳಿಕ ಕೂಡ ತನ್ನ ಸ್ಪಿನ್ ಮೋಡಿ ತೋರಿಸಿದರು. ಈ ಮೂಲಕ 20 ಓವರ್‌ಗಳನ್ನು ಎಸೆದ ಅವರು 8 ಮೇಡನ್ ಜೊತೆ ಕೇವಲ 27 ರನ್ ನೀಡಿ 8 ವಿಕೆಟ್ ಕಬಳಿಸಿದರು.

# ಟೀಮ್ ಇಂಡಿಯಾಗೆ ಯುವ ಆಲ್‌ರೌಂಡರ್ ರಿ ಎಂಟ್ರಿ

ಭಾರತ ಮತ್ತು ಸೌತ್ ಆಫ್ರಿಕಾ ನಡುವಣ 2 ಪಂದ್ಯಗಳ ಟೆಸ್ಟ್ ಸರಣಿಯ ಮೊದಲ ಮ್ಯಾಚ್ ಮುಗಿದಿದೆ. ಕೊಲ್ಕತ್ತಾದಲ್ಲಿ ನಡೆದ ಈ ಪಂದ್ಯದಲ್ಲಿ ಸೌತ್ ಆಫ್ರಿಕಾ ತಂಡ 30 ರನ್‌ಗಳ ಜಯ ಸಾಧಿಸಿದೆ. ಇನ್ನು ದ್ವಿತೀಯ ಪಂದ್ಯವು ನವೆಂಬರ್ 22 ರಿಂದ ಶುರುವಾಗಲಿದ್ದು, ಈ ಪಂದ್ಯಕ್ಕೆ ಗುವಾಹಟಿಯ ಬರ್ಸಪಾರ ಸ್ಟೇಡಿಯಂ ಆತಿಥ್ಯವಹಿಸಲಿದೆ.

ಭಾರತ ಮತ್ತು ಸೌತ್ ಆಫ್ರಿಕಾ ನಡುವಣ ದ್ವಿತೀಯ ಟೆಸ್ಟ್ ಪಂದ್ಯವು ನವೆಂಬರ್ 22 ರಿಂದ ಶುರುವಾಗಲಿದೆ. ಗುವಾಹಟಿಯ ಬರ್ಸಪಾರ ಸ್ಟೇಡಿಯಂನಲ್ಲಿ ಜರುಗಲಿರುವ ಈ ಪಂದ್ಯಕ್ಕೂ ಮುನ್ನ ಯುವ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಭಾರತ ತಂಡವನ್ನು ಸೇರಿಕೊಳ್ಳಲಿದ್ದಾರೆ.

ಸೌತ್ ಆಫ್ರಿಕಾ ವಿರುದ್ಧದ 2 ಪಂದ್ಯಗಳ ಟೆಸ್ಟ್ ಸರಣಿಗೆ ನಿತೀಶ್ ಕುಮಾರ್ ರೆಡ್ಡಿ ಅವರನ್ನು ಆಯ್ಕೆ ಮಾಡಲಾಗಿತ್ತು. ಆದರೆ ಕೊಲ್ಕತ್ತಾದಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯಕ್ಕೂ ಮುನ್ನ ಅವರನ್ನು ತಂಡದಿಂದ ರಿಲೀಸ್ ಮಾಡಲಾಗಿತ್ತು. ಹೀಗಾಗಿ ಅವರು ಸೌತ್ ಆಫ್ರಿಕಾ ಎ ವಿರುದ್ಧದ ಏಕದಿನ ಪಂದ್ಯದಲ್ಲಿ ಭಾರತ ಎ ಪರ ಕಣಕ್ಕಿಳಿದಿದ್ದರು. ಇದೀಗ ದ್ವಿತೀಯ ಟೆಸ್ಟ್ ಪಂದ್ಯಕ್ಕೂ ಮುನ್ನ ನಿತೀಶ್ ಕುಮಾರ್ ರೆಡ್ಡಿಗೆ ಬುಲಾವ್ ನೀಡಲಾಗಿದೆ. ಟೀಮ್ ಇಂಡಿಯಾ ನಾಯಕ ಶುಭ್‌ಮನ್ ಗಿಲ್ ಕುತ್ತಿಗೆ ನೋವಿನ ಸಮಸ್ಯೆಯಿಂದ ಬಳಲುತ್ತಿದ್ದು, ಹೀಗಾಗಿ 2ನೇ ಟೆಸ್ಟ್ ಪಂದ್ಯದಲ್ಲಿ ಕಣಕ್ಕಿಳಿಯುವುದುದು ಅನುಮಾನ ಎನ್ನಲಾಗಿದೆ. ಇದರ ಬೆನ್ನಲ್ಲೇ ನಿತೀಶ್ ಕುಮಾರ್ ರೆಡ್ಡಿಗೆ ಭಾರತ ತಂಡವನ್ನು ಸೇರಿಕೊಳ್ಳುವಂತೆ ಸೂಚಿಸಲಾಗಿದೆ. ಹೀಗಾಗಿ ಗುವಾಹಟಿಯಲ್ಲಿ ನಡೆಯಲಿರುವ ದ್ವಿತೀಯ ಟೆಸ್ಟ್ ಪಂದ್ಯದಲ್ಲಿ ಗಿಲ್ ಬದಲಿಗೆ ನಿತೀಶ್ ಕುಮಾರ್ ರೆಡ್ಡಿ ಕಣಕ್ಕಿಳಿಯುವ ಸಾಧ್ಯತೆಯಿದೆ.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**